
॥ ಶ್ರೀರಾಮ ಸಮರ್ಥ ॥

ಪರಮಾರ್ಥ ಪ್ರದೀಪ



ಚೈತನ್ಯ ಪ್ರಕಾಶನ

ಚೈತನ್ಯಾಶ್ರಮ, ಹೆಬ್ಬಾಳ

580 117


ಪರಮಾರ್ಥ ಪ್ರದೀಪ

ಮುದ್ರಕರು :
ಕೆ. ಇ. ಬೋರ್ಡ್ಸ್ ಮುದ್ರಣಾಲಯ
ಧಾರವಾಡ

ಪ್ರಕಾಶಕರು :
ಚೈತನ್ಯ ಪ್ರಕಾಶನ
ಚೈತನ್ಯಾಶ್ರಮ, ಹೆಬ್ಬಳ್ಳಿ

ಬೆಲೆ : ಎರಡೂವರೆ ರೂಪಾಯಿ

ಶ್ರೀರಾಮ ಸಮರ್ಥ



ಪರಮಾರ್ಥ ಪ್ರದೀಪ

★

ಲೇಖಕರು :
ಶ್ರೀ. ಕೆ. ವಿ. ಬೆಲಸರೆ

ಅನುವಾದಕರು :
ಶ್ರೀ. ದತ್ತಾತ್ರೇಯ ಅವಧೂತ

ಚೈತನ್ಯ ಪ್ರಕಾಶನ
ಚೈತನ್ಯಾಶ್ರಮ
ಹೆಬ್ಬಳ್ಳಿ-580117

— ಶ್ರೀ ರಾಮ —

ಅನುವಾದಕನ ನಿವೇದನೆ

ಚೈತನ್ಯ ಪ್ರಕಾಶನದ ಐದನೇ ಪ್ರಕಾಶನವಾದ "ಪರಮಾರ್ಥ ಪ್ರದೀಪ"ವೆಂಬ ಪುಸ್ತಕವನ್ನು ಪರಮಾರ್ಥ ಜಿಜ್ಞಾಸುಗಳ ಕರಕಮಲಗಳಲ್ಲಿ ಸಮರ್ಪಿಸಲು ಸಂತೋಷವೆನಿಸುತ್ತದೆ. ಪರಮಾರ್ಥವೆಂದರೆ ಶ್ರೇಷ್ಠ ಜ್ಞಾನದಿಂದ ನಿರ್ಮಾಣವಾದ ದಿವ್ಯ ಜೀವನದ ಸ್ವರೂಪ. ಮನುಷ್ಯ ಜೀವನವು ಕೇವಲ ಬಾಹ್ಯ ವ್ಯಾವಹಾರಿಕತೆಯ ವಿಶೇಷತೆಯಿಂದಲೇ ಶ್ರೇಷ್ಠವಾದದ್ದೆನಿಸಿಕೊಳ್ಳುವದಿಲ್ಲ. ಅಂದರೆ ಶಾರೀರಿಕ, ಪಾರಿವಾರಿಕ, ಆರ್ಥಿಕ ಅಥವಾ ಸಾಮಾಜಿಕ ಸುಸ್ಥಿತಿಯಿಂದಲೆ ಮನುಷ್ಯನಿಗೆ ನಿಜವಾದ ಶ್ರೇಷ್ಠತೆ ಬರಲಾರದು. ಮನುಷ್ಯನ ಶ್ರೇಷ್ಠತೆಯು ಅವನ ಮನಸ್ಸಿನ ಶ್ರೇಷ್ಠತೆಯನ್ನವಲಂಬಿಸಿಕೊಂಡಿರುತ್ತದೆ. ಮನಸ್ಸಿನ ಶ್ರೇಷ್ಠತೆಯು ಅವನ ಜ್ಞಾನದ ಶ್ರೇಷ್ಠತೆಯನ್ನವಲಂಬಿಸಿಕೊಂಡಿರುತ್ತದೆ. ಜ್ಞಾನದ ಶ್ರೇಷ್ಠತೆಯು ಜ್ಞಾತಾ ಹಾಗೂ ಜ್ಞೇಯಗಳ ಐಕ್ಯತೆಯಿಂದ ಉಂಟಾಗುವದರಲ್ಲಿರುತ್ತದೆ. ಈ ಐಕ್ಯತೆಯಲ್ಲಿಯೇ ದಿವ್ಯ ಜ್ಞಾನದ ಉದಯದೊಂದಿಗೆ ಪರಮಾನಂದದ ಅನುಭವ ಬರುತ್ತದೆ. ಈ ಪರಮಾನಂದದಿಂದ

ತುಂಬಿಕೊಂಡ ಜೀವನವೇ ಪಾರಮಾರ್ಥಿಕ ಜೀವನವೆನ್ನಿಸಿಕೊಳ್ಳುತ್ತದೆ.

ಈ ರೀತಿಯ ಪಾರಮಾರ್ಥಿಕ ಜೀವನಕ್ಕಾಗಿ ದೇಹ ಹಾಗೂ ಪರಿಸ್ಥಿತಿಯನ್ನು ಕುರಿತು ಮಾಡುವ ಸಾಧನೆಗಿಂತಲೂ ಮನಸ್ಸನ್ನು ಕುರಿತು ಮಾಡುವ ಸಾಧನೆ ಹೆಚ್ಚು ಮಹತ್ವದ್ದಾಗಿರುತ್ತದೆ. ಅದರೂ ಕೂಡ ನಾವು ಈಗಿರುವ ಸ್ಥಿತಿಯಿಂದ ಪಾರಮಾರ್ಥಿಕ ಜೀವನದ ಪರಮೋಚ್ಚ ಅವಸ್ಥೆಯನ್ನು ತಲುಪಬೇಕಾದರೆ ಯಾವ ವಿಷಯಗಳನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಶ್ರೀ ಬೆಲಸರೆಯವರು ಬರೆದ ಈ "ಪರಮಾರ್ಥ ಪ್ರದೀಪ"ವು ದಾರಿದೀಪವಾಗುವದೆಂಬುದರಲ್ಲಿ ಸಂಶಯವಿಲ್ಲ. ಶಾಸ್ತ್ರಶುದ್ಧ, ಅನುಭವಸಿದ್ಧ ಹಾಗೂ ಸಂತಮಾನ್ಯ ವಿಚಾರಗಳನ್ನೇ ಸಾಧಕನಿಗೆ ಪರಮಾರ್ಥದ ಮಾರ್ಗದಲ್ಲಿ ಅನುಕೂಲವಾಗುವಂತೆ ಒಂದು ನಿಶ್ಚಿತ ಕ್ರಮದಲ್ಲಿ ಬರೆದದ್ದು ನಿಜವಾಗಿಯೂ ವಿಶೇಷವಾದದ್ದು. ಸಾಮಾನ್ಯ ಜಿಜ್ಞಾಸುಗಳಿಗೂ ಅರ್ಥವಾಗುವ ರೀತಿಯಲ್ಲಿ ಬರೆದ ಈ ಪುಸ್ತಕವು ಅಜ್ಞಾನಾಂಧಕಾರದಲ್ಲಿರುವ ಮುಮುಕ್ಷುಗಳಿಗೆ ಮೋಕ್ಷದವರೆಗೆ ಮುಟ್ಟಿಸಲು ಅಖಂಡ ಪ್ರದೀಪವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಶ್ರೀ ಮಹಾರಾಜರ ಅನುಗ್ರಹದಿಂದಲೇ ಈ ಪುಸ್ತಕವು ಕನ್ನಡ ಭಾಷೆಯಲ್ಲಿ ಪ್ರಾಪ್ತವಾಯಿತೆಂದು ಪ್ರಾಮಾಣಿಕವಾಗಿ ಹೇಳುತ್ತೇವೆ. ಈ ಪುಸ್ತಕವು ಸಾಧಕರಿಗೆ ಕಡಿಮೆ ಬೆಲೆಯಲ್ಲಿ

ಪ್ರಾಪ್ತವಾಗಲು ಅನುಕೂಲವಾಗುವಂತೆ ಶ್ರೀ. ಪಿ. ಎಸ್. ಕುಲಕರ್ಣಿ ಹಾಗೂ ಅವರ ಧರ್ಮಪತ್ನಿಯವರು ಈ ಪುಸ್ತಕ ಪ್ರಕಾಶನದ ಸೇವೆಯನ್ನು ಶ್ರೀ ಮಹಾರಾಜರ ಪಾದಪದ್ಮಗಳಲ್ಲಿ ಸಮರ್ಪಿಸಿರುತ್ತಾರೆ. ಶ್ರೀ ಮಹಾರಾಜರು ಅವರಿಬ್ಬರನ್ನು ಹಾಗೂ ಅವರ ಎಲ್ಲ ಪರಿವಾರದವರನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ. ಶ್ರೀ. ವ್ಹಿ. ಬಿ. ಕುಲಕರ್ಣಿ ಹಾಗೂ **ಅವರ** ಸಹಕಾರಿಗಳು ಈ ಪುಸ್ತಕ ಮುದ್ರಣದಲ್ಲಿ ವಿಶೇಷ ಪರಿಶ್ರಮ ಪಟ್ಟು ಇದನ್ನು ಅತಿ ಶೀಘ್ರವಾಗಿ ಹಾಗೂ ಅಚ್ಚುಕಟ್ಟಾಗಿ ಮಾಡಿಕೊಟ್ಟಿರುತ್ತಾರೆ. ಶ್ರೀ ಮಹಾರಾಜರು ಅವರೆಲ್ಲರನ್ನು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇವೆ. ಈ ಪ್ರಕಾಶನ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸೇವೆ ಸಲ್ಲಿಸಿದ ಎಲ್ಲ ಭಕ್ತರನ್ನು ಶ್ರೀ ಮಹಾರಾಜರು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇವೆ.

ಗುರುಪೌರ್ಣಿಮಾ
ಹೆಬ್ಬಳ್ಳಿ

ಸದ್ಗುರು ವಿಧೇಯ
ದತ್ತಾವಧೂತ

ಪರಮಾರ್ಥ ಪ್ರದೀಪ

ವಿಷಯ ಪ್ರವೇಶ

ಮನುಷ್ಯನ ಅಂತರಂಗದಲ್ಲಿರುವ "ಅಹಂ" ಎಂಬ ಭಾವನೆಯ ರೂಪದಲ್ಲಿ ಸ್ಫುರಿಸುವ, ಆತ್ಮದಿಂದ ಉಗಮ ಹೊಂದಿದ, ಸರ್ವಮಂಗಲ ಶಕ್ತಿಗಳ, ಪವಿತ್ರ ಪ್ರವೃತ್ತಿಗಳ ಹಾಗೂ ದಿವ್ಯ ಅನುಭವಗಳ ಬೋಧವು ಪರಮಾರ್ಥ ಎಂಬ ಶಬ್ದದಿಂದ ಆಗುತ್ತದೆ. ಎಲ್ಲರ ಮೇಲೆ ಸ್ವಾರ್ಥ ರಹಿತ ಪ್ರೇಮದ ಮಳೆಗರೆಯುವ ಸಾಧುತ್ವವೇ ಈ ಪರಮಾರ್ಥದ ಪ್ರಾಣವಾಗಿರುತ್ತದೆ. ಪರಮಾರ್ಥವೆಂದರೆ ಆತ್ಮಜ್ಞಾನದಿಂದ ಕೂಡಿಕೊಂಡ ಒಂದು ಪವಿತ್ರ ಹಾಗೂ ಪರಮ ಮಂಗಲವಾದ ಜೀವನ ಪದ್ಧತಿಯಾಗಿರುತ್ತದೆ. ಪರಮಾರ್ಥಿ ಮನುಷ್ಯನು ಯಾವದೇ ಪರಿಸ್ಥಿತಿಯಲ್ಲಿ ಸಹಜವಾದ ನಿರ್ಭಯತೆಯಿಂದ ಅತ್ಯಂತ ಶಾಂತವಾಗಿರುತ್ತಾನೆ. ದೇಹದ ಯಾವದೇ ಅವಸ್ಥೆಯಲ್ಲಿ ಅವನ ಆತ್ಮಾನಂದದ ಉನ್ಮತ್ತತೆಯು ಕಿಂಚಿತ್ತೂ ಕಡಿಮೆಯಾಗುವದಿಲ್ಲ. ಅದೇ ರೀತಿ ಅವನು ಎಲ್ಲ ಜೀವಿಗಳ ಮೇಲೆ ಆತ್ಮೀಯತೆಯಿಂದ ಅತ್ಯಂತ ನಿಸ್ವಾರ್ಥ ಪ್ರೇಮ ಮಾಡಿ ಅಪರ ದುಃಖ ಪರಿಹಾರ ಮಾಡುವದರಲ್ಲಿ ಯಾವಾಗಲೂ ತತ್ಪರನಾಗುತ್ತಾನೆ.

ವಾಸ್ತವಿಕವಾಗಿ ಪರಮಾರ್ಥದ ಸಾಕ್ಷಾತ್ ಸಂಬಂಧವು ಮನುಷ್ಯನ ಅಂತರಂಗದೊಂದಿಗೆ ವಿಶೇಷ ವಾಗಿ ಅವನ ಮನಸ್ಸಿನೊಂದಿಗೆ ಹಾಗೂ ಆತ್ಮದೊಂದಿಗೆ ಇರುವದರಿಂದ ಅದು ಅದೃಶ್ಯವಾಗಿರುವದೇನೋ ನಿಜ. ಆದರೆ ನಮ್ಮ ಸಮಗ್ರ ಜೀವನವನ್ನು ಆತ್ಮಾನಂದದಿಂದ ಅಥವಾ ಸ್ವಾನಂದದಿಂದ ಸಮೃದ್ಧಗೊಳಿಸುವ ಕಲೆ ಸ್ವಾಧೀನವಾಗುವದಕ್ಕಾಗಿ ಸಾಧನೆಯು ಅತ್ಯಾವಶ್ಯಕ ವಾಗಿರುತ್ತದೆ ಹಾಗೂ ಆ ಸಾಧನೆಯಲ್ಲಿ ಅಥವಾ ಆತ್ಮಾ ಭ್ಯಾಸದಲ್ಲಿ ಪರಮಾರ್ಥವು ದೃಶ್ಯರೂಪ ಧಾರಣೆ ಮಾಡು ತ್ತದೆ ಎಂಬುದು ಕೂಡ ಅಷ್ಟೇ ನಿಜವಾದದ್ದು. ಆದ್ದ ರಿಂದ ಪರಮಾರ್ಥವು ಕೇವಲ ಮಾತನಾಡುವದಾಗಲಿ ಅಥವಾ ಹೇಳುವದಾಗಲಿ ಇರುವದಿಲ್ಲ. ಆದರೆ ಅದು ನಿತ್ಯ ಜೀವನದಲ್ಲಿ ಪ್ರತ್ಯಕ್ಷ ಬಾಳುವದಿರುತ್ತದೆ. ಹಾಗಾ ದರೆ ಪರಮಾರ್ಥವನ್ನು ಕುರಿತು ಬರೆಯುವ ಪ್ರಯೋಜನ ವೇನು ? ಇದರ ಸಮಾಧಾನವು ಮುಂದೆ ಹೇಳಿದಂತೆ ಇರುತ್ತದೆ. ದೇಹದಿಂದ ಮನುಷ್ಯರೆಂದು ವ್ಯವಹರಿ ಸುವ ನಾವು ಮನಸ್ಸಿನಿಂದ ಮನುಷ್ಯತ್ವ ಉಳ್ಳವರಾಗಿ ಅಂದರೆ ಸದಸದ್ವಿವೇಕ ಉಳ್ಳವರಾಗಿ ಬಾಳುವದಿಲ್ಲ. ಆದ್ದರಿಂದಲೇ ಜೀವನದೊಂದಿಗೆ ಸಹಜವಾಗಿ ತುಂಬಿ ಕೊಂಡಿರುವ ಸ್ವಾನಂದವು ನಮ್ಮ ಅನುಭವದ ಕ್ಷೇತ್ರದಲ್ಲಿ ಪ್ರವೇಶಿಸುವದಿಲ್ಲ. ಇಷ್ಟೇ ಅಲ್ಲದೇ ಸ್ವಾನಂದದ ಲೋಪವಾದ್ದರಿಂದಲೇ ಮನಸ್ಸಿಗೆ ಬೇಡವಾದ ದುಃಖ

ವನ್ನು ಅನಿವಾರ್ಯವಾಗಿ ಅನುಭವಿಸಬೇಕಾಗಿ ಬರುತ್ತದೆ. ಆಗಂತುಕವಾಗಿ ಜೀವನದಲ್ಲಿ ಪ್ರವೇಶಿಸಿದ ಈ ದುಃಖವನ್ನು ಕಳೆದುಕೊಳ್ಳದ ಹೊರತು ಮನುಷ್ಯನ ಮನಸ್ಸಿಗೆ ಸುಮ್ಮನೆ ಕೂಡ್ರಲಾಗುವದಿಲ್ಲ. ದುಃಖವನ್ನು ದೂರ ಮಾಡಿ ನಮ್ಮ ಸ್ವಾಭಾವಿಕವಾದ ಹಾಗೂ ಹಕ್ಕಿನ ಸ್ವಾನಂದವನ್ನು ತಿರುಗಿಹಸ್ತಗತ ಮಾಡಿಕೊಳ್ಳುವದಕ್ಕಾಗಿ ಮೊದಲು ಆತ್ಮಾನಾತ್ಮ ವಿವೇಕವಾಗಬೇಕಾಗುತ್ತದೆ. ಮನುಷ್ಯ ಜೀವನವನ್ನು ಕುರಿತು ಸರಳವಾದ, ಸುಸಂಗತವಾದ ಹಾಗೂ ಸರ್ವಾಂಗೀಣ ವಿಚಾರ ಮಾಡುತ್ತ ಮಾಡುತ್ತ ಅದರಲ್ಲಿಂದಲೇ ಆತ್ಮಾನಾತ್ಮ ವಿವೇಕ ತಾನಾಗಿಯೇ ಉದಯವಾಗುತ್ತದೆ ಹಾಗೂ ಪರಮಾರ್ಥದ ಮಾರ್ಗವು ಸ್ಪಷ್ಟವಾಗಿ ಕಾಣತೊಡಗುತ್ತದೆ. ಆದ್ದರಿಂದ ಪರಮಾರ್ಥ ಹೇಳುವದು ಅಥವಾ ಬರೆಯುವದೆಂದರೆ ಸ್ವಾನಂದದಿಂದ ತುಂಬಿದ ದಿವ್ಯ ಸುಂದರ ಜೀವನದತರ್ಕ ಪ್ರಧಾನ ಪ್ರತಿಪಾದನೆ ಮಾಡುವದು. ಹಾಗೂ ಇದು ಆವಶ್ಯಕವಾಗಿರುತ್ತದೆ. ಈ ಪ್ರತಿಪಾದನೆಯನ್ನು ಪ್ರಾರಂಭಿಸುವಾಗ ಮನುಷ್ಯ ಜೀವನದ ಐದು ಸ್ವತಃ ಸಿದ್ಧವಾದ ಅಂಗಗಳನ್ನು ಲಕ್ಷ್ಯದಲ್ಲಿಡಬೇಕು. ೧) ನಾನು ಇರುತ್ತೇನೆ. ೨) ಜಗತ್ತು ಇರುತ್ತದೆ. ೩) ಜಗತ್ತಿನಲ್ಲಿ ನನ್ನಂತಹ ಅನೇಕ ನಾನು (ಅಹಂ) ಗಳು ಇರುತ್ತವೆ. ೪) ಜೀವನದಲ್ಲಿ ದುಃಖವಿರುತ್ತದೆ. ಆದರೆ ೫) ಆ ದುಃಖವು ಯಾರಿಗೂ ಬೇಕಾಗಿಲ್ಲ.

ಇವುಗಳ ಮೊದಲಿನ ಮೂರು ಅಂಗಗಳಲ್ಲಿ ಮನುಷ್ಯನ ದುಃಖದ ಕಾರಣವು ಸಿಗುತ್ತದೆ. ಉದಾಹರಣೆಗೆ "ಜಗತ್ತು ಇರುತ್ತದೆ" ಎಂಬ ಅಂಗವನ್ನು ಮೊದಲು ತೆಗೆದುಕೊಳ್ಳೋಣ. ಅತಿವೃಷ್ಟಿ, ಅನಾವೃಷ್ಟಿ, ಅತ್ಯಂತ ಬಿಸಿಲು, ಅತ್ಯಂತ ಛಳಿ, ಮಹಾಪೂರ, ಆಣೆ ಕಲ್ಲುಗಳ ಮಳೆ, ಭೂಕಂಪ, ಜ್ವಾಲಾಮುಖಿಯ ಉದ್ರೇಕ, ಬಿರುಗಾಳಿ, ಮುಂತಾದ ನಿಸರ್ಗ ನಿರ್ಮಿತ ಉತ್ಪಾತಗಳಿಂದ ಮನುಷ್ಯನಿಗೆ ದುಃಖ ಅನುಭವಿಸ ಬೇಕಾಗಿ ಬರುತ್ತದೆ.

ಈಗ ಜಗತ್ತಿನಲ್ಲಿ ನನ್ನಂತಹ ಅನೇಕ "ನಾನು" (ಅಹಂ) ಗಳು ಇರುತ್ತವೆ ಎಂಬ ಅಂಗವನ್ನು ತೆಗೆದು ಕೊಳ್ಳೋಣ. ನಮ್ಮ ಸುತ್ತಲೂ ಇರುವ ಜನರು ಅತ್ಯಂತ ಸ್ವಾರ್ಥತೆಯಿಂದ ವ್ಯವಹರಿಸುತ್ತಿರುವದರಿಂದ ಬಹಳ ಪ್ರಮಾಣದಲ್ಲಿಯ ಹಿಂಸೆ, ಅತ್ಯಂತ ದುಷ್ಟತೆ, ಅಮಾನುಷ ಛಲ, ಭಯಂಕರ ಅನ್ಯಾಯ, ಸಾಂಘಿಕ ಲಂಚ ಖೋರತನ, ಅತ್ಯಂತ ಬೆಲೆ ಏರಿಕೆ, ನಿರ್ಲಜ್ಜ ತೆಯ ಸೀಮೆಯನ್ನು ಸ್ಪರ್ಶಿಸುವ ಆರ್ಥಿಕ ಸಾಮಾಜಿಕ ಅಥವಾ ವಾಂಶಿಕ ವಿಷಮತೆ, ಇತ್ಯಾದಿ ಸಾಮಾಜಿಕ ಘಟನೆಗಳು ಮನುಷ್ಯಜೀವನವನ್ನು ಸುತ್ತಿಕೊಂಡಿರು ತ್ತವೆ. ಇದರಿಂದ ನಿರ್ಮಾಣವಾಗುವ ದುಃಖಗಳನ್ನು ಅನುಭವಿಸುತ್ತ ನಾವು ಅತ್ಯಂತ ಹತಬಲರಾಗುತ್ತೇವೆ.

ಕೊನೆಯದಾಗಿ "ನಾನು ಇರುತ್ತೇನೆ" ಎಂಬ

ಅಂಗ ವಿಚಾರ ಮಾಡೋಣ. ಅನಿವಾರ್ಯ ಕಾಮ ವಾಸನೆ. ಅನಿಯಂತ್ರಿತ ಕ್ರೋಧ, ಅಮರ್ಯಾದ ಲೋಭ. ಅಕಾರಣ ದ್ವೇಷ, ಅಧಿಕಾರದ ಹವ್ಯಾಸ. ಪ್ರತಿಷ್ಠೆಯ ಅಭಿಲಾಷೆ, ಘಾತಕ ಢೋಂಗುತನ, ಬೇಸರ ವಾಗುವಂತಹ ಆಲಸ್ಯ, ವ್ಯರ್ಥ ಅಭಿಮಾನ, ಅಳತೆ ಗೆಟ್ಟು ತಿನ್ನುವದು—ಕುಡಿಯುವದು, ಅರ್ಥವಿಲ್ಲದ ಹರಟೆ, ವ್ಯಸನದಲ್ಲಿ ಹಾಳಾಗುವದು, ಜೂಜು ಆಡು ವದು, ಮುಂತಾದವುಗಳಿಗೆ ವಶವಾಗಿ ಮನುಷ್ಯನು ತನ್ನ ದುಃಖವನ್ನು ತಾನೇ ನಿರ್ಮಾಣ ಮಾಡಿಕೊಳ್ಳು ತ್ತಾನೆ. ಹಾಗೂ ಅವುಗಳ ಸಹವಾಸದಿಂದ ತಾನೇ ಅವುಗಳ ದಾಸನಾಗುತ್ತಾನೆ.

ಮನುಷ್ಯ ಜೀವನದಲ್ಲಿಯ ಒಟ್ಟು ದುಃಖದಲ್ಲಿ ಎರಡು ಮೂರಾಂಶಕ್ಕಿಂತ ಹೆಚ್ಚಿನ ದುಃಖದ ಕಾರಣವು ಮೇಲಿನ ಲೆಕ್ಕದಂತೆ ಮನುಷ್ಯನ ಅವಿವೇಕದ, ತಪ್ಪು ನಡತೆಯ ಹಾಗೂ ಅತ್ಯಂತ ಸ್ವಾರ್ಥತೆಯಲ್ಲಿರುವದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ಮನುಷ್ಯ ಜೀವನದಲ್ಲಿಯ ದುಃಖವು ಸಂಪೂರ್ಣವಾಗಿ ಇಲ್ಲ ದಂತಾಗಿ ಅಲ್ಲಿ ಸುಖ ಹಾಗೂ ಸಮಾಧಾನ ತುಂಬಿಕೊಳ್ಳ ಬೇಕಾದರೆ ಮನುಷ್ಯನ ಸ್ವಾರ್ಥವು ಕ್ಷೀಣವಾಗುವ ದೊಂದೆ ನಿಶ್ಚಿತ ಹಾಗೂ ನಿಃಸ್ಸಂಶಯ ಉಪಾಯ ವಾಗಿರುತ್ತದೆ. ಅವಿವೇಕದಿಂದ ತುಂಬಿಕೊಂಡ ಮನುಷ್ಯನ ಬುದ್ಧಿಗೆ ನಿಜವಾದ 'ಸ್ವ' ಅಂದರೆ ನಿಜವಾದ 'ನಾನು'

ಯಾರು ಎಂಬುದು ತಿಳಿಯುವದಿಲ್ಲ. ಆದ್ದರಿಂದ ಸುಳ್ಳಿದ 'ನಾನು' ಎಂಬುದರ ಬೆನ್ನು ಹತ್ತಿ ಮನುಷ್ಯನು ಹೀನ ಸ್ವಾರ್ಥವನ್ನು ಪೋಷಿಸಿಕೊಳ್ಳುವ ಹಾಗೂ ಅದರಿಂದಲೇ ತನ್ನ ಹಾಗೂ ಬೇರೆಯವರ ಜೀವನದಲ್ಲಿ ನಾನಾ ಪ್ರಕಾರವಾದ ದುಃಖಗಳನ್ನುಂಟು ಮಾಡುತ್ತಾನೆ. ನಿಜವಾದ 'ನಾನು' (ಅಹಂ) ಯಾರೆಂಬುದನ್ನು ಗುರುತಿಸಿ ಎಲ್ಲರ ಮೇಲೆ ನಿರಪೇಕ್ಷ ಪ್ರೇಮವನ್ನು ಹೇಗೆ ಮಾಡಬೇಕು ಹಾಗೂ ತನ್ನ ಸಹಿತ ಎಲ್ಲರ ಜೀವನದಲ್ಲಿ ಶಾಂತಿ, ಸಂತೋಷ ಹಾಗೂ ಸಮಾಧಾನ ಹೇಗೆ ತುಂಬಬೇಕು ಎಂಬುದರ ತಾತ್ವಿಕ ವಿಚಾರ ಹಾಗೂ ಪ್ರತ್ಯಕ್ಷ ವ್ಯವಹಾರ ಕೇವಲ ಸಂತರೇ ತಿಳಿದು ಕೊಂಡಿರುತ್ತಾರೆ. ಸಂತರ ಈ ದಿವ್ಯ ಹಾಗೂ ಕಲ್ಯಾಣ ಕಾರಿಯಾದ ಜ್ಞಾನದ, ಅಂದರೆ ಪರಮಾರ್ಥದ ಸಾರ ರೂಪ ವರ್ಣನೆ ಮಾಡುವ ಇದೊಂದು ನಮ್ರ ಪ್ರಯತ್ನವಾಗಿರುತ್ತದೆ.

★ ಪ್ರದೀಪ ಒಂದು ★

ಪರಮಾರ್ಥವೆಂದರೇನು ?

ಮನುಷ್ಯನು ಪ್ರಾಣಿಯೇನೋ ನಿಜ. ಆದರೆ ಅವನು ಬುದ್ಧಿವಂತ ಪ್ರಾಣಿಯಾಗಿರುತ್ತಾನೆ. ಜೀವನದಲ್ಲಿ ಏನೇನು ನಮ್ಮ ಅನುಭವದಲ್ಲಿ ಬರುತ್ತದೆಯೋ ಅದರ ಅರ್ಥ

ವನ್ನು ತಿಳಿದುಕೊಳ್ಳುವದು ಬುದ್ಧಿಯ ನಿಜವಾದ ಕಾರ್ಯ ವಾಗಿರುತ್ತದೆ. ಆದರೆ ನಮಗೆ ತಿಳಿದ ಅರ್ಥವು ನಿಜವೋ ಸುಳ್ಳೋ ಅಪೂರ್ಣವೋ ಅಥವಾ ಸಂಪೂರ್ಣವೋ ಸಣ್ಣದೋ ಅಥವಾ ದೊಡ್ಡದೋ ಏಕಾಂಗಿಯೋ ಅಥವಾ ಸರ್ವಾಂಗೀಣವೋ ಆಗಿರುತ್ತದೆ. ನಾವು ಅನುಭವಿಸಿದ ಪ್ರಸಂಗಗಳ ನಿಮಿತ್ತದಿಂದ ಅಥವಾ ಆಯುಷ್ಯದಲ್ಲಿ ನಡೆದ ಘಟನೆಗಳ ಆಧಾರದಿಂದ ಮನುಷ್ಯ ಜೀವನದ ಯಾವ ದಾದರೊಂದು ಅಂಗದ ನಿಜವಾದ ಅರ್ಥವನ್ನು ತಿಳಿದು ಕೊಳ್ಳುವದೆಂದರೆ ಇದು ಸಣ್ಣ ಅರ್ಥವಾಗಿರುತ್ತದೆ. ಆದರೆ ಜೀವನದ ಎಲ್ಲ ಅಂಗಗಳ ಸಂಪೂರ್ಣ ನಿಜವಾದ ಅರ್ಥವು ತಿಳಿಯುವದು ಇದು ಮಹಾನ್ ಅರ್ಥ ಅಥವಾ ಪರಮ ಅರ್ಥವಾಗಿರುತ್ತದೆ. ಅರ್ಥವು ಅಪೂರ್ಣವಾಗಿ ರಲಿ ಅಥವಾ ಸಂಪೂರ್ಣವಾಗಿರಲಿ ಅದರಲ್ಲಿಂದ ಜ್ಞಾನವು ಉದಯವಾಗುತ್ತದೆ. ಆದ್ದರಿಂದಲೇ ಪರಮ ಅರ್ಥ ಎಂದರೆ ಪರಮಾರ್ಥ. ಇದು ಪೂರ್ಣ ಜ್ಞಾನಸ್ವರೂಪ ವಾಗಿರುತ್ತದೆ. ಜೀವನದಲ್ಲಿಂದ ಉದಯವಾಗುವ ಹಾಗೂ ಅರ್ಥಮಯವಾದ ಜ್ಞಾನವು ಜೀವಂತವಾಗಿರುತ್ತದೆ. ಗತಿಮಾನ್ ಹಾಗೂ ಸಾಮರ್ಥ್ಯ ಸಂಪನ್ನವಾಗಿರುತ್ತದೆ. ಸಾಮರ್ಥ್ಯವು ಶಕ್ತಿರೂಪವಾಗಿರುತ್ತದೆ. ಆದ್ದರಿಂದ ಜ್ಞಾನದಿಂದ ಜ್ಞೇಯದಲ್ಲಿ ಹೇಗೆ ಬೇಕೋ ಹಾಗೆ ಪರಿ ವರ್ತನೆ ಮಾಡಲು ಬರುತ್ತದೆ. ವಿಜ್ಞಾನದಲ್ಲಿಯ ಸಾಮರ್ಥ್ಯದಿಂದ ಹೊರಗಿನ ಜಗತ್ತನ್ನು ಪರಿವರ್ತನೆ

ಗೊಳಿಸಲು ಬರುತ್ತದೆ. ಆದರೆ ಪರಮಾರ್ಥ ಜ್ಞಾನದಲ್ಲಿ ಅಂದರೆ ಆತ್ಮಜ್ಞಾನದಲ್ಲಿರುವ ಸಾಮರ್ಥ್ಯದಿಂದ ಮನುಷ್ಯನ ಒಳಗಿನ ಜಗತ್ತನ್ನು ಅಥವಾ ಅವನ ವಾಸನಾರೂಪ ಅಂತರಂಗವನ್ನು ಬದಲುಗೊಳಿಸಲು ಬರುತ್ತದೆ. ಸ್ವಾರ್ಥದಿಂದ ತುಂಬಿತುಕುಳುವ ಮನುಷ್ಯರ ಅಂತರಂಗವನ್ನು ಆಮೂಲಾಗ್ರ ಶುದ್ಧಗೊಳಿಸಿ ಅವನ್ನು ಸಂಪೂರ್ಣ ಸ್ವಾರ್ಥರಹಿತ ಮಾಡುವವರಲ್ಲಿ ಪರಮಾರ್ಥಜ್ಞಾನದ ನಿಜವಾದ ಪ್ರಭಾವವು ಕಂಡುಬರುತ್ತದೆ. ಮನುಷ್ಯ ಜೀವನದಲ್ಲಿ ಶುದ್ಧ ಬುದ್ಧಿಗೆ ಎಷ್ಟು ಮಹತ್ವವಿರುತ್ತದೆ ಎಂಬುದನ್ನು ಯಾರಿಗೂ ಹೇಳಬೇಕಾಗಿಲ್ಲ. ಶುದ್ಧ ಬುದ್ಧಿಯಿಂದ ಉದಯ ಹೊಂದಿದ ವೈಚಾರಿಕ ಬಲದಿಂದ ಪ್ರಗಟವಾಗಿ ಜೀವನು ಶಿವನಾಗುತ್ತಾನೆ. ಪಂತನು ಸಂತನಾಗುತ್ತಾನೆ. ಅಂತರಂಗದಲ್ಲಿ ಇಂಥ ಪರಿವರ್ತನೆಯನ್ನುಂಟುಮಾಡುವ ಈ ಜ್ಞಾನವು ಹೇಗೆ ಹಸ್ತಗತಮಾಡಿಕೊಳ್ಳಬೇಕು. ಹಾಗೂ ನಮ್ಮ ಜೀವನವನ್ನು ಸ್ವಾನಂದದಿಂದ ಹೇಗೆ ತುಂಬಿಕೊಳ್ಳಬೇಕು ಎಂಬುದನ್ನು ಸ್ವಲ್ಪದರಲ್ಲಿ ಹೇಳುವದಕ್ಕಾಗಿಯೇ ಈ ಪಾತರೂಪಿ ಪ್ರದೀಪವನ್ನು ಪ್ರಜ್ವಲಿತಗೊಳಿಸಲಾಗಿದೆ.

★ ಪ್ರದೀಪ ಎರಡು ★

ಪ್ರತಿಯೊಬ್ಬನಿಗೆ ಪರಮಾರ್ಥ ಬೇಕು

ಮನುಷ್ಯ ಜೀವನದಲ್ಲಿಯ ಒಂದು ಸನಾತನ ವಿರೋಧಾಭಾಸ ಏನಿರುವದೆಂದರೆ ಯಾವಾಗಲೂ

ಎಲ್ಲಿಯೂ, ಯಾವದೇ ರೀತಿಯ ದುಃಖವು ಮನುಷ್ಯನಿಗೆ ಬೇಡವಾಗಿರುತ್ತದೇನೋ ನಿಜ. ಆದರೂ ಯಾವಾಗ ಎಲ್ಲಿ ಹಾಗೂ ಯಾವ ದುಃಖವು ಮನುಷ್ಯನ ಪಾಲಿಗೆ ಬರತ್ತದೆ ಎಂಬುದರ ನಿಯಮವಿರುವದಿಲ್ಲ. ಜೀವನದ ಯಾವದೇ ಕ್ಷೇತ್ರದಲ್ಲಿಯ ಹಾಗೂ ಅವಸ್ಥೆಯಲ್ಲಿಯ ಸ್ತ್ರೀ ಅಥವಾ ಪುರುಷರಿಗೆ ಏನಾದರೊಂದು ದುಃಖವು ಅವರ ಇಚ್ಛೆಯ ವಿರುದ್ಧ ಅನುಭವಿಸಲೇ ಬೇಕಾಗುತ್ತದೆ. ಯಾವಾಗ ಯಾವ ದುಃಖವು ನಮ್ಮ ಮುಂದೆ ಬಂದು ನಿಲ್ಲುವದೆಂಬುವದರ ನಿಶ್ಚಯವಿಲ್ಲದ್ದಂದ ಮನುಷ್ಯನ ಮನಸ್ಸಿನ ಮೇಲೆ ನಿರಂತರ ಒಂದು ಪ್ರಕಾರದ ಬಿಗುವು ಇರುತ್ತದೆ. ಈ ಬಿಗುವಿನಿಂದಲೇ ಭಯ ಹಾಗೂ ಚಿಂತೆ ಹುಟ್ಟುತ್ತವೆ. ಹಾಗೂ ಅವುಗಳ ಮೂಲಕ ಅಸ್ಥಿರತೆ, ನಿರಾಶತೆ, ಅರ್ಥಹೀನತೆ ಹಾಗೂ ವಿಮನಸ್ಕತೆ ಎಂಬ ದೋಷಗಳಿಂದ ಮನುಷ್ಯನ ಜೀವನವು ವ್ಯಾಪಿಸಿ ಹೋಗುತ್ತದೆ. ಒಬ್ಬ ಮನುಷ್ಯನು ತನ್ನ ಮನೆಯಲ್ಲಿಯ ಕೌಟುಂಬಿಕ ಜೀವನದಲ್ಲೇ ಆಗಲಿ ಅಥವಾ ಮನೆಯ ಹೊರಗಿನ ಸಾಮಾಜಿಕ ಸಮೂಹ ಜೀವನದಲ್ಲೇ ಆಗಲಿ ಸಜ್ಜನ ಹಾಗೂ ಸುಖಿ ವ್ಯಕ್ತಿ ಎಂದು ಅನ್ನಿಸಿಕೊಳ್ಳುತ್ತಿರಬಹುದು, ಅಲ್ಲದೇ ಪರಂಪರೆಯಿಂದ ಲೋಕ ಮಾನ್ಯವಾದ ಸಾಮಾನ್ಯ ಸತ್ಕರ್ಮಗಳನ್ನು ವ್ಯವಸ್ಥಿತವಾಗಿ ಆಚರಿಸುತ್ತಿರಬಹುದು. ತನ್ನ ಹಾಗೂ ಕುಟುಂಬಗಳ ಶರೀರ ಯಾತ್ರೆಯು ಆಮರಣ ಸುಸ್ಥಿತಿಯಲ್ಲಿ ಇರಲು

ಸಾಕಾಗುವಷ್ಟು ಆರ್ಥಿಕ ಸ್ವಸ್ಥತೆ ಕೂಡ ಇರಬಹುದು. ಆದರೆ ಜೀವನದ ಸಂಪೂರ್ಣ ಅರ್ಥ ತಿಳಿಯದೇ ಇದ್ದದ್ದರಿಂದ ಅಥವಾ ತಿಳಿದುಕೊಳ್ಳುವ ಪ್ರಯತ್ನ ಯಾವಾಗಲೂ ಮಾಡದೇ ಇದ್ದದ್ದರಿಂದ ಅಂದರೆ ಪರಮಾರ್ಥ ಆಚರಿಸದೇ ಇರುವದರಿಂದ, ಜೀವನದಲ್ಲಿಯ ದುಃಖಗಳು ಮೈಮೇಲೆ ಬಂದು ಬಿದ್ದವೆಂದರೆ ಮನುಷ್ಯನ ಸಮಾಧಾನವು ಭಂಗವಾಗುತ್ತದೆ. ಪರಿಣಾಮದಲ್ಲಿ ಪ್ರಾಪಂಚಿಕ ಅನುಕೂಲತೆ ಇದ್ದರೂ ಕೂಡ ಸಾಮಾನ್ಯ ಮನುಷ್ಯನು ಅಂತಕಾಲದಲ್ಲಿ ಈ ಜಗತ್ತನ್ನು ಬಿಟ್ಟು ಹೋಗುವಾಗ ಕೃತಾರ್ಥ ಭಾವನೆಯಿಂದ ಹಾಗೂ ಶಾಂತ ಮನಸ್ಸಿನಿಂದ ಹೋಗಲಾರನು. ಪ್ರಾಪಂಚಿಕ ಪರಿಸ್ಥಿತಿಯು ಹೇಗೇ ಇದ್ದರೂ ಬದುಕಿರುವವರೆಗೆ ಶಾಂತಿ, ಸಂತೋಷ ಹಾಗೂ ಸಮಾಧಾನ ಪ್ರಾಪ್ತವಾಗುವದಕ್ಕೆ ಹಾಗೂ ಕೃತಕೃತ್ಯತೆಯ ಭಾವನೆಯೊಂದಿಗೆ ನಿರ್ಭಯ, ನಿಶ್ಚಿಂತ ಹಾಗೂ ಪ್ರಸನ್ನ ಮರಣ ಬರುವದಕ್ಕಾಗಿ ಪರಮಾರ್ಥವೊಂದೇ ರಾಮಬಾಣ ಉಪಾಯವಾಗಿರುತ್ತದೆ. ತಾತ್ಪರ್ಯವೇನೆಂದರೆ ರಾಜನಾಗಿರಲಿ, ಅಥವಾ ರಂಕನಾಗಿರಲಿ, ಸ್ತ್ರೀ ಆಗಿರಲಿ ಅಥವಾ ಪುರುಷನಾಗಿರಲಿ, ಸ್ವಾಮಿಯಾಗಿರಲಿ ಅಥವಾ ಸೇವಕನಾಗಿರಲಿ, ಅಧಿಕಾರಿಯಾಗಿರಲಿ ಅಥವಾ ಅನಧಿಕಾರಿಯಾಗಿರಲಿ, ಪಾಲಕನಾಗಿರಲಿ ಅಥವಾ ಬಾಲಕನಾಗಿರಲಿ ಯಾರು ಪರಮಾರ್ಥ ಆಚರಿಸುತ್ತಾರೋ ಅವರು ಈ ಜಗತ್ತಿನಲ್ಲಿ ನಿಜವಾದ ಸಮಾಧಾನ ಅನುಭವಿಸುತ್ತಾರೆ.

★ ಪ್ರದೀಪ ಮೂಲಕ ★

ಪರಮಾರ್ಥ ಸಾಧನೆಯ ಸಾಮಗ್ರಿಗಳು

ಪರಮಾರ್ಥವನ್ನು ಕೇವಲ ಬುದ್ಧಿಯಿಂದ ತಿಳಿದುಕೊಳ್ಳುವದು ಬೇರೆ, ಪರಮಾರ್ಥವನ್ನು ಜನರಿಗೆ ಹೇಳುವದು ಬೇರೆ, ಆದರೆ ಪರಮಾರ್ಥವನ್ನು ಪ್ರತ್ಯಕ್ಷವಾಗಿ ಬಾಳುವದು ಎಲ್ಲಕ್ಕಿಂತಲೂ ವಿಲಕ್ಷಣವಾಗಿರುತ್ತದೆ. ಪರಮಾರ್ಥ ತಿಳಿದರೂ ಅದನ್ನು ಹೇಳಲು ಬರುವದೆಂದೇನೂ ಇಲ್ಲ. ಹಾಗೂ ಅದು ತಿಳಿದರೂ ಅಲ್ಲದೇ ಹೇಳಲು ಬಂದರೂ ಆಚರಣೆಯಲ್ಲಿ ಬರುವದೆಂದೇನೂ ಇಲ್ಲ. ಯಾರ ಜೀವನದಲ್ಲಿ ಪರಮಾರ್ಥ ಸಾಕಾರವಾಗಬೇಕಾಗಿದೆಯೋ ಅವರಿಗೆ ಮುಂದಿನ ಐದು ಮಹತ್ವದ ವಿಷಯಗಳು ಅವಶ್ಯವಾಗಿರುತ್ತವೆ.

೧) ಸರ್ವಸಾಮಾನ್ಯ ಸಂತರ ಸ್ವಾನುಭವದಿಂದ ನೂರಕ್ಕೆ ನೂರರಷ್ಟು ನಿಜವೆನಿಸಿದ ಸಚ್ಚಿದಾನಂದದ ಸ್ಪಷ್ಟವಾದ ತತ್ವಜ್ಞಾನ ಬೇಕು.

೨) ದೇಹದ ವಿಶೇಷತಃ ಮನಸ್ಸಿನ ಹಳೆಯ ರೂಢಿಗಳನ್ನು ಆತ್ಮಾನಂದಕ್ಕೆ ಅನುಕೂಲವಾಗುವಂತೆ ಮಾರ್ಪಾಡು ಮಾಡುವ ನಿರಂತರ ಅಭ್ಯಾಸ ಬೇಕು.

೩) ನಮ್ಮೊಳಗಿನ ಮಾನಸಿಕ ಶಕ್ತಿಯ ಅಪವ್ಯಯ

ವನ್ನು ನಿಲ್ಲಿಸಿ ಅದನ್ನು ಆತ್ಮಶಕ್ತಿಯಲ್ಲಿ ರೂಪಾಂತರ ಗೊಳಿಸುವ ಸಾಧನೆಯು ಬೇಕು.

೪) ಭಗವಂತನಿಗೆ ಶರಣು ಹೋಗುವ ಯುಕ್ತಿಯು ಸಾಧಿಸಬೇಕು.

೫) ನಮಗೆ ಮನೆಮಾರುಗಳಲ್ಲಿ ಸಹಜವಾಗಿ ಸ್ವಾರ್ಥವನ್ನು ಮರೆಯಲು ಹಚ್ಚಿ ನಿರಪೇಕ್ಷ ಪ್ರೇಮ ನಿರ್ಮಾಣ ಮಾಡಿಕೊಳ್ಳುವದನ್ನು ಕಲಿಸುವ ಜೀವನ ಪದ್ಧತಿಯು ಬೇಕು.

ಸತ್ಪುರುಷರ ಜೀವನದಲ್ಲಿ ಈ ಐದು ವಿಷಯುಗಳು ಸ್ಪಷ್ಟವಾಗಿ ಕಾಣುತ್ತವೆ. ಆದ್ದರಿಂದ ಪರಮಾರ್ಥ ಸಾಧನೆಯಲ್ಲಿ ಸತ್ಸಂಗತಿಗೆ ಅಂದರೆ ಸಂತ ಜೀವನದ ಜ್ಞಾನಕ್ಕೆ ಬಹಳ ಮಹತ್ವವಿರುತ್ತದೆ.

★ ಪ್ರದೀಪ ನಾಲ್ಕು ★

ಸತ್ಪುರುಷರ ಸಂಗ ಮಾಡಬೇಕು

ಜನ್ಮತಃ ಪಶುವಿನಂತಿರುವ ಮನುಷ್ಯನು ಮನುಷ್ಯರ ಸಂಗತಿಯಿಂದ ಮನುಷ್ಯರಲ್ಲಿ ಬರುತ್ತಾನೆ. ಸ್ವಾನಂದರೂಪವಾದ ಪರಮಾರ್ಥವು ಕೇವಲ ಸಂತರ ಹತ್ತಿರವೇ ಇರುತ್ತದೆ. ಆದ್ದರಿಂದ ಪರಮಾರ್ಥ ಸಾಧಿಸುವದಕ್ಕಾಗಿ ಸಂತರ ಸಂಗ ಬೇಕಾಗುತ್ತದೆ.

ಕೆಲ ಜನರಿಗೆ ಜೀವನದಲ್ಲಿ ಸತ್ಸಂಗತಿಯು ಸಹಜವಾಗಿ ದೊರೆಯುತ್ತದೆ ಎಂಬುದೇನೋ ನಿಜ. ಆದರೆ ಸಾಮಾನ್ಯವಾಗಿ ದೇಹದಿಂದ ಸತ್ಸಂಗತಿ ಪ್ರಾಪ್ತವಾಗು ವದು ಸರ್ವರಿಗೂ ಸರ್ವಕಾಲದಲ್ಲಿ ಸರ್ವತ್ರ ಸಾಧ್ಯವಾ ಗುವದಿಲ್ಲ. ಸಂತರ ಸಾಧುತನವು ಅವರಿಗೆ ಬಂದ ಆತ್ಮಾ ನಂದದ ಅನುಭವದಲ್ಲಿರುತ್ತದೆ ಆದ್ದರಿಂದ ಸಂತರ ಸಹವಾಸದಲ್ಲಿದ್ದು ಆ ಸ್ವಾನಂದದ ಸ್ಪರ್ಶ ಮಾಡುವ ಕಲೆಯನ್ನು ಸಾಧಿಸುವದು ಸತ್ಸಂಗತಿಯ ಮರ್ಮ ವಾಗಿರುತ್ತದೆ. ಸಾಮಾನ್ಯವಾಗಿ ಪ್ರತಿಯೊಬ್ಬ ಸಂತನು ತನ್ನ ಸ್ವಾನಂದಾನುಭವವನ್ನು ಶಬ್ದಗಳಿಂದ ಹೇಳು ತ್ತಾನೆ. ಇಲ್ಲವೇ ಗ್ರಂಥ ರೂಪದಿಂದ ಬರೆದಿಡುತ್ತಾನೆ. ಅವನ ವಿಚಾರ ಕೇಳಿ ಅಥವಾ ಗ್ರಂಥ ಓದಿ ಸ್ವಾನಂದಾನು ಭವದ ಜ್ಞಾನವು ಅರ್ಥರೂಪದಲ್ಲಿ ನಮ್ಮ ಅಂತಃಕರಣ ದಲ್ಲಿ ಇಳಿಯುತ್ತದೆ ಹಾಗೂ ಸಾಧನೆಯ ಮಾರ್ಗವು ಪ್ರಾಪ್ತವಾಗುತ್ತದೆ. ಸತ್ಪುರುಷರ ಮುಖದಿಂದ ಪ್ರತ್ಯಕ್ಷವಾಗಿ ಶ್ರವಣ ಮಾಡುವ ಅವಕಾಶ ಪ್ರಾಪ್ತ ವಾದರೆ ಉತ್ತಮವೇ ಆದರೆ ಅದು ಪ್ರಾಪ್ತವಾಗದಿದ್ದರೆ ಅವರ ಗ್ರಂಥಗಳ ಸಂಗತಿಯನ್ನು ಹಿಡಿದರೂ ಕೂಡ ಸತ್ಸಂಗ ಪ್ರಾಪ್ತವಾದಂತೆ. ದೇಹ ಸುಖದ ಬೆನ್ನು ಹತ್ತಲು ಯಾರಿಗೂ ಕಲಿಸಬೇಕಾಗುವದಿಲ್ಲ. ಆದರೆ ದೇಹಾತೀತವಾದ ಸ್ವಾನಂದದ ಬೆನ್ನು ಹತ್ತಲು ಮಾತ್ರ ಕಲಿಸಬೇಕಾಗುತ್ತದೆ. ಈ ರೀತಿ ಕಲಿಸುವ ಕಾರ್ಯ

ವನ್ನು ಸಂತರ ಗ್ರಂಥಗಳು ಮಾಡುತ್ತವೆ. ದಶೋಪ ನಿಷತ್ತುಗಳು. ಭಗವದ್ಗೀತೆ, ಭಾಗವತ, ಯೋಗ ವಾಸಿಷ್ಟ ವಿವೇಕಚೂಡಾಮಣಿ, ಜ್ಞಾನೇಶ್ವರಿ, ನಾಥ ಭಾಗವತ, ತುಕಾರಾಮರ ಗಾಥಾ, ದಾಸಬೋಧ, ತುಲಸೀರಾಮಾಯಣ ಮುಂತಾದವುಗಳು ಸರ್ವ ಸಾಮಾನ್ಯ ಸಂತ ಗ್ರಂಥಗಳಾಗಿರುತ್ತವೆ. ಇವುಗಳಲ್ಲಿ ಯಾವದಾದರೊಂದು ಗ್ರಂಥವನ್ನು ಮನಃಪೂರ್ವಕ ಅಭ್ಯಾಸ ಮಾಡುವದರಿಂದ ಸತ್ಸಂಗ ಮಾಡಿದ ಫಲವು ಪ್ರಾಪ್ತವಾಗುತ್ತದೆ ಹಾಗೂ ಸಾಧನ ಮಾರ್ಗದ ಮೇಲೆ ಪ್ರಕಾಶ ಬೀಳುತ್ತದೆ ಎಂದು ನಿಃಸಂಶಯವಾಗಿ ತಿಳಿಯಬೇಕು. ಆದರೆ ಸಂತ ಗ್ರಂಥಗಳನ್ನು ಅಭ್ಯಾಸ ಮಾಡುವಾಗ ಗ್ರಂಥ ಕರ್ತೃಗಳ ವಿಷಯದಲ್ಲಿ ಪೂಜ್ಯ ಭಾವನೆ ಇರಬೇಕೆಂಬುದನ್ನು ಮರೆಯಬಾರದು.

★ ಪ್ರದೀಪ ಐದು ★

ಸದ್ಗುರುಗಳ ಹೊರತಾಗಿ ಪರಮಾರ್ಥವಿಲ್ಲ

ಹುಟ್ಟಿದಾರಭ್ಯದಿಂದ ನಾವು ಬೇರೆಯವರಿಂದ ಏನಾದರೊಂದು ಕಲಿಯುತ್ತಲೇ ಬಂದಿರುತ್ತೇವೆ. ಅಂದರೆ ನಾವು ಗುರು ಮಾಡಿಕೊಳ್ಳುತ್ತಲೇ ಇರುತ್ತೇವೆ. ಗುರು ಗಳಲ್ಲಿ ಮೂರು ಪ್ರಕಾರ.

ಒಂದು ವಿದ್ಯಾಗುರು, ಎರಡು ದೀಕ್ಷಾಗುರು, ಮೂರು ಸದ್ಗುರು.

ದೈನಂದಿನ ವ್ಯವಹಾರ, ಲೌಕಿಕಶಾಸ್ತ್ರ. ಅಥವಾ ಕಲೆ. ಹೊಟ್ಟೆ ತುಂಬಿಕೊಳ್ಳುವ ವಿದ್ಯೆ ಹಾಗೂ ಪ್ರಾಪಂಚಿಕ ಸ್ವಾರ್ಥ ಕಲಿಸುವವರೆಲ್ಲ ನಮ್ಮ ವಿದ್ಯಾಗುರುಗಳೆಂದು ತಿಳಿಯಬೇಕು. ಆತ್ಮಸಾಕ್ಷಾತ್ಕಾರ ಅಲ್ಲದ, ಆದರೆ ಸಾಧಕ ಭಾವದಿಂದಿರುವ, ಜಿಜ್ಞಾಸುಗಳಿಗೆ ಸಂತ ಗ್ರಂಥಗಳನ್ನು ನಿಸ್ವಾರ್ಥತನದಿಂದ ವ್ಯವಸ್ಥಿತವಾಗಿ ತಿಳಿಸಿ ಹೇಳುವ, ಭಕ್ತಿಯ ಭಾವನೆಯಿಂದ ಉಪಾಸನೆಯಲ್ಲಿ ರಸಾನುಭವ ಹೊಂದುವ ಹಾಗೂ "ನನಗೆ ಆತ್ಮದರ್ಶನವಾಗಬೇಕು" ಎಂಬ ಪರಮಾರ್ಥ ಬುದ್ಧಿಯನ್ನು ನಮ್ಮ ಅಂತಃಕರಣದಲ್ಲಿ ಜಾಗೃತಗೊಳಿಸುವವನನ್ನು ದೀಕ್ಷಾಗುರು ಎಂದು ತಿಳಿಯಬೇಕು. ಆತ್ಮಜ್ಞಾನದಿಂದ ದೇಹಾತೀತನಾಗಿ ಯಾವಾಗಲೂ ಸ್ವಾನಂದದಲ್ಲಿ ತನ್ಮಯನಾಗಿರುವವನು ದುಡ್ಡು, ಪರಸ್ತ್ರೀ ಹಾಗೂ ಪ್ರತಿಷ್ಠೆ ಇವುಗಳಿಂದ ಅತ್ಯಂತ ದೂರವಿರತಕ್ಕವನು ಆನಂದಮಯ ಸ್ವರೂಪದ ಹೊರತಾಗಿ ಅಹೋರಾತ್ರಿ ಬೇರೆ ಯಾವುದರ ಸ್ಮರಣೆಯಾಗದೇ ಇರುವ ಹಾಗೂ ಜೀವ ಮಾತ್ರಗಳ ಮೇಲೆ ಸ್ವಾರ್ಥರಹಿತ ಪ್ರೇಮ ಮಾಡುವವನು "ಸದ್ಗುರು" ಆಗಿರುತ್ತಾನೆ. ಇಂಥ ಸದ್ಗುರುವಿನ ಸಹವಾಸದಿಂದ ಮನಸ್ಸು ಶಾಂತವಾಗುತ್ತದೆ. ದುಃಖವು ಮರೆಯುತ್ತದೆ ಹಾಗೂ ಅಂತಃಕರಣದಲ್ಲಿ ಸ್ವಾನಂದದ ಅಂಕುರವು ಉದಯವಾಗುತ್ತದೆ. ದೈನಂದಿನ ಜೀವನದಲ್ಲಿ ಇಂಥ ಆತ್ಮಜ್ಞಾನಿ ಪುರುಷನು ಭೆಟ್ಟಿ

ಯಾಗುವದೇ ಕಠಿಣ. ಭೆಟ್ಟಿ ಆದರೂ ಅವನ ಮೇಲೆ ಶ್ರದ್ಧೆ ಉಂಟಾಗುವದು ಇನ್ನೂ ಕಠಿಣ. ಶ್ರದ್ಧೆ ಉಂಟಾದರೂ ಅದು ಕೊನೆಯುವರೆಗೆ ಉಳಿಯುವದು ಬಹಳೇ ಕಠಿಣ ಶ್ರೀ ಸದ್ಗುರುಗಳು ಪೂರ್ಣ ಜ್ಞಾನ ಸ್ವರೂಪವಾಗಿರುವವರಿಂದ ಅವರ ವಚನಗಳು ಅಥವಾ ಅವರ ಗ್ರಂಥಗಳು ಅವರ ವಾಙ್ಮಯ ಮೂರ್ತಿಗಳೇ ಆಗಿರುತ್ತವೆ. ಮೊದಲು ಆಗಿಹೋದ ಅಥವಾ ವಿದ್ಯಮಾನದಲ್ಲಿದ್ದ ಬ್ರಹ್ಮಜ್ಞಾನಿ ಸಂತರಲ್ಲಿ ನಮಗೆ ಬೇಕೆನಿಸುವವರನ್ನು ಸದ್ಗುರುಗಳೆಂದು ಮನಸ್ಸಿನಿಂದಲೇ ಸ್ವೀಕರಿಸಬೇಕು. ನಮ್ಮ ಸಲುವಾಗಿಯೇ ಹೇಳಿರುವರೆಂಬ ಭಾವನೆಯಿಂದ ಅವರ ವಾಙ್ಮಯವನ್ನು ಅಭ್ಯಾಸ ಮಾಡಬೇಕು. ಹಾಗೂ ಅದರಲ್ಲಿ ಹೇಳಿದ ಸಾಧನೆಯನ್ನು ಮನಃಪೂರ್ವಕ ಆಚರಣೆಯಲ್ಲಿ ತರುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಅದರಿಂದ ನಿಶ್ಚಿತವಾಗಿ ಅವರ ಕೃಪೆಯಾಗುವದು ಹಾಗೂ ಅವರು ಸ್ವತಃ ಮಾರ್ಗದರ್ಶನ ಮಾಡುತ್ತಾರೆ ಎಂಬುದು ಸಾಧಕರ ಅನುಭವವಾಗುತ್ತದೆ.

★ ಪ್ರದೀಪ ಆರು ★

ಸ್ವತಃದ ಭೆಟ್ಟಿ ಆಗಬೇಕು

ಸಂತರಾಗಲಿ ಅಥವಾ ಸದ್ಗುರುಗಳಾಗಲಿ ಹೇಳುವದಾದರೂ ಏನು ? ಅವರು ಹೇಳುವದಿಷ್ಟೇ ನಮ್ಮ

ಹೃದಯದಲ್ಲಿ ಆನಂದರೂಪದಿಂದ ವಿಜೃಂಭಿಸುತ್ತಿರುವ ಆತ್ಮ ಸ್ವರೂಪವಾದ "ನಾನು" (ಅಹಂ) ಎಂಬುದರ ಸಾಕ್ಷಾತ್ ಪರಿಚಯ ಮಾಡಿಕೊಳ್ಳಿರಿ. ಮನೆಯಲ್ಲಾಗಲಿ ಅಥವಾ ಮನೆಯ ಹೊರಗಾಗಲಿ ನಿತ್ಯ ಎಷ್ಟೋ ಜನರನ್ನು ನಾವು ಭೆಟ್ಟಿಯಾಗುತ್ತಿರುತ್ತೇವೆ. ಆದರೆ ನಿಜವಾದ ಅರ್ಥದಲ್ಲಿ ನಾವು ನಮ್ಮ ಭೆಟ್ಟಿ ಮಾತ್ರ ಆಗುವದೇ ಇಲ್ಲ. ಜಗತ್ತಿನ ವ್ಯವಹಾರ ಹಾಗೂ ದೇಹದ ಉಪಚಾರದ ಕಡೆಗೆ ಲಕ್ಷ್ಯ ಕೊಡುವದರಲ್ಲಿ ನಾವು ಎಷ್ಟು ಮುಳುಗಿ ಹೋಗಿರುವೆವೆಂದರೆ ನಮ್ಮ ಕಡೆಗೆ ನೋಡಲು ನಮಗೆ ಅವಕಾಶ ಹಾಗೂ ಶಕ್ತಿಯೇ ಉಳಿಯುವದಿಲ್ಲ. ನಮ್ಮ ಅಂತರಂಗದಲ್ಲಿಯ ನಿಜವಾದ "ನಾನು" ಮನೋರೂಪಿ ತೆರೆಯ ಹಿಂದೆ ಇರುವದರಿಂದ ಸಾಯುವವರೆಗೆ ನಮಗೆ ಅಜ್ಞಾತವಾಗಿಯೇ ಇರುತ್ತದೆ. ಇಷ್ಟು ನಿಕಟ ಸಹವಾಸ ಹೊಂದಿದ್ದರೂ ಆದರ ಪರಿಚಯವಾಗದೇ ಇರುವದರಿಂದ ನಮಗೆ ಜೀವನದ ನಿಜವಾದ ಅರ್ಥವು ತಿಳಿಯುವದೇ ಇಲ್ಲ. ಆದ್ದರಿಂದ ನಿಜವಾದ ಸಮಾಧಾನ ಪ್ರಾಪ್ತವಾಗುವದಿಲ್ಲ. ನಿಜವಾದ "ನಾನು" ಎಂಬುದರ ಸಾಕ್ಷಾತ್ ಪರಿಚಯ ಮಾಡಿಕೊಳ್ಳಬೇಕು ಹಾಗೂ ಯಥೇಚ್ಛ ಸ್ವಾನಂದ ಅನುಭವಿಸಬೇಕು. ಇದೇ ಎಲ್ಲ ಸಂತರ ಪ್ರಧಾನ ಉಪದೇಶವಾಗಿರುತ್ತದೆ.

ಆತ್ಮಜ್ಞಾನವು ನಮ್ಮ ಜೀವನದ ಸರ್ವೋಚ್ಚ

ಸರ್ವೋತ್ತಮ ಧ್ಯೇಯವಾಗಿರುತ್ತದೆ ಎಂದು ಮನಸ್ಸಿನಿಂದ ನಿಶ್ಚಯ ಮಾಡುವದು ಪರಮಾರ್ಥದ ಮೊದಲನೇ ಮೆಟ್ಟಲು ಆಗಿರುತ್ತದೆ. ನಿತ್ಯ ಜೀವನದಲ್ಲಿ ಸ್ವಲ್ಪ ಸಮಯ ತೆಗೆದು ಶಾಂತವಾಗಿ ಕುಳಿತುಕೊಳ್ಳಬೇಕು. ಹಾಗೂ ಈ ದೇಹರೂಪಿ ಚರ್ಮದ ಚೀಲದಲ್ಲಿ ಇರುವ "ನಾನು" ಯಾರೆಂಬುದನ್ನು ಶೋಧ ಮಾಡಬೇಕು. ನಾನು ಯಾರು ಎಂಬುದನ್ನು ಶೋಧ ಮಾಡುವದೇ ಭಗವದ್ದರ್ಶನಕ್ಕಾಗಿ ಮಾಡುವ ಪ್ರಯತ್ನವಾಗಿರುತ್ತದೆ.

★ ಪ್ರದೀಪ ಏಳು ★

ನಾನು ನನಗೆ ಅಜ್ಞಾತನಿರುತ್ತೇನೆ

ಅರವತ್ತು ಎಪ್ಪತ್ತು ವರ್ಷಗಳ ಜೀವನ ಸಾಗಿಸಿದರೂ ನಮಗೆ ನಮ್ಮ ಬಗ್ಗೆ ಬಹಳ ಕಡಿಮೆ ಜ್ಞಾನವಿರುತ್ತದೆ. ಉದಾಹರಣೆಗೆ:-ನಮ್ಮ ಮೆದುಳು ಹೇಗೆ ಕೆಲಸ ಮಾಡುತ್ತದೆ. ಹೃದಯ ಹೇಗೆ ಬಡಿದುಕೊಳ್ಳುತ್ತದೆ. ಅನ್ನ ಹೇಗೆ ಪಚನವಾಗುತ್ತದೆ, ಪ್ರಾಣಧಾರಣೆ ಹೇಗೆ ಆಗುತ್ತದೆ. ಹೊಟ್ಟೆಯಲ್ಲಿ ಗರ್ಭ ಹೇಗೆ ಬೆಳೆಯುತ್ತದೆ. ಇಂಥ ಸಾಧಾರಣವಾಗಿ ಕಾಣುವ ನಿತ್ಯ ಕ್ರಿಯೆಗಳ ವಿಷಯದಲ್ಲಿಯೂ ಕೂಡ ನಮಗೆ ಕಡಿಮೆ ಜ್ಞಾನ ಇರುತ್ತದೆ. ಅದೇ ರೀತಿ ನಿದ್ರೆ ಹೇಗೆ ಹತ್ತುತ್ತದೆ, ಸ್ವಪ್ನಗಳು ಹೇಗೆ ಹಾಗೂ ಏಕೆ ಬೀಳುತ್ತವೆ, ಗಾಢ ನಿದ್ರೆಯಲ್ಲಿ ನಾವು ಎಲ್ಲಿ ಇರುತ್ತವೆ ಚಿಂತೆ ಏಕೆ ಹಾಗೂ ಹೇಗೆ ಹತ್ತುತ್ತದೆ,

ನೆನಪುಗಳು ಎಲ್ಲಿ ಇರುತ್ತವೆ ಹಾಗೂ ಯೋಗ್ಯ ಸಮಯ ದಲ್ಲಿ ಹೇಗೆ ಮೇಲೆ ಬರುತ್ತವೆ. ವಿಕಾರಗಳು ನಮ್ಮನ್ನು ಏಕೆ ಕಾಡುತ್ತವೆ ಎಂಬ ಮುಂತಾದ ವಿಷಯಗಳಲ್ಲಿ ನಮಗೆ ಜ್ಞಾನವಿಲ್ಲ. ಇದಲ್ಲದೇ ಇದೇ ತಂದೆತಾಯಿಗಳ ಹೊಟ್ಟೆಯಿಂದ ಹುಡುಗ ಅಥವಾ ಹುಡುಗಿಯಾಗಿ ಹುಟ್ಟಿ ಬಂದದ್ದೇಕೆ ? ಬೇಡವಾದ ದುಃಖಗಳು ನಮ್ಮ ಪಾಲಿಗೆ ಏಕೆ ಬರುತ್ತವೆ ? ಅನೇಕ ಪ್ರಕಾರವಾದ ಯೋಗ್ಯ ಅಯೋಗ್ಯ ವಾಸನೆಗಳು ನಮ್ಮನ್ನು ಏಕೆ ಪೀಡಿ ಸುತ್ತವೆ ? ನಾವು ಎಲ್ಲಿ ಸಾಯುವೆವು ? ಹಾಗೂ ಸತ್ತ ಮೇಲೆ ಎಲ್ಲಿಗೆ ಹೋಗುವೆವು ? ಎಂಬ ಮುಂತಾದ ನಮ್ಮ ಬಗೆಗಿನ ಅನೇಕ ಪ್ರಶ್ನೆಗಳ ಉತ್ತರಗಳನ್ನು ನಮಗೆ ಕೊಡಲು ಶಕ್ಯವಾಗುವದಿಲ್ಲ. ತಾತ್ಪರ್ಯ ವೇನೆಂದರೆ ನಮ್ಮಲ್ಲಿಯ “ನಾನು” ಎಂಬುದು ಒಂದು ಅಜ್ಞಾತ ಗೂಢವಾಗಿರುತ್ತದೆ. ಜಗತ್ತಿನ ಹಾಗೂ ಜಗತ್ತಿ ನಲ್ಲಿಯ ವಸ್ತು ಹಾಗೂ ಘಟನೆಗಳ ರಹಸ್ಯವನ್ನು ತಿಳಿದು ಕೊಳ್ಳುವದರಲ್ಲಿಯೇ ಮನುಷ್ಯನ ಬುದ್ಧಿಯು ನಿಜವಾದ ಸಾಮರ್ಥ್ಯವು ಪ್ರಗಟವಾಗುತ್ತದೆ. ಎಲ್ಲ ರಹಸ್ಯಗಳಲ್ಲಿ ನಮ್ಮ ಅಂತರಂಗದಲ್ಲಿರುವ “ನಾನು” ಎಂಬುದರ ರಹ ಸ್ಯವು ಬಹಳ ವಿಲಕ್ಷಣವಾಗಿರುತ್ತದೆ. ನಾನು ಎಂಬುದು ಅಜ್ಞಾತವಾಗಿದ್ದು ಜಗತ್ತಿನ ರಹಸ್ಯ ತಿಳಿದುಕೊಳ್ಳುವ ಪ್ರಯತ್ನ ಮಾಡಿದರೆ ಅದು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ಆದರೆ ನಾನು ಎಂಬುದರ ಜ್ಞಾನವಾದ

ಮೇಲೆ ಜಗತ್ತಿನ ಯಾವ ರಹಸ್ಯವೂ ರಹಸ್ಯವಾಗಿ ಉಳಿಯುವದೇ ಇಲ್ಲ. ಆದ್ದರಿಂದ ಜಗತ್ತಿನ ರಹಸ್ಯ ತಿಳಿದುಕೊಳ್ಳುವದರ ಬೆನ್ನು ಹತ್ತುವದನ್ನು ಬಿಟ್ಟು ಅಂತರ್ಯಾಮಿಯಾದ ನಾನು ಎಂಬುದರ ರಹಸ್ಯ ತಿಳಿದುಕೊಳ್ಳುವದರ ಪ್ರಯತ್ನ ಮಾಡಬೇಕು. ಇದಕ್ಕೆ ಆತ್ಮಜ್ಞಾನ ಎನ್ನುತ್ತಾರೆ ಹಾಗೂ ಆತ್ಮಜ್ಞಾನದಲ್ಲಿಯೇ ನಿಜವಾದ ಪರಮಾರ್ಥ ಸಾಧಿಸುತ್ತದೆ

★ ಪ್ರದೀಪ ಎಂಟು ★

ನಾನು ಎಂಬುದು ಅತ್ಯಂತ ತೊಡಕಿನದಾಗಿರುತ್ತದೆ

ದೇಹ ಮನಸ್ಸು ಹಾಗೂ ಆತ್ಮ ಸೇರಿ ನಮ್ಮ ಸಂಪೂರ್ಣವಾದ 'ನಾನು' ಆಗುತ್ತದೆ. ಚರ್ಮ, ರಕ್ತ, ಮಾಂಸ, ಅಸ್ಥಿ, ನರ, ನಾಡಿ, ಕೇಶ, ಗ್ರಂಥಿ, ಮೆದುಳು ಹಾಗೂ ಪ್ರಾಣ ಮುಂತಾದವುಗಳು ಸೇರಿ ದೇಹವಾಗುತ್ತದೆ. ಸ್ಮೃತಿ, ಲಕ್ಷ್ಯ, ಭಾವನೆ. ಕಲ್ಪನೆ, ವಾಸನೆ, ಸಂಕಲ್ಪ, ವಿಕಲ್ಪ, ವಿಚಾರ, ಅಹಂಕಾರ ಹಾಗೂ ಭಾಷೆ ಮುಂತಾದವುಗಳು ಸೇರಿ ನಮ್ಮ ಮನಸ್ಸು ಆಗುತ್ತದೆ. ದೇಹ ಹಾಗೂ ಮನಸ್ಸು ಇವೆರಡೂ ಜೀವಂತವಾಗಿದ್ದರೂ ಇವುಗಳಲ್ಲಿ ದೇಹ ಮಾತ್ರ ಕಾಣುತ್ತದೆ. ಮನಸ್ಸು ಕಾಣಿಸುವದಿಲ್ಲ. ಇಷ್ಟೇ ಅಲ್ಲದೆ ಮನಸ್ಸು ಅತ್ಯಂತ ಸೂಕ್ಷ್ಮ ಹಾಗೂ ತೊಡಕಿನದಾಗಿರುತ್ತದೆ. ನಮ್ಮ ಮನಸ್ಸು ಎಂದರೆ ಸಂಸ್ಕಾರಗಳ ಹಾಗೂ ಸ್ಮರಣೆ

ಗಳ ಒಂದು ದೊಡ್ಡ ಭಂಡಾರವಾಗಿದ್ದು ಅದರಲ್ಲಿ ಅನೇಕ ವಾಸನೆಗಳು ತೃಪ್ತಿಗಾಗಿ ಧಡಪಡಿಸುತ್ತಿರುತ್ತವೆ. ಕಾಮಕ್ರೋಧಾದಿ ವಿಕಾರಗಳು ಗೊಂದಲವೆಬ್ಬಿಸುತ್ತಿರುತ್ತವೆ. ಅನೇಕ ಕಲ್ಪನೆಗಳು ವಿಚಿತ್ರ ಆಟ ಆಡುತ್ತಿರುತ್ತವೆ ಹಾಗೂ ಎಷ್ಟೋ ಭಾವನೆಗಳು ಉದಯಾಸ್ತ ಹೊಂದುತ್ತಿರುತ್ತವೆ. ಇದೇ ಮನಸ್ಸಿನಲ್ಲಿಯೇ ಸ್ವಪ್ನದ ವಿಚಿತ್ರ ಸೃಷ್ಟಿಯು ಇರುತ್ತದೆ. ಹಾಗೂ ಅನೇಕ ಪ್ರಕಾರದ ಜ್ಞಾನವು ಮನೆ ಮಾಡಿಕೊಂಡಿರುತ್ತದೆ. ಆಶ್ಚರ್ಯವೆಂದರೆ ಗಾಢ ನಿದ್ರೆಯು ಹತ್ತಿತೆಂದರೆ ಮನಸ್ಸು ಎಲ್ಲಿಯೋ ಅಂತರ್ಧಾನವಾಗುತ್ತದೆಯೋ ಹಾಗೂ ಎಚ್ಚರ ಬಂದಿತೆಂದರೆ ಮೊದಲಿದ್ದ ಹಾಗೆಯೇ ಪ್ರಗಟವಾಗುತ್ತದೆ. ಮನುಷ್ಯನ ಮನಸ್ಸು ಎಷ್ಟು ಆಳವಾಗಿದೆ ಎಂಬುದನ್ನು ಲೆಕ್ಕ ಹಾಕುವದು ಅಷ್ಟು ಸುಲಭವಾಗಿ ಸಾಧ್ಯವಿಲ್ಲ. ಆವರಣವಿರುವ ಒಂದು ಗಡಿಯಾರವು ಹೊರಗಿನಿಂದ ನೋಡಲಿಕ್ಕೆ ಎಷ್ಟು ಸಾಧಾರಣವಾಗಿರುತ್ತದೆ ಆದರೆ ಒಳಗೆ ಬಹಳ ಕ್ಲಿಷ್ಟವಾಗಿರುತ್ತದೆ. ಅದೇ ರೀತಿ ಜಾಗೃತ ಅವಸ್ಥೆಯಲ್ಲಿ ಅನುಭವಕ್ಕೆ ಬರುವ ಸಾಧಾರಣ ಸರಳ ಮನಸ್ಸು ಅಂತರಂಗದಲ್ಲಿ ಅತ್ಯಂತ ತೊಡಕಿನದಾಗಿರುತ್ತದೆ. ಇಷ್ಟೇ ಅಲ್ಲದೇ ಹೊರಗಿನ ಜಗತ್ತಿನಲ್ಲಿ ನೋಡಲು ಸಾಧ್ಯವಿಲ್ಲದಷ್ಟು ವಿವಿಧತೆ, ವಿಚಿತ್ರತೆ ಹಾಗೂ ತೊಡಕುಗಳು ಮನುಷ್ಯನ ಮನಸ್ಸಿನಲ್ಲಿ ಇರುತ್ತವೆ. ಈ ಮನಸ್ಸಿನ ರಹಸ್ಯವನ್ನು ತಿಳಿದುಕೊಳ್ಳುವ

ದಕ್ಕಾಗಿ ಕಂಕಣಬದ್ಧನಾಗಿ ಯಾವನು ಅದನ್ನು ಸ್ವಾಧೀನ ಪಡಿಸಿಕೊಳ್ಳುವನೋ ಅವನಿಗೆ ಆತ್ಮದರ್ಶನವಾಗುತ್ತದೆ. ಅವನಿಗೆ ಪರಮಾರ್ಥ ಸಾಧಿಸುತ್ತದೆ.

★ ಪ್ರದೀಪ ಒಂಭತ್ತು ★

"ನಾನು" ಎಂಬುದು ಅದೃಶ್ಯವಾಗಿರುತ್ತದೆ

ನಮ್ಮ "ನಾನು" ಎಂಬುದರ ಮೇಲೆ ನಮಗೆ ನಿಜವಾದ ಪ್ರೇಮ ಇರುವದರಿಂದ ಅದು ನಮಗೆ ಮನಃಪೂರ್ವಕ ಹಿಡಿಸುತ್ತದೆ. ಈ ನಾನು ಎಂಬುದು ದೇಹದಲ್ಲಿರುತ್ತದೇನೋ ನಿಜ ಆದರೆ ಅದಕ್ಕೆ ರಂಗ, ರೂಪ, ವಾಸನೆ, ರುಚಿ, ಆಕಾರ, ತೂಕ ಮುಂತಾದ ದೃಶ್ಯವ ಗುಣಗಳು ಅಂಟುವದಿಲ್ಲ. ನಮ್ಮ ವಿಚಾರ, ಭಾವನೆ, ವಾಸನೆ, ಕಲ್ಪನೆ, ಸ್ವಪ್ನ, ಮನೋರಾಜ್ಯ, ಭೀತಿ, ಚಿಂತೆ, ಸಂಶಯ, ನಿರಾಶೆ, ವಿಫಲತೆ, ದ್ವೇಷ ಮಾತ್ಸರ್ಯ, ದುಷ್ಟಹೇತು, ಆಕಾಂಕ್ಷೆ ಮುಂತಾದ ಮನೋಧರ್ಮಗಳೆಲ್ಲ ಅದೃಶ್ಯವಾಗಿರುತ್ತವೆ. ದೇಹದ ಕೃತಿಯು ಕಾಣಿಸುತ್ತದೆ. ಆದರೆ ಆ ಕೃತಿಗಳ ಹಿಂದೆ ಇದ್ದುಕೊಂಡು ಅವುಗಳಿಗೆ ಪ್ರೇರಣೆ ಕೊಡುವ ಮನೋ ವ್ಯಾಪಾರವು ಕಾಣುವದಿಲ್ಲ. ಕಾಣುತ್ತಿದ್ದದ್ದಾದರೆ ಈಗಿನ ಮನುಷ್ಯ ಜೀವನವು ಬೇರೆ ಯಾವದೋ ರೂಪದ್ದಾಗುತ್ತಿತ್ತು, ಮನಸ್ಸು ದೇಹವನ್ನು ಅತ್ಯಂತ ಸಮೀಪದಿಂದ ಅಂಟಿಕೊಂಡಿರುತ್ತದೆ. ಆದ್ದರಿಂದಲೇ ಅದು ಕಾಣದಿದ್ದರೂ

ಅದರ ಸ್ವರೂಪದ ವಿಷಯದಲ್ಲಿ ಸ್ವಲ್ಪಾದರೂ ಕಲ್ಪನೆ ಮಾಡಲು ಬರುತ್ತದೆ. ಆದರೆ ಆತ್ಮವು ಅಂದರೆ ನಮ್ಮ ನಿಜವಾದ "ನಾನು" ಎಂಬುದು ಮನಸ್ಸಿಗಿಂತಲೂ ಅದೃಶ್ಯವಾಗಿರುವದರಿಂದ ದೇಹದ ಮೇಲೆ ಹಾಗೂ ಮನಸ್ಸಿನ ಮೇಲೆ ಆಗುವ ಅದರ ಪರಿಣಾಮವು ಒಮ್ಮೆಲೇ ಕಂಡುಬರುವದಿಲ್ಲ. ಜೀವನವೆಂದರೆ ಅದೃಶ್ಯ ಹಾಗೂ ದೃಶ್ಯ,ಅವ್ಯಕ್ತ ಹಾಗೂ ವ್ಯಕ್ತ ಅಥವಾ ಸೂಕ್ಷ್ಮ ಹಾಗೂ ಸ್ಥೂಲ ಇವುಗಳ ಆಟವಾಗಿರುತ್ತದೆ. ಈ ಆಟದಲ್ಲಿ ಅದೃಶ್ಯಕ್ಕೆ ಅಥವಾ ಸೂಕ್ಷ್ಮಕ್ಕೆ ಹೆಚ್ಚು ಮಹತ್ವವಿರುತ್ತದೆ. ಏಕೆಂದರೆ ಮನುಷ್ಯನ ನಿಜವಾದ "ನಾನು" ಎಂಬುದು ಅವನ ಅಂತರಂಗದಲ್ಲಿರುವ ಸೂಕ್ಷ್ಮದಲ್ಲಿಯೇ ಪ್ರಾಪ್ತವಾಗುತ್ತದೆ. ಈ ವಿಷಯ ದ ಸರಿಯಾದ ತಿಳುವಳಿಕೆ ಆಗದ ಹೊರತು ಪರಮಾರ್ಥ ಸಾಧಿಸುವದಿಲ್ಲ. ಅಂದರೆ ನಮ್ಮ "ನಾನು" ಎಂಬುದರ ಭೆಟ್ಟಿಯಾಗುವದಕ್ಕಾಗಿ ಅಂತರಂಗದಲ್ಲಿ ಇಳಿಯುವ ಅಭ್ಯಾಸ ಮಾಡಬೇಕು. ಅಂತರಂಗದಲ್ಲಿ ಇಳಿದು ಆಳವಾಗಿ ಹೋಗುವ ಯುಕ್ತಿ ಸಾಧಿಸುವದೆಂದರೆ ಅಂತರ್ಜ್ಞಾನವಾಗುವದೆಂದರ್ಥ.

★ ಪ್ರದೀಪ ಹತ್ತು ★

ಅಜ್ಞಾನವೆಂದರೆ ದೇಹಬುದ್ಧಿ

ಜ್ಞಾನ ಹಾಗೂ ಅಜ್ಞಾನ ಇವೆರಡೂ ತಿಳುವಳಿಕೆಯ ಪ್ರಕಾರವೇ ಆಗಿರುತ್ತವೆ. ತಿಳಿದುಕೊಳ್ಳದ

ಹೊರತು ಮನಸ್ಸಿಗೆ ಸಮಾಧಾನವಾಗುವದಿಲ್ಲ. ವಸ್ತು ಹೇಗೆ ಇರುತ್ತದೆಯೋ ಹಾಗೆಯೇ ತಿಳಿಯುವದು ಜ್ಞಾನ ವಾದರೆ ಹಾಗೆ ತಿಳಿಯದೇ ಇರುವದು ಅಜ್ಞಾನವಾಗಿರು ತ್ತದೆ. ಈ ಅಜ್ಞಾನವು ಎರಡು ಪ್ರಕಾರದ್ದಿರುತ್ತದೆ. ವಸ್ತುವು ಇದ್ದು ಅದು ಇದೆ ಎಂಬ ಅರಿವು ಇಲ್ಲದೇ ಇರು ವದು ಒಂದು ಪ್ರಕಾರ ಹಾಗೂ ವಸ್ತುವು ನಿಜವಾಗಿಯೂ ಹೇಗೆ ಇರುವದೋ ಹಾಗೆ ತಿಳಿಯದೇ ಬೇರೆ ರೂಪದಲ್ಲಿ ತಿಳಿಯುವದು ಎರಡನೇ ಪ್ರಕಾರ. ನಮ್ಮ ನಿಜವಾದ "ನಾನು" ಎಂಬುದರ ವಿಷಯದಲ್ಲಿ ಈ ಎರಡೂ ಪ್ರಕಾರ ಗಳು ಗೋಚರಿಸುತ್ತವೆ. ದೇಹ ಹಾಗೂ ಮನಸ್ಸು ಇವುಗಳ ಆಚೆಗೆ ಇರುವ ಆತ್ಮವೇ ನಿಜವಾದ "ನಾನು" ಎಂಬುದನ್ನು ಮರೆತು ಬಿಟ್ಟಿರುತ್ತೇವೆ. ಆತ್ಮವು ಇದ್ದೂ ನಮಗೆ ಇಲ್ಲದಂತಾಗಿರುತ್ತದೆ. ಇದು ಅಜ್ಞಾನದ ಮೊದ ಲನೇ ಪ್ರಕಾರವೆಂದು ತಿಳಿಯಬೇಕು. ದೇಹ ಹಾಗೂ ಮನಸ್ಸು ಇವು ನಿಜವಾಗಿಯೂ ನಾವು ಅಲ್ಲಿ ಇವೇ ನಾನು ಎಂಬ ತಪ್ಪು ಹಾಗೂ ದೃಢವಾದ ಭಾವನೆಯಿಂದ ನಾವು ನಡೆಯುತ್ತೇವೆ ಇದು ಅಜ್ಞಾನದ ಎರಡನೆ ಪ್ರಕಾರ ವೆಂದು ತಿಳಿಯಬೇಕು. ಸೂಕ್ಷ್ಮದ ಅನುಭವವು ಲೋಪ ವಾಗಿ ದೃಶ್ಯದ ವಾಸ್ತವಿಕತೆಯಲ್ಲಿ ನಾನು ದೇಹವೇ ಆಗಿರುತ್ತೇನೆ ಎಂಬ ನಿಃಶಂಕ ಶ್ರದ್ಧೆಯು ಉದಯವಾಗು ತ್ತದೆ ಇದಕ್ಕೆ ಆತ್ಮಬುದ್ಧಿ ಎನ್ನುತ್ತಾರೆ. ಅಜ್ಞಾನದಿಂದ ಉಂಟಾದ ದೇಹಬುದ್ಧಿಯು ದೇಹೋಽಹಂ ಅಥವಾ

ಅಹಂ ದೇಹಃ ಅಸ್ಮಿ ಎನ್ನುತ್ತದೆ. ಇದಕ್ಕೆ ವಿಪರೀತ ವಾಗಿ ಜ್ಞಾನದಿಂದ ಉಂಟಾದ ಆತ್ಮಬುದ್ಧಿಯು ದೇವೋಽಹಂ ಅಥವಾ ಅಹಂ ಬ್ರಹ್ಮಾಸ್ಮಿ ಎನ್ನುತ್ತದೆ. ತಾತ್ಪರ್ಯವೇನೆಂದರೆ ದೇಹ ಬುದ್ಧಿಯನ್ನು ಅಂತಗೊಳಿಸಿ ಆತ್ಮಬುದ್ಧಿಯಲ್ಲಿ ಪ್ರವೇಶ ಮಾಡುವದು ಎಲ್ಲ ಪರ ಮಾರ್ಥದ ರಹಸ್ಯವಾಗಿರುತ್ತದೆ.

★ ಪ್ರದೀಪ ಹನ್ನೊಂದು ★

"ದೇಹಬುದ್ಧಿಯು ಸ್ವಾರ್ಥದ ಜನನಿ ಆಗಿರುತ್ತದೆ"

ಅಜ್ಞಾನದಿಂದ ನಮ್ಮ ನಿಜವಾದ "ನಾನು" ಎಂಬು ದನ್ನು ನಾವು ಮರೆತಿರುತ್ತೇವೆ. ಇಷ್ಟೇ ಅಲ್ಲದೆ ನಮ್ಮ ಶರೀರಕ್ಕೆ ನಿಜವಾದ "ನಾನು" ಎಂದು ತಿಳಿಯತೊಡಗಿ ದೆವು. ಇದರಿಂದ ದೇಹದಲ್ಲಿಯ ಗುಣಗಳು ಅದರಲ್ಲಿ ಇರುತ್ತವೆ ಎಂಬ ನಮ್ಮ ಮನಸ್ಸಿನ ವಿಪರೀತ ಹಾಗೂ ಅತ್ಯಂತ ಗಟ್ಟಿಯಾದ ತಿಳುವಳಿಕೆಯಾಯಿತು. ದೇಹವೇ ನಮ್ಮ ದೇವವಾಯಿತು. ಹಾಗೂ ಜೀವನದಲ್ಲಿ ಅವಕ್ಕೆ ಪರಮೋಚ್ಚ ಮಹತ್ವ ಪ್ರಾಪ್ತವಾಯಿತು. ವಾಸ್ತವಿಕ ವಾಗಿ ವಿಚಾರ ಮಾಡಿದರೆ ದೇಹವು ದೃಶ್ಯ, ಜಡ, ಅಶಾ ಶ್ವತ, ಅಪೂರ್ಣ, ಆಕುಂಚಿತ, ಕಾಲವಶ, ತಾತ್ಕಾಲಿಕ ಹಾಗೂ ಪರಾವಲಂಬಿಯಾಗಿರುತ್ತದೆ. ಮನಸ್ಸು ಅದ ರೊಂದಿಗೆ ಏಕರೂಪವಾದದ್ದರಿಂದ ಅದರ ಗುಣ ಧರ್ಮ

ಗಳು ನಮ್ಮ ಮನಸ್ಸಿನಲ್ಲಿಯೂ ಬಂದವು. ಇದರ ಪ್ರತ್ಯಕ್ಷ ಪರಿಣಾಮ ಏನಾಯಿತೆಂದರೆ ದೃಶ್ಯವೇ ಸತ್ಯವಾದದ್ದೆಂಬ ಧೃಡವಾದ ಶ್ರದ್ಧೆಯು ನಿರ್ಮಾಣವಾಗಿ ಇಪ್ಪತ್ನಾಲ್ಕು ಗಂಟೆಯೂ ಮನಸ್ಸು ದೇಹದ ಮೂಲಕ ಸುಖ ಪಡೆಯುವದರಲ್ಲಿಯೇ ತೊಡಗಿಕೊಂಡಿತು. ದೇಹದ ಮೂಲಕ ಸುಖ ಪಡೆಯುವ ಧಡಪಡವೇ ಸ್ವಾರ್ಥದ ಪ್ರಕಟ ಸ್ವರೂಪವಾಗಿರುತ್ತದೆ. ಸ್ವಾರ್ಥಿ ಮನುಷ್ಯನು ಆಕುಂಚಿತತನದಿಂದ ಕೇವಲ ತನ್ನ ಮಟ್ಟಿಗೆ ನೋಡುತ್ತಾನೆ. ಅಭಿಮಾನ, ಹಣದ ಪ್ರೇಮ, ಚಿಂತೆ, ಭಯ, ತಳಮಳ, ಢೋಂಗು, ಪರನಿಂದೆ, ದ್ವೇಷ, ಮಾತ್ಸರ್ಯ ಮುಂತಾದ ಸಂತಾನ ಸ್ವಾರ್ಥದ ಹೊಟ್ಟೆಯಿಂದಲೇ ಹುಟ್ಟುತ್ತವೆ. ಸ್ವಾರ್ಥಿ ಮನುಷ್ಯನ ಮನಸ್ಸು ಯಾವಾಗಲೂ ಅಶಾಂತವಾಗಿರುತ್ತದೆ. ಹಾಗೂ ಅಶಾಂತ ಮನಸ್ಸಿನಲ್ಲಿ ತಪ್ಪಿಯೂ ಕೂಡ ಸಮಾಧಾನ ಪ್ರಾಪ್ತವಾಗುವದಿಲ್ಲ. ತಾತ್ಪರ್ಯವೇನೆಂದರೆ ದೇಹವನ್ನು ನಿಯಂತ್ರಣದಲ್ಲಿಟ್ಟುಕೊಂಡು ದೃಶ್ಯ ಜಗತ್ತಿನೊಂದಿಗೆ ರಮಮಾಣವಾಗುವದಕ್ಕಾಗಿ ಧಡಪಡಿಸುವ ಮನಸ್ಸನ್ನು ತಿರುಗಿಸಿ ಅದನ್ನು ಆತ್ಮಸ್ವರೂಪದೊಂದಿಗ ರಮಮಾಣಗೊಳಿಸದ ಹೊರತು ಜೀವನದಲ್ಲಿಯ ದುಃಖ ಇಲ್ಲದಂತಾಗಲು ಶಕ್ಯವಿಲ್ಲ. ಮನಸ್ಸನ್ನು ದೃಶ್ಯದಿಂದ ತಿರುಗಿಸಿ ಅದೃಶ್ಯದ ಕಡೆಗೆ ಎಳೆಯುವದರಲ್ಲಿಯೇ ಪರಮಾರ್ಥದ ಮರ್ಮವು ಇರುತ್ತದೆ.

★ ಪ್ರದೀಪ ಹನ್ನೆರಡು ★

ದೇಹಬುದ್ಧಿಯು ಕಾಲಾಧೀನವಾಗಿರುತ್ತದೆ

ನಮ್ಮ ದೇಹವು ಒಂದು ಪರಿಸ್ಥಿತಿಯಲ್ಲಿ ಹುಟ್ಟಿರುತ್ತದೆ. ಒಂದು ಪರಿಸ್ಥಿತಿಯಲ್ಲಿ ಬೆಳೆಯುತ್ತದೆತ್ತದೆ ಹಾಗೂ ಕೊನೆಗೆ ಅದರಲ್ಲಿಯೇ ಕರಗಿ ಹೋಗುತ್ತದೆ. ದೇಹಬುದ್ಧಿಯು ಜಾಗೃತವಾಗಿರುವದರಿಂದ ನಾನು ದೇಹವಿರುತ್ತೇನೆ ಎಂಬ ಅರಿವು ಯಾವಾಗಲೂ ಹೊಚ್ಚ ಹೊಸವಾಗಿರುತ್ತದೆ. ಆದ್ದರಿಂದ ದೇಹದ ಮೇಲೆ ಹಾಗೂ ಮನಸ್ಸಿನ ಮೇಲೆ ಕ್ಷಣ ಕ್ಷಣಕ್ಕೂ ಪರಿಸ್ಥಿತಿಯು ಸಂಸ್ಕಾರವಾಗಿ ಹೊಸ ಹೊಸ ಅನುಭವಗಳು ಬರುತ್ತವೆ. ಸಧ್ಯದ ದೇಹಬುದ್ಧಿಯು "ನಾನು" ಎಂಬುದು ದೃಶ್ಯದಲ್ಲಿಯ ಅನುಭವಗಳ ಕ್ಷಣ ಕ್ಷಣಕ್ಕೂ ಬದಲಾಗುವ ಒಂದು ದೊಡ್ಡ ಗಂಟಾಗಿರುತ್ತದೆ. ಇದರಲ್ಲಿಯ ಪ್ರತಿಯೊಂದು ಅನುಭವಕ್ಕೆ ಎರಡು ಅಂಗಗಳಿರುತ್ತವೆ. ಅನುಭವ ತೆಗೆದುಕೊಳ್ಳುವ ಜ್ಞಾತಾ ಅಥವಾ "ನಾನು" ಎಂಬುದು ಒಂದು ಅಂಗವಾದರೆ ಯಾವುದರ ಜ್ಞಾನ ಬರುತ್ತದೆಯೋ ಅಂದರೆ ಜ್ಞೇಯ ಅದೇ ದೃಶ್ಯ ಜಗತ್ತು ಎರಡನೇ ಅಂಗವಾಗಿರುತ್ತದೆ. ಅನುಭವ ಪಡೆದುಕೊಳ್ಳುವ ಅನೇಕ "ನಾನು" ಎಂಬವುಗಳು ಈ ಜಗತ್ತಿನಲ್ಲಿರುತ್ತವೆ. ಅದರಲ್ಲಿಯ ಪ್ರತಿಯೊಂದು "ನಾನು" ಎಂಬುದು ಜಗತ್ತನ್ನು "ನೀನು" ಎಂಬ

ಭಾವನೆಯಿಂದ ಅಂದರೆ ಬೇರೆತನದ ಭಾವನೆಯಿಂದ
ನೋಡುತ್ತದೆ, ಪ್ರತಿಯೊಂದು "ನಾನು" ಎಂಬುದ
ಇಂದ್ರಿಯಗಳ ಮೂಲಕ ಜಗತ್ತನ್ನು ಒಳಗೆ ತಗೆದ
ಕೊಳ್ಳುತ್ತದೆ. ಅದರ ಬಗ್ಗೆ ವಿಚಾರ ಮಾಡಿ ಅದಕ್ಕೆ
ಅರ್ಥ ಹಚ್ಚುತ್ತದೆ. ಅದರ ನೆನಪು ಇಡುತ್ತದೆ ಹಾಗೂ
ಅದರ ಆಧಾರದಿಂದ ಸುಖವನ್ನು ಅನುಭವಿಸುತ್ತದ
ಹಾಗೂ ದುಃಖಕ್ಕೀಡಾಗುತ್ತದೆ. ಆಯುಷ್ಯದ ತುಂಬ
ನಡೆಯುವ ಅದರ ಈ ಧಡಪಡವು ಹಿಂದೆ ಈಗ ಹಾಗೂ
ಮುಂದೆ ಎಂಬ ಕಾಲದ ಚೌಕಟ್ಟಿನಲ್ಲಿ ನಡೆಯುತ್ತದೆ
ಉದಾಹರಣೆಗೆ ನೆನಪುಗಳ ಸಂಬಂಧವು ಗತಕಾಲ
ದೊಂದಿಗೆ, ವಿಷಯ ಸೇವಿಸುವ ಸಂಬಂಧವು ವರ್ತಮಾನ
ಕಾಲದೊಂದಿಗೆ ಹಾಗೂ ಆಶೆ ಅಪೇಕ್ಷೆ, ವಾಸನೆ, ತೃಪ್ತಿ
ಹಾಗೂ ಚಿಂತೆ ಮುಂತಾದವುಗಳ ಸಂಬಂಧವು ಭವಿಷ್ಯ
ಕಾಲದೊಂದಿಗೆ ಇರುತ್ತದೆ. ಇಷ್ಟೇ ಅಲ್ಲದೇ ದೇಹ
ಬುದ್ಧಿಯ ಜೀವನದಲ್ಲಿ ತನ್ನ ಸ್ಮರಣೆ ಹಾಗೂ ಕಾಲದ
ಕ್ಷಣವು ಒಂದಕ್ಕೊಂದು ಹತ್ತಿಕೊಂಡೇ ನಡೆಯುತ್ತಿರು
ತ್ತವೆ. ತನ್ನ ವಿಸ್ಮರಣೆಯಾಯಿತೆಂದರೆ ಕಾಲದ ಪ್ರಜ್ಞೆ
ಹೋಗುತ್ತದೆ. ಕಾಲದ ಮರ್ಯಾದೆ ದಾಟಿತೆಂದರೆ
ಸ್ವಾನಂದದ ಕಕ್ಷೆಯಲ್ಲಿ ಪ್ರವೇಶಿಸುತ್ತೇವೆ. ಆದ್ದರಿಂದ
ದೇಹಬುದ್ಧಿಯ "ನಾನು" ಎಂಬುದನ್ನು ಮರೆಯುವದ
ರಲ್ಲಿ ಸಮಸ್ತ ಪರಮಾರ್ಥವು ಅಡಕವಾಗಿದೆ.

★ ಪ್ರದೀಪ ಹದಿಮೂರು ★

ದೇಹಬುದ್ಧಿಯ ಮೂರು ಅವಸ್ಥೆಗಳು

ಕಾಲವು ಅಖಂಡವಾಗಿ ಹರಿಯುತ್ತದೆ. ಆದ್ದರಿಂದ ನಿರಂತರ ಪರಿವರ್ತನೆ ಆಗುತ್ತಿರುವದೇ ಕಾಲದ ದೃಶ್ಯ ಸ್ವರೂಪವೆಂದು ತಿಳಿಯಬೇಕು. ಅಂದರೆ ಕಾಲಾಧೀನ ವಾದ ದೇಹಬುದ್ಧಿಯ "ನಾನು" ಎಂಬುದು ನಿರಂತರ ಪರಿವರ್ತನೆ ಹೊಂದುತ್ತದೆ ಹಾಗೂ ಅದಕ್ಕೆ ಮೂರು ಪ್ರಕಾರದ ಅವಸ್ಥೆ ಬರುತ್ತವೆ. ಜಾಗೃತವು ಅದರ ಮೊದಲನೇ ಅವಸ್ಥೆ, ಸ್ವಪ್ನವು ಎರಡನೇ ಅವಸ್ಥೆ, ಗಾಢ ನಿದ್ರೆಯು ಮೂರನೇ ಅವಸ್ಥೆಯಾಗಿರುತ್ತದೆ. ಜಾಗೃತ ಅವಸ್ಥೆಯಲ್ಲಿ ದೇಹದ ಮೂಲಕ ಜಗತ್ತಿನ ಸಹಾಯ ದಿಂದ ತನ್ನ ವಾಸನೆಗಳನ್ನು ತೃಪ್ತ ಪಡಿಸಿಕೊಳ್ಳುವದ ಕ್ಕಾಗಿ ದೇಹಬುದ್ಧಿಯ "ನಾನು" ಎಂಬುದು ಹಗಲಿ ರಳು ಪ್ರಯತ್ನ ಮಾಡುತ್ತದೆ. ಆದರೆ ಯಾರ ವಾಸನೆ ಗಳು ಪೂರ್ಣವಾಗಿ ತೃಪ್ತವಾಗಲು ಶಕ್ಯವೇ ಇಲ್ಲ ವೆಂಬುದೇ ಜಗತ್ತಿನ ರಚನೆ ಇರುವದರಿಂದ ದೇಹಬುದ್ಧಿ ಯಲ್ಲಿ ಬಾಳುವ ಜನರಿಗೆ ಜೀವನದಲ್ಲಿ ನಿಜವಾದ ಸಂತೋಷ ನಿಜವಾದ ತೃಪ್ತಿ ಅಥವಾ ನಿಜವಾದ ಸಮಾ ಧಾನ ಎಂದಿಗೂ ಸಿಗುವದಿಲ್ಲ.

ಜಾಗೃತ ಅವಸ್ಥೆಯಲ್ಲಿ ಸಂಗ್ರಹಿಸಿದ ನಾನಾ ಪ್ರಕಾ ರದ ಉಚಿತ ಅನುಚಿತ ಅನುಭವ ಹಾಗೂ ಅತೃಪ್ತ

ವಾಸನೆಗಳು ಮನಸ್ಸಿನ ಕೆಳಗಿನ ಸ್ತರದಲ್ಲಿ ತುಂಬಿಕೊಂಡಿರುತ್ತವೆ. ನಿದ್ರೆಹತ್ತಿ ಜಾಗೃತ ಅವಸ್ಥೆಯು "ನಾನು" ಎಂಬುದರ ಒತ್ತಡ ತಪ್ಪಿತೆಂದರೆ ಅವು ಮೇಲೆ ಎದ್ದು ಬರುತ್ತವೆ. ಹಾಗೂ ಅನಂತರೂಪದ ವಿಚಿತ್ರವಾದ ಸ್ವಪ್ನವೇಶದಲ್ಲಿ ಅಂತಃಕರಣದಲ್ಲಿ ಪ್ರಗಟವಾಗುತ್ತವೆ. ಸ್ವಪ್ನದಲ್ಲಿಯೂ ಕೂಡ ವಾಸನೆಗಳು ತೃಪ್ತವಾಗುತ್ತವೆ. ಸುಖದುಃಖಗಳ ಅನುಭವ ಬರುತ್ತದೆ. ಹಾಗೂ ಸ್ಥಲ ಕಾಲದ ಮರ್ಯಾದೆಯಲ್ಲಿ ಅನೇಕ ವ್ಯಕ್ತಿಗಳೊಂದಿಗೆ ವ್ಯವಹಾರ ಮಾಡಲು ಬರುತ್ತದೆ. ಜಾಗೃತ ಅವಸ್ಥೆಯಲ್ಲಿ ಅನುಭವಿಸಿದ ಅನೇಕ ವಿಷಯಗಳು ಪ್ರತಿಮಾರೂಪದಿಂದ ಸ್ವಪ್ನದಲ್ಲಿ ಬರುತ್ತವೆ. ಗಾಢ ನಿದ್ರೆಯಲ್ಲಿ ಮಾತ್ರ ಈ ದೇಹಬುದ್ಧಿಯು "ನಾನು" ಎಂಬುದು ಸಂಪೂರ್ಣ ಲಯವಾಗಿ ಹೋಗುತ್ತದೆ. ಅದರೊಂದಿಗೆ ಸಂಪೂರ್ಣ ದೃಶ್ಯ ಜಗತ್ತು ಶಾಂತವಾಗುತ್ತದೆ ಹಾಗೂ ಅಜ್ಞಾನ ಮಾತ್ರ ಶೇಷ ಉಳಿಯುತ್ತದೆ

ದೇಹಬುದ್ಧಿ ಜೀವಂತ ಇರುವವರೆಗೆ ಈ ಮೂರು ಅವಸ್ಥೆಗಳು ತಪ್ಪುವದಿಲ್ಲ. ಆತ್ಮದರ್ಶನವಾಗುವದಕ್ಕೆ ಈ **ಮೂ**ರು ಅವಸ್ಥೆ ದಾಟಿ ನಾಲ್ಕನೇಯದಾದ ತುರ್ಯಾವಸ್ಥೆಯಲ್ಲಿ ಪ್ರವೇಶಿಸಬೇಕಾಗುತ್ತದೆ.

★ "ಪ್ರದೀಪ ಹದಿನಾಲ್ಕು" ★

"ನಾನು ಸಾಕ್ಷಿರೂಪನಾಗಿರುತ್ತೇನೆ"

ಯಾವದಾದರೊಂದು ಘಟನೆ ನಡೆಯುತ್ತಿರುವಾಗ

ಆದರಲ್ಲಿ ಭಾಗವಹಿಸದೆ ಅದನ್ನು ಕೇವಲ ದೂರದಿಂದ (ಬೇರೆತನದಿಂದ) ನೋಡುತ್ತಿರುವವಕ್ಕೆ ಸಾಕ್ಷಿ ಎನ್ನುತ್ತಾರೆ. ಆತ್ಮಸ್ವರೂಪವಾಗಿರುವ ಹಾಗೂ ಆತ್ಮಬುದ್ಧಿಯಿಂದ ಪ್ರಗಟವಾಗುವ ನಮ್ಮ ನಿಜವಾದ "ನಾನು" ಎಂಬುದು ದೇಹಬುದ್ಧಿಯು ಅವಸ್ಥಾತ್ರಯಗಳನ್ನು ಕೇವಲ ಸಾಕ್ಷಿಭಾವದಿಂದ ನೋಡುತ್ತದೆ. ಜಾಗೃತ ಅವಸ್ಥೆಯಲ್ಲಿ ಜಗತ್ತಿನ ವ್ಯವಹಾರದಲ್ಲಿ "ನಾನು" ಎಂಬ ಭಾವದಿಂದ ಭಾಗ ತೆಗೆದುಕೊಳ್ಳುತ್ತಿರುತ್ತದೆ ನಾನು ಎಂಬುದು ಜಾಗೃತ ಅವಸ್ಥೆಯಲ್ಲಿಯು ಜಗತ್ತಿನ ವ್ಯವಹಾರದಲ್ಲಿ ಅಹಂಭಾವದಿಂದ ನಾನು ಎಂಬ ಭಾವನೆಯಿಂದ ಭಾಗ ತೆಗೆದುಕೊಳ್ಳುತ್ತಿರುತ್ತದೆ "ನಾನು ಜಾಗೃತವಾಗಿರುತ್ತೇನೆ". "ನಾನು ಈ ಅನುಭವ ತೆಗೆದುಕೊಳ್ಳುತ್ತೇನೆ." ಎಂಬ ಬೇರೆ ತನದ ಭಾವದಿಂದ ನಾವು ನಮ್ಮ ಕಡೆಗೆ ನೋಡಲು ಶಕ್ಯವಿದೆ. ಸ್ವಪ್ನ ಬಿದ್ದಾಗ ನನಗೆ ಸ್ವಪ್ನ ಬಿದ್ದಿರುತ್ತದೆ ಎಂಬ ಅರಿವು ಇರುತ್ತದೇನೊ ನಿಜ ಅವರೆ ಎಚ್ಚರವಾದ ಮೇಲೆ ನಾನು ಸ್ವಪ್ನ ನೋಡಿದೆನು ಎಂಬ ಸ್ಮರಣೆ ಬರುತ್ತದೆ ಸ್ವಪ್ನ ಬಿದ್ದಿರುವಾಗ ನಿಜವಾದ "ನಾನು" ಎಂಬುದು ಅದರ ಹೊರಗೆ ಇದ್ದುಕೊಂಡು ಬೇರೆತನದಿಂದ ನೋಡುತ್ತಿದ್ದೆನೆಂಬುವದರಲ್ಲಿ ಸಂಶಯವಿಲ್ಲ ಜಾಗೃತ ಅವಸ್ಥೆಯಲ್ಲಿ ಹಾಗೂ ಸ್ವಪ್ನ ಕಾಲದಲ್ಲಿ ಜ್ಞಾತೃತ್ವಭಾವದಿಂದ ವ್ಯವಹರಿಸುವ ದೇಹಬುದ್ಧಿಯು "ನಾನು" ಎಂಬುದು ಗಾಢ ನಿದ್ರೆಯಲ್ಲಿ ಸಂಪೂರ್ಣ

ವಾಗಿ ಅಂತರ್ಧಾನವಾಗುತ್ತದೆ. ಆದರೂ ಕೂಡ ಎಚ್ಚರವಾದ ಮೇಲೆ "ನನಗೆ ಗಾಢ ನಿದ್ರೆ ಹತ್ತಿತ್ತು" ಎಂಬ ಸ್ಮರಣೆ ಉಳಿಯುತ್ತದೆ. ಮೊದಲು ಆದ ಅನುಭವಗಳ ಸ್ಮರಣೆ ಆಗುತ್ತದೆ ಅಂದರೆ ನಿತ್ಯ ಪರಿಚಯ ದ ನಮ್ಮ "ನಾನು" ಎಂಬುದು ಅಲ್ಲಿ ಉಳಿಯದಿದ್ದರೂ ಸುಷುಪ್ತಿಯನ್ನು ಬೇರೆತನದಿಂದ ನೋಡುವ ಎರಡನೇಯವನಾದ ಅಥವಾ ನಿಜವಾದ "ನಾನು" ಎಂಬುದು ಜಾಗೃತವಾಗಿದ್ದುಕೊಂಡು ಅನುಭವ ತೆಗೆದುಕೊಳ್ಳುತ್ತಿತ್ತೆಂಬುದು ಸ್ಪಷ್ಟವೇ ಇರುತ್ತದೆ.

ಜಾಗೃತಿ, ಸ್ವಪ್ನ ಹಾಗೂ ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಅವುಗಳ ಹೊರಗೆ ಇದ್ದುಕೊಂಡು ನೋಡುವ "ನಾನು" ಎಂಬುದು ಯಾವಾಗಲೂ ನಮ್ಮ ಹೃದಯದಲ್ಲಿ ಸಾಕ್ಷಿಭಾವದಿಂದ ಇರುತ್ತದೆ. ಆದೇ "ನಾನು" ಎಂಬುದೇ ನಮ್ಮ ನಿಜವಾದ ಶುದ್ಧ ಹಾಗೂ ಮೂಲ ಸ್ವರೂಪವಾಗಿರುತ್ತದೆ ಆದ್ದರಿಂದ ತನ್ನ ಸಹಿತ ಸಂಪೂರ್ಣ ಜಗತ್ತಿನ ಕಡೆಗೆ ಹಾಗೂ ಜೀವನದ ಕಡೆಗೆ ಕೇವಲ ಸಾಕ್ಷಿತ್ವದಿಂದ ನೋಡಲು ಕಲಿಯುವದೇ ಪರಮಾರ್ಥದ ರಹಸ್ಯವಾಗಿರುತ್ತದೆ..

★ ಪ್ರದೀಪ ಹದಿನೈದು ★

"ನಾನು ಸಚ್ಚಿದಾನಂದ ಸ್ವರೂಪನಾಗಿರುತ್ತೇನೆ"

ಸತ್ ಎಂದರೆ ಯಾವಾಗಲೂ ಇರುವದು. ಅಂದರೆ

ಯಾವಾಗಲೂ ಅಭಾವ ಇಲ್ಲದೇ ಇರುವದು "ನಾನು" ಎಂಬುದು ಸತ್ ಆಗಿರುತ್ತದೆ. ಏಕೆಂದರೆ ಅದು ಇಲ್ಲದ ಅವಸ್ಥೆಯೇ ನಮಗೆ ಗೊತ್ತಿರುವದಿಲ್ಲ. ಜಗತ್ತಿನಲ್ಲಿಯು ಹಾಗೂ ಜಗತ್ತಿನ ಹೊರಗಿನ ಎಲ್ಲ ವಸ್ತುಗಳ ವಿಷಯದಲ್ಲಿ ಹಾಗೂ ಈಶ್ವರನ ವಿಷಯದಲ್ಲಿಯೂ ಕೂಡ ನಾವು ಸಂಶಯ ತೆಗೆದುಕೊಳ್ಳಬಹುದು. ಆದರೆ ನಮ್ಮ ಸ್ವಂತದ ಇರುವಿಕೆಯ ವಿಷಯದಲ್ಲಿ ಮಾತ್ರ ನಾವು ಸಂಶಯ ತೆಗೆದುಕೊಳ್ಳಲು ಶಕ್ಯವೇ ಇಲ್ಲ. ಏಕೆಂದರೆ ಸಂಶಯಪಡುವ "ನಾನು" ಮೊದಲು ಇರದ ಹೊರತು ಸಂಶಯ ಬರುವದಾದರು ಯಾರಿಗೆ ?

ಚಿತ್ ಎಂದರೆ ಚೈತನ್ಯ ಅಂದರೆ ಜೀವಂತವಾಗಿರುವ ಅರಿವು. "ನಾನು ಇರುತ್ತೇನೆ ಹಾಗು ಜೀವಂತವಾಗಿರುತ್ತೇನೆ" ಎಂಬ ಅರಿವು ಅತ್ಯಂತ ಒಳಗಿನಿಂದ ನಮಗೆ ಯಾವಾಗಲೂ ಆಗುತ್ತಿರುತ್ತದೆ. "ಆಪುಲೆ ಮರಣ ಪಾಹಿಲೆ ಮ್ಯಾ ಡೋಳಾ । ತೋ ಝಾಲಾ ಸೋಹಳಾ ಅನುಪಮ್ಯ ॥ (ನಾನು ನನ್ನ ಮರಣವನ್ನು ನನ್ನ ಕಣ್ಣುಗಳಿಂದಲೇ ನೋಡಿದೆನು. ಅದೊಂದು ಅನುಪಮ ವೈಭವವಾಗಿತ್ತು") ಎಂಬ ಈ ಅನುಭವದಲ್ಲಿ ಸುಳ್ಳಾದ "ನಾನು" ಎಂಬುದರ ನಾಶವಾಗುತ್ತದೆ. ಆದರೆ ಈ ನಾಶವನ್ನು ನೋಡುವ ನಿಜವಾದ "ನಾನು" ಎಂಬುದು ಮಾತ್ರ ಹೇಗಿತ್ತೋ ಅಬಾಧಿತವಾಗಿ ಉಳಿಯುತ್ತದೆ.

ಆನಂದವೆಂದರೆ ಸಮಾಧಾನ ಅಂದರೆ ಸಂಪೂರ್ಣ ಸುಖದ ಸ್ಥಾನ. ಯಾವದೇ ಅವಸ್ಥೆಯಲ್ಲಿ ಹಾಗೂ ಯಾವದೇ ಪ್ರಸಂಗದಲ್ಲಿ ನಾನು ನನಗೆ ಬೇಡವೆಂದು ಯಾರಿಗೂ ಅನಿಸುವದಿಲ್ಲ. ದೇಹಕ್ಕೆ ಅತ್ಯಂತ ದುಃಖವಾಗುತ್ತಿರುವಾಗ ಕೂಡ ಆನಂದದ ಅಪೇಕ್ಷೆಯಿಂದಲೇ ಸಾಯಬೇಕೆಂದನಿಸುತ್ತದೆ. ಅಂದರೆ ದೇಹ ಬಿಡಬೇಕೆಂದೆನಿಸುತ್ತದೆ. ಅಂತರ್ಯಾಮಿಯಾದ ಸಚ್ಚಿದಾನಂದ ಸ್ವರೂಪಿಯಾದ "ನಾನು" ಎಂಬುದನ್ನು ಸಾಕ್ಷಾತ್ ತಿಳಿದುಕೊಂಡು ಸ್ವಾನಂದದಲ್ಲಿ ಮಗ್ನನಾಗಿರುವದೇ ನಿಜವಾದ ಪರಮಾರ್ಥವಾಗಿರುತ್ತದೆ.

★ ಪ್ರದೀಪ ೯ ದಿನಾಂಕ ★

ಯಾವದು ಪಿಂಡದಲ್ಲಿಯೋ ಅದೇ ಬ್ರಹ್ಮಾಂಡದಲ್ಲಿ

ಪಿಂಡವೆಂದರೆ ದೇಹ ಹಾಗೂ ಬ್ರಹ್ಮಾಂಡವೆಂದರೆ ವಿಶ್ವ. ಯಾವದು ಶುದ್ಧ ಸಚ್ಚಿದಾನಂದ ರೂಪದಿಂದ ನಮ್ಮ ದೇಹದಲ್ಲಿರುತ್ತದೆಯೋ ಅದೇ ಸ್ವರೂಪವು ಈ ವಿಶಾಲ ವಿಶ್ವದಲ್ಲಿ ವ್ಯಾಪಿಸಿ ಈಶ್ವರನಾಗಿ ಲೀಲೆ ಮಾಡುತ್ತದೆ. ಆದ್ದರಿಂದ ನಮ್ಮ ಹೃದಯದಲ್ಲಿಯೇ ಇಳಿದು ಒಳಗಿರುವ "ನಾನು" ಎಂಬುವದರ ದರ್ಶನ ಪಡೆಯುವದರಿಂದಲೇ ಈಶ್ವರ ದರ್ಶನವು ತಾನಾಗಿಯೇ ಆಗುತ್ತದೆ. ನಾನು ದೇಹದ ಮಟ್ಟಿಗೆ ಸಣ್ಣವನು ಹಾಗೂ ಮರ್ಯಾದಿತನಾದವನಿರುತ್ತೇನೆ ಎಂಬ ಅಜ್ಞಾನ ಭಾವನೆಯು

ಲೋಪವಾಗುತ್ತದೆ. ಹಾಗೂ ನಾನು ವಿಶ್ವದಷ್ಟು ವಿಶಾಲನು ಎಂಬ ನಿಃಸಂಶಯವಾದ ಜ್ಞಾನಭಾವನೆಯು ಅಂತಃಕರಣದಲ್ಲಿ ಸ್ಥಿರವಾಗುತ್ತದೆ. ದೇಹಬುದ್ಧಿಯುಳ್ಳಿರುವಾಗ ನಡೆಯುವ ತರ್ಕ ಸಾಮ್ರಾಜ್ಯವು ಸಮಾಪ್ತವಾಗಿ ಆತ್ಮಬುದ್ಧಿಯ ಉದಯವನ್ನು ತೋರಿಸುವ ಪ್ರತಿಭೆಯು ಸಾಮ್ರಾಜ್ಯವು ಆರಂಭವಾಗುತ್ತದೆ. ಜಾಗೃತಿ ಸ್ವಪ್ನ ಹಾಗೂ ಸುಷುಪ್ತಿ ಎಂಬ ದೇಹಬುದ್ಧಿಯ ಅವಸ್ಥೆಗಳನ್ನು ಹಿಂದೆ ಹಾಕಿ ಮನಸ್ಸು ಆತ್ಮಬುದ್ಧಿಯ ತುರ್ಯಾ ಎಂಬ ಹೆಸರಿನ ನಾಲ್ಕನೇ ಅವಸ್ಥೆಯಲ್ಲಿ ಪ್ರವೇಶಿಸುತ್ತದೆ ಜ್ಞಾತೃದೊಂದಿಗೆ ಜ್ಞೇಯದ ತಾದಾತ್ಮ್ಯತೆ ಉಂಟಾಗಿ ಜ್ಞಾನವಾಗುವದೇ ಆತ್ಮಬುದ್ಧಿಯ ವೈಶಿಷ್ಟ್ಯವಾಗಿರುವದರಿಂದ ಪ್ರತಿಭೆಯು ಜ್ಞಾನವು ಪೂರ್ಣ ನಿಃಸಂಶಯ ಹಾಗೂ ನಿಜವಾದದ್ದಿರುತ್ತದೆ. ಮುಂದೆ ತುರ್ಯಾವಸ್ಥೆಯು ಕೂಡ ವಿಲೀನವಾಗಿ ಕೇವಲ ಪರಮಾತ್ಮ ಸ್ವರೂಪವೇ ಶೇಷ ಉಳಿಯುತ್ತದೆ ವಿಚಾರ ಹಾಗೂ ಕಲ್ಪನೆಗಳನ್ನು ಉಪಯೋಗಿಸಿ ದೃಶ್ಯವನ್ನು ಗ್ರಹಣ ಮಾಡುವ ಮನಸ್ಸೇ ಅಲ್ಲಿ ಇಲ್ಲದ್ದರಿಂದ ಅಂದರೆ ಮನಸ್ಸು ಉನ್ಮನವಾದ್ದರಿಂದ ಪರಮಾತ್ಮ ಸ್ವರೂಪವು ಹೀಗಿದೆ ಹಾಗಿದೆ ಎಂದು ಹೇಳಲು ಬರುವದಿಲ್ಲ. ಹೇಳುವದೇ ಆದರೆ ಅದು ಏನು ಇಲ್ಲವೋ ಅದನ್ನು ಹೇಳಲು ಬರುತ್ತದೆ. ಅದು ಇರುತ್ತದೆ ಎಂಬ ನಿಃಸಂಶಯ ಹಾಗೂ ನಿರಂತರವಾದ ಅನುಭವದಿಂದ ಸುಮ್ಮನೆ ಕೂಡುವದೆ.

ಅದರ ಸರ್ವೋತ್ಕೃಷ್ಟ ವರ್ಣನೆಯಾಗಿರುತ್ತದೆ. ಆದ್ದರಿಂದ ಮನಸ್ಸನ್ನು ಉನ್ಮನಗೊಳಿಸಿ ಅಖಂಡಮೌನದಲ್ಲಿರುವದು ಹಾಗೂ ಮೌನದಿಂದಲೆ ಪರಮಾತ್ಮ ಸ್ವರೂಪವನ್ನು ಉತ್ಕೃಷ್ಟವಾಗಿ ತಿಳಿಸಿ ಹೇಳುವದು ಇದು ಪರಮಾರ್ಥದಲ್ಲಿಯ ಕೊನೆಯ ಹಾಗೂ ಶ್ರೇಷ್ಠ ಅನುಭವವಾಗಿರುತ್ತದೆ ಎಂದು ತಿಳಿಯುತ್ತಾರೆ

★ ಪ್ರದೀಪ ಹದಿನೇಳು ★

ಈಶ್ವರನ ಲೀಲೆ

ಒಂದು ಸಚ್ಚಿದಾನಂದದ ಹೊರತಾಗಿ ಬೇರೆ ಏನೂ ಇಲ್ಲವೇ ಇಲ್ಲ. ಆದ್ದರಿಂದ ನಮಗೆ ದೃಶ್ಯರೂಪದಲ್ಲಿ ಕಾಣುವ ವಿಶ್ವವು ಆನಂದದಿಂದಲೇ ನಿರ್ಮಾಣವಾದುದು. ಆನಂದ ಸ್ವರೂಪವಾಗಿರುವ ಆನಂದವನ್ನೆ ಸಾಧನೆಯನ್ನಾಗಿ ಮಾಡಿಕೊಂಡಿರುವ ಆನಂದಕ್ಕಾಗಿಯೇ ಆನಂದ ರೂಪವಾಗಿ ಆಟ ಆಡುವ ಬ್ರಹ್ಮಾನಂದವು ಯಾವಾಗ ಮೇಲೆದ್ದು ಬರುತ್ತದೊ ಆವಾಗ ಅದು ಈಶ್ವರ ಸ್ವರೂಪದಿಂದ ನಮ್ಮ ಅನುಭವದ ಕ್ಷೇತ್ರದಲ್ಲಿ ಬರುತ್ತದೆ. ಆನಂದಮಯ ಈಶ್ವರನು ಒಂದು ಅಂಗದಿಂದ ಪೂರ್ಣ ಜ್ಞಾನ ಸ್ವರೂಪವಾದ ಅಥವಾ ಶುದ್ಧ ಅರಿವಿನ ಸ್ವರೂಪವಾದ "ಶಿವ" ಎಂದು ನಮ್ಮ ಅನುಭವಕ್ಕೆ ಬರುತ್ತಾನೆ ಹಾಗೂ ಅದೇ ಈಶ್ವರನು ಎರಡನೆ ಅಂಗದಿಂದ ಅನಂತ ಕ್ರಿಯಾ ಶಕ್ತಿ ರೂಪವಾದ ಅಥವಾ ಕಾಲರೂಪನಾಗಿ ತೋರು

ತ್ತಾನೆ ಲೀಲೆಯ ನಿಮಿತ್ತದಿಂದ ಸಹಜವಾಗಿ ವಿಶ್ವ ನಿರ್ಮಾಣ ಮಾಡುವ ಹಾಗೂ ಆ ವಿಶ್ವವನ್ನು ಕೊನೆಗೆ ಸ್ವಾನಂದದ ಕಡೆಗೆ ಎಳೆಯುವ ಈಶ್ವರನು ನಿಜವಾಗಿಯೂ ಅನಂತರೂಪಗಳಿಂದ ಹಾಗೂ ಅನಂತ ಗುಣಗಳಿಂದ ಕೂಡಿಕೊಂಡವನಾಗಿ ದೃಶ್ಯದಲ್ಲಿ ಬರುತ್ತಾನೆ.

ವಿಶ್ವದ ಯಾವದೇ ಅಂಗದ ಕಡೆಗೆ ನೋಡಿದರೂ ಅದರಲ್ಲಿ ಜ್ಞಾನದ ಪೂರ್ಣತೆ, ರಚನೆಯ ಸೂಕ್ಷ್ಮತೆ, ಆಕಾರದ ನಾವಿನ್ಯತೆ ಹಾಗೂ ಶಕ್ತಿಯ ಅನಂತತೆ ಕಂಡು ಬರುತ್ತದೆ. ಈ ನಾಲ್ಕು ಗುಣಗಳು ಮನುಷ್ಯನಲ್ಲಿ ವಿಶೇಷವಾಗಿ ವಿಕಸಿತವಾದದ್ದು ಅತ್ಯಂತ ಸ್ಪಷ್ಟವಾಗಿ ಕಂಡು ಬರುತ್ತದೆ. ಅರ್ಥಾತ್ ಮನುಷ್ಯನು ಈಶ್ವರನಿಗೆ ಅತ್ಯಂತ ಹತ್ತಿರವಿರುತ್ತಾನೆ. ಇಷ್ಟೆ ಅಲ್ಲದೇ ವಿಚಾರ ಪೂರ್ವಕ ಸ್ವಾನಂದದ ಕಡೆಗೆ ಹೆಜ್ಜೆ ಹಾಕುತ್ತಿರುವ ಮನುಷ್ಯನು ಈಶ್ವರನ ಜೊತೆಗೆ ತಾದಾತ್ಮ್ಯತೆಯನ್ನು ಅನುಭವಿಸಲು ಸಮರ್ಥನಾಗುತ್ತಾನೆ. ನಮ್ಮ ದೇಹದಲ್ಲಿ ಹಾಗೂ ವಿಶ್ವದ ವಿವಿಧ ವ್ಯವಹಾರದಲ್ಲಿ ಹೆಜ್ಜೆ ಹೆಜ್ಜೆಗೂ ಕಂಡು ಬರುವ ಈಶ್ವರನ ಲೀಲೆಯ ನಿಜವಾದ ಅರಿವು ಆಗಿ ಯಾವ ಮನುಷ್ಯನು ಅವನೊಂದಿಗೆ ತಾದಾತ್ಮ್ಯತೆ ಹೊಂದುತ್ತಾನೋ ಅವನ ಮೇಲೆ ಈಶ್ವರನು ಕೃಪೆ ಮಾಡುತ್ತಾನೆ. ಇಂಥ ಶರಣಾಗತ ವ್ಯಕ್ತಿಯ ಸಲುವಾಗಿ ಎಷ್ಟೋ ವೇಳೆ ಈಶ್ವರನು ವಿಶೇಷ ರೂಪ ತೆಗೆದುಕೊಂಡು ಅಥವಾ ಮನುಷ್ಯ ದೇಹಧಾರಣೆ ಮಾಡಿ

ಕೊಂಡು ದೃಶ್ಯದಲ್ಲಿ ಇಳಿದು ಬರುತ್ತಾನೆ. ಪ್ರತಿಯೊಬ್ಬ ಭಕ್ತನು ಈಶ್ವರನ ಒಂದು ಅವತಾರವೆ ಆಗಿರುತ್ತಾನೆ ಎಂದು ಸತ್ಪುರುಷರು ಹೇಳುತ್ತಾರೆ.

ತಾತ್ಪರ್ಯವೇನೆಂದರೆ:— ನಮಗೆ ಮನುಷ್ಯ ದೇಹರೂಪದಿಂದ ಸ್ವಾನಂದ ಅನುಭವಿಸುವ ಅವಕಾಶವು ಪ್ರಾಪ್ತವಾಗಿರುತ್ತದೆ. ಅದನ್ನು ಸಾಧಿಸುವದಕ್ಕಾಗಿ ಈಶ್ವರನಿಗೆ ಅಥವಾ ಸದ್ಗುರುಗಳಿಗೆ ಮನಃಪೂರ್ವಕ ಶರಣು ಹೋಗಬೇಕು ಹಾಗೂ ಈಶ್ವರನ ಅನುಗ್ರಹದಿಂದ ಸ್ವಾನಂದವನ್ನನುಭವಿಸಬೇಕು ಇದೇ ಪರಮಾರ್ಥದ ಸನಾತನ ರಾಜಮಾರ್ಗವಾಗಿರುತ್ತದೆ.

★ ಪ್ರದೀಪ ಹದಿನೆಂಟು ★

ವಿಶ್ವದಲ್ಲಿಯ ಎರಡು ಶಕ್ತಿಗಳು

ಜಗತ್ತಿನಲ್ಲಿಯ ಘಟನಾ ಪ್ರವಾಹಕ್ಕೆ ಕಾಲಚಕ್ರ ಎನ್ನುತ್ತಾರೆ ಹಾಗೂ ಇದು ಅತ್ಯಂತ ಯೋಗ್ಯವೇ ಇರುತ್ತದೆ. ಪ್ರತಿಯೊಂದು ಘಟನೆಯಲ್ಲಿ ಅದೃಶ್ಯದೊಳಗಿನ ದೃಶ್ಯವು ಹೊರಗೆ ಬರುತ್ತದೆ, ಕೆಲವು ಸಮಯ ಉಳಿಯುತ್ತದೆ ಹಾಗೂ ಪುನಃ ಅದೃಶ್ಯದಲ್ಲಿಯೇ ಲುಪ್ತವಾಗುತ್ತದೆ. ಅದೃಶ್ಯ ದೃಶ್ಯ ಅದೃಶ್ಯ ಈ ರೀತಿಯಾದ ಚಕ್ರಾಕಾರ ವ್ಯವಹಾರವು ಈ ಜಗತ್ತಿನಲ್ಲಿ ಯಾವಾಗಲೂ ನಡದೇ ಇರುತ್ತದೆ.

ದೃಶ್ಯವು ಸ್ಥಲ ಕಾಲದಿಂದ ಮರ್ಯಾದಿತವಾದದ್ದಿರುತ್ತದೆ. ವಿಶೇಷವಾದದ್ದು ಹಾಗೂ ಅಸ್ಥಿರವಾದದ್ದು

ಹಾಗೂ ಅದೃಶ್ಯದ ಸತ್ತೆಯಿಂದಲೇ ಬದುಕಿರುವದಾಗಿರು ತ್ತದೆ. ಅದೃಶ್ಯವು ಸ್ಥಲಕಾಲದಿಂದ ಮರ್ಯಾದಿತ ವಾದದ್ದಿರುವದಿಲ್ಲ ಸಾಮಾನ್ಯವಾದುದು ಹಾಗೂ ಸ್ಥಿರ ವಾಗಿ ಉಳಿಯುವಂತಹದಿರುತ್ತದೆ ಹಾಗೂ ದೃಶ್ಯದ ಮೂಲಕಾರಣಆಗಿರುತ್ತದೆ. ಅದೃಶ್ಯವು ಶ್ರೇಷ್ಠ ಆದರೆ ಅದರಿಂದ ನಿರ್ಮಾಣವಾಗುವ ದೃಶ್ಯವು ಕನಿಷ್ಠವಾಗಿರು ತ್ತದೆ. ಅಂದರೆ ಅದೃಶ್ಯವನ್ನು ದೃಶ್ಯವನ್ನಾಗಿ ಮಾಡುವ ಶಕ್ತಿಯ ರೂಪವು ಕನಿಷ್ಠವಾದದ್ದು ಹಾಗೂ ದೃಶ್ಯವನ್ನು ಪುನಃ ಅದೃಶ್ಯದಲ್ಲಿ ತಿರುಗಿಸುವ ಶಕ್ತಿಯ ರೂಪವು ಶ್ರೇಷ್ಠವಾದದ್ದು. ಮನುಷ್ಯ ಜೀವನದಲ್ಲಿ ಎರಡು ರೂಪಗಳು ಅನುಭವದಲ್ಲಿ ಬರುತ್ತವೆ. ಅಲ್ಲದೇ ಶಕ್ತಿಯ ಯಾವ ರೂಪದೊಂದಿಗೆ ಸಹಕಾರ ತೋರಿಸಬೇಕೆಂಬು ದನ್ನು ನಿಶ್ಚಯಮಾಡುವ ಸ್ವಾತಂತ್ರ್ಯವು ಮನುಷ್ಯನಿಗೆ ಇರುತ್ತದೆ. ಆದರೆ ಈ ಕಾರಣದಿಂದ ಮನುಷ್ಯ ಜೀವನ ದಲ್ಲಿ ಸಂಘರ್ಷ ನಿರ್ಮಾಣವಾಗುತ್ತದೆ ಯಾವ ಮನು ಷ್ಯನು ದೃಶ್ಯವನ್ನು ಅಂದರೆ ದೇಹವನ್ನು ಸಂಪೂರ್ಣ ವಾಗಿ ಸತ್ಯವೆಂದು ತಿಳಿಯುವನೋ ಅವನು ಅತ್ಯಂತ ಕೆಳ ಗಿನ ಜ್ಞಾನ ಭೂಮಿಕೆಯಲ್ಲಿರುವನೆಂದು ತಿಳಿಯಬೇಕು. ಯಾವನು ಅದೃಶ್ಯವನ್ನು ಸತ್ಯವೆಂದು ತಿಳಿದು ಎಲ್ಲ ದೃಶ್ಯ ಘಟನೆಗಳ ಮೂಲ ಕಾರಣವನ್ನು ನಿಶ್ಚಿತ ವಾಗಿಯೂ ವಿಶ್ವಮನಸ್ಸಿನ ಸಂಕಲ್ಪದಲ್ಲಿರುತ್ತದೆ ಎಂದು ತಿಳಿಯುತ್ತಾನೋ ಅವನು ಮಧ್ಯದ ಜ್ಞಾನಭೂಮಿಕೆ

ಯಲ್ಲಿರುವನೆಂದು ತಿಳಿಯಬೇಕು. ಅನಂತ
ಆಗಲಿ ಅಥವಾ ಅದೃಶ್ಯವೇ ಆಗಲಿ ಎರಡ
ಸಾಗರದ ತರಂಗಗಳೆಂಬ ಪೂರ್ಣ ಅ
ಸ್ವಾನಂದದಲ್ಲಿ ಮುಳುಗಿರುವನೋ ಅವನು ಸ
ಜ್ಞಾನಭೂಮಿಕೆಯಲ್ಲಿರುವನೆಂದು ತಿಳಿಯಬೇ
ದೃಷ್ಟಿಯಿಂದ ಅಜಾತವಾದವೇ ಸತ್ಯವಾದದು
ಒಂದು ಆನಂದದ ಹೊರತಾಗಿ ಬೇರೆ ಯಾವು
ಅವನಿಗೆ ಉಳಿಯುವದಿಲ್ಲ.

★ ಪ್ರದೀಪ ಹತ್ತೊಂಬತ್ತು

ನಾದ ಬ್ರಹ್ಮ

ಅವಸ್ಥಾರಹಿತ ತುರ್ಯಾತೀತನಾದ ಪ
ವಿಶ್ವನಿರ್ಮಾಣ ಮಾಡುವದಕ್ಕಾಗಿ ತುರ್ಯಾ
ಪ್ರವೇಶಿಸಿ ಈಶ್ವರನಾಗುತ್ತಾನೆ. ಸ್ವಾನಂದ
ನಲ್ಲಿರುವ ಆ ಅವಸ್ಥೆಯಲ್ಲಿ "ನಾನು ಒಬ್ಬ
ಅನೇಕರಾಗಬೇಕು" ಎಂಬ ಸಂಕಲ್ಪವು ಅವ
ನಲ್ಲಿ ಉಂಟಾಗುತ್ತದೆ. ಈ ಸತ್ಯ ಸಂಕಲ್ಪ
ಜ್ಞಾನಮಯವಾಗಿರುತ್ತದೆ. ಜ್ಞಾನವು ಧ
ವಾಗಿರುತ್ತದೆ. ಧ್ಯಾನವು ಚಿಂತನಮಯವಾ
ಚಿಂತನೆಯು ವಿಚಾರಮಯವಾಗಿರುತ್ತದೆ.
ಕೇವಲ ಸ್ಫೂರ್ತಿಮಯವಾದ ಮೂಲ
ಸಂಕಲ್ಪವು ಅತ್ಯಂತ ಸೂಕ್ಷ್ಮ ಸ್ಪಂದನರೂಪ

ವಾಣಿಯಲ್ಲಿ ಪ್ರಗಟವಾಗುತ್ತದೆ. ಈ ನಿರಾಕಾರ ನಾದಕ್ಕೆ ವೇದಾಂತದಲ್ಲಿ ಪ್ರಣವ ಓಂಕಾರ ಅಥವಾ ಶಬ್ದ ಬ್ರಹ್ಮ ಎನ್ನುತ್ತಾರೆ. ಯೋಗಿಗಳು ಸೋಽಹಮ್ ಎನ್ನುತ್ತಾರೆ. ಹಾಗೂ ಸಂತರು ನಾಮ ಎನ್ನುತ್ತಾರೆ.

ಓಂಕಾರದಲ್ಲಿ ಶಿವ ಹಾಗೂ ಶಕ್ತಿ ಜ್ಞಾನ ಹಾಗೂ ಕ್ರಿಯಾ, ಅರಿವು ಹಾಗೂ ಕೃಪೆ. ಎರಡೂ ಅನಂತವಾಗಿ ಹಾಗೂ ಅವ್ಯಕ್ತವಾಗಿ ಸಾಮರಸ್ಯದಿಂದ ಇರುತ್ತವೆ. ವಿಶ್ವವು ಆಕಾರ ಪೊಂದತೊಡಗಿತೆಂದರೆ ಈ ಸಾಮರಸ್ಯವು ಭಂಗವಾಗುತ್ತದೆ. ಅನಂತರ ಕಾಲ ಪ್ರಾರಂಭವಾಗಿ ವಿಶ್ವಮನಸ್ಸು ನಿರ್ಮಾಣವಾಗುತ್ತದೆ. ಹಾಗೂ ಅವರೊಂದಿಗೆ ಕರ್ಮ ಪ್ರವಾಹದಲ್ಲಿ ತೊಡಗಿದ ಅಸಂಖ್ಯ ಜೀವಿಗಳ ಚಲನವಲನವು ಪ್ರಾರಂಭವಾಗುತ್ತದೆ. ಎಲ್ಲ ಜೀವಿಗಳಲ್ಲಿ ಕೇವಲ ಮನುಷ್ಯ ಶರೀರದಲ್ಲಿಯೇ ಮೂಲ ಸಂಕಲ್ಪದಲ್ಲಿಯ ಸ್ಪಂದನೆಯು ವಾಣಿಯ ರೂಪದಿಂದ ದೃಶ್ಯಸ್ವರೂಪಕ್ಕೆ ಬಂದಿರುತ್ತದೆ. ಆದ್ದರಿಂದಲೇ ವಾಣಿಯಲ್ಲಿ ಅನಂತ ಜ್ಞಾನ ಹಾಗೂ ಅನಂತ ಸಾಮರ್ಥ್ಯ ಸಂಗ್ರಹಿತವಾಗಿದೆ ಎಂಬುದು ಅನುಭವಕ್ಕೆ ಬರುತ್ತದೆ. ವಾಣಿಯ ಸಾಮರ್ಥ್ಯದಿಂದಲೇ ಮನುಷ್ಯನು ದೃಶ್ಯದಲ್ಲಿ ಪ್ರತಿಸೃಷ್ಟಿಯನ್ನೇ ನಿರ್ಮಾಣ ಮಾಡಿದಂತಾಗುತ್ತದೆ.

ಶಕ್ತಿಯು ತಾನು ಸ್ವತಃ ನಿರಪೇಕ್ಷವಾಗಿರುತ್ತದೆ. ಯಾವ ಕಡೆಗೆ ತಿರುಗಿಸುತ್ತೇವೆಯೋ ಆ ಕಡೆಗೆ ಅತ್ಯಂತ ಪರಿವರ್ತನೆಯನ್ನುಂಟು ಮಾಡುತ್ತದೆ. ಆದ್ದರಿಂದ

ದೃಶ್ಯದ ಕಡೆಗೆ ಮುಖಮಾಡಿ ಹರಿಯುವ ವಾಣಿಯನ್ನು ನಿಯಂತ್ರಿಸಿ ಅರ್ಥರೂಪವಾದ ನಾದಬ್ರಹ್ಮದ ಕಡೆಗೆ ಅದರ ಮುಖವನ್ನು ತಿರುಗಿಸಿದರೆ ಅದು ಮನುಷ್ಯನಿಗೆ ಈಶ್ವರ ಸ್ವರೂಪವಾಗುವ ಪಾತ್ರತೆಯನ್ನು ತಂದು ಕೊಡುತ್ತದೆ. ಪರಮಾರ್ಥದಲ್ಲಿಯ ಎಲ್ಲ ಸಾಧನೆಗಳ ಮರ್ಮವು ವಾಣಿಯನ್ನು ವಶಮಾಡಿಕೊಳ್ಳುವದ ರಲ್ಲಿಯೇ ಕಂಡು ಬರುತ್ತದೆ.

★ ಪ್ರದೀಪ ಇಪ್ಪತ್ತು ★

ಸೋಽಹಂ ಸಾಧನೆ

ನಮ್ಮ ಅಂತರಂಗದಲ್ಲಿ ಅತ್ಯಂತ ಆಳದಲ್ಲಿರುವ ನಿಜ ವಾದ "ನಾನು" ಎಂಬುದರವರೆಗೆ ಹೇಗೆ ಮುಟ್ಟುವದು ಎಂಬುದೇ ಪರಮಾರ್ಥದಲ್ಲಿಯ ನಿಜವಾದ ಸಮಸ್ಯೆಯಾ ಗಿರುತ್ತದೆ. ಆಕಾಶದಲ್ಲಿ ಎತ್ತರದಲ್ಲಿ ಹಾರುವ ಪತಂಗವು ದಾರದ ಸಹಾಯದಿಂದ ನಮ್ಮ ಕೈಯಲ್ಲಿ ಹಿಡಿಯಲು ಬರುತ್ತದೆ. ಅದೇ ರೀತಿ ಹೃದಯಾಕಾಶದಲ್ಲಿ ಸ್ವಚ್ಛಂದ ವಾಗಿ ವಿಹಾರ ಮಾಡುವ ಆನಂದ ಸ್ವರೂಪ "ನಾನು" ಎಂಬುದನ್ನು ವಾಣಿಯ ಸಹಾಯದಿಂದ ನಮ್ಮದನ್ನಾಗಿ ಮಾಡಿಕೊಳ್ಳಲು ಬರುತ್ತದೆ.

ವಾಣಿಯ ಅವಸ್ಥೆಗಳು ನಾಲ್ಕು. ಪರಾ, ಪಶ್ಯಂತಿ, ಮಧ್ಯಮಾ ಹಾಗೂ ವೈಖರಿ ಇವುಗಳಲ್ಲಿ ಮಧ್ಯಮಾ ಹಾಗೂ ವೈಖರಿ ಮುಖ್ಯವಾಗಿ ಶಬ್ದರೂಪವಾಗಿದ್ದು

ದೃಶ್ಯದ ಕ್ಷೇತ್ರದಲ್ಲಿ ವರ್ತಿಸುತ್ತವೆ. ಮೂರನೆಯದಾದ ಪಶ್ಯಂತಿಗೆ ಎರಡು ಅಂಗಗಳಿರುತ್ತವೆ. ದೇಹ ಬುದ್ಧಿಯ ಸಂಬಂಧಿಯಾದ ಅಂಗದಲ್ಲಿ ಶಬ್ದಕ್ಕೆ ಹೊಂದಿಕೊಂಡು ಅರ್ಥದ ವಿಚಾರವಾಗುತ್ತದೆ ಆದರೆ ದೇಹಬುದ್ಧಿಯನ್ನು ಬಿಟ್ಟು ಇರುವ ಅಂಗದಲ್ಲಿ ಮನಸ್ಸು ಕೇವಲ ಅರ್ಥರೂಪವಾಗುತ್ತದೆ. ಹಾಗೂ ವಿಶ್ವ ಮನಸ್ಸಿನ ಜ್ಞಾನಮಯವಾದ ವಿಶಾಲ ಪ್ರದೇಶದಲ್ಲಿ ವಿಹಾರ ಮಾಡುತ್ತದೆ. ಪರಾವಾಣಿ ಕೇವಲ ಸ್ಫೂರ್ತಿರೂಪವಿರುವದರಿಂದ ಅದು ಅವ್ಯಕ್ತ, ಜ್ಞಾನಮಯ, ಅತ್ಯಂತ ಸೂಕ್ಷ್ಮ ಹಾಗೂ ಸಮಾಧಿ ಸಿದ್ಧ ಅಶರೀರಿಣಿ ದೇವವಾಣಿಯಾಗಿರುತ್ತದೆ ದೇಹದಿಂದ ಸುಖಪಡೆಯುವ ಹವ್ಯಾಸದಲ್ಲಿ ಇಂದ್ರಿಯಗಳ ಮೂಲಕ ಹೊರಗೆ ಓಡುವ ಮನಸ್ಸು ವಶಮಾಡಿಕೊಂಡ ವೈಖರಿಯಿಂದ ಒಳಗೆ ಎಳೆಯಲ್ಪಡುತ್ತದೆ.

ವೈಖರಿಯು ಮಧ್ಯಮಾದಲ್ಲಿ ವಿಲೀನವಾಗುತ್ತದೆ. ಮಧ್ಯಮಾ ಎಂದರೆ ದೃಶ್ಯ ಹಾಗೂ ಅದೃಶ್ಯಗಳನ್ನು ಜೋಡಿಸುವ ಸರಪಳಿಯಾಗಿರುತ್ತದೆ. ದೃಶ್ಯವನ್ನು ಅಂಟಿಕೊಂಡಾದರೂ ಅಡ್ಡಿ ಇಲ್ಲ. ಮಧ್ಯಮಾದಲ್ಲಿ ಮನಸ್ಸು ಚಿಂತನ ಶೀಲವಾಗತೊಡಗುತ್ತದೆ. ಮಧ್ಯಮಾದಲ್ಲಿ ಮನಸ್ಸನ್ನು ತೊಡಗಿಸುವ ಅಭ್ಯಾಸ ಆದದ್ದಾದರೆ ದೃಶ್ಯದ ಸಹವಾಸದಿಂದ ಉಂಟಾದ ಜಡತ್ವವು ಕಡಿಮೆ

ಯಾಗಿ ಮನಸ್ಸು ಹೊರಗೆ ಓಡುವದು ಕಡಿಮೆ ಆಗು ತ್ತದೆ.

ಪಶ್ಯಂತಿಯು ಈ ಕಡೆಯ ಅಂಗದಲ್ಲಿ ಮಧ್ಯಮಾ ವಿಲೀನವಾಗುತ್ತದೆ. ಸೂಕ್ಷ್ಮ ಶಬ್ದದ ಆಧಾರದಿಂದ ಚಿಂತನೆಯ ಹೆಚ್ಚಿನ ಅಭ್ಯಾಸವಾಯಿತೆಂದರೆ ಮನಸ್ಸು ವಿಶೇಷ ಸೂಕ್ಷ್ಮವಾಗುತ್ತದೆ ಕೇವಲ ಅರ್ಥರೂಪ ವಾಗಿ ಬಿಡುತ್ತದೆ. ಪಶ್ಯಂತಿಯ ಆ ಕಡೆಯ ಅಂಗದಲ್ಲಿ ಪ್ರವೇಶವಾಯಿತೆಂದರೆ ಮೂರು ಅವಸ್ಥೆಗಳಲ್ಲಿ ಒಂದೇ ಅನುಸಂಧಾನವು ಉಳಿಯುತ್ತದೆ. ಅನುಸಂಧಾನವು ಪರಿಪಕ್ವವಾಯಿತೆಂದರೆ ಪಶ್ಯಂತಿಯು ಪರವಾಣಿಯಲ್ಲಿ ವಿಲೀನವಾಗಿ "ಸೋಽಹಂ"ದ ಸಾಕ್ಷಾತ್ಕಾರವಾಗುತ್ತದೆ.

ತಾತ್ಪರ್ಯವೇನೆಂದರೆ ವೈಖರಿಯನ್ನು ಮಾಧ್ಯಮಾ ದಲ್ಲಿ ಮಧ್ಯಮೆಯನ್ನು ಪಶ್ಯಂತಿಯಲ್ಲಿ ಹಾಗೂ ಪಶ್ಯಂತಿ ಯನ್ನು ಪರಾವಾಣಿಯಲ್ಲಿ ಲಯಗೊಳಿಸಿ ತುರ್ಯಾ ವಸ್ಥೆಯವರೆಗೆ ಮುಟ್ಟಬೇಕು ಹಾಗು ಅಲ್ಲಿ ಸ್ವಾನಂದವನ್ನ ನುಭವಿಸಬೇಕು. ಇದನ್ನು ಸೋಽಹಂ ಸಾಧನೆ ಎನ್ನುತ್ತಾರೆ.

★ ಪ್ರದೀಪ ಇಪ್ಪತ್ತೊಂದು ★

ಪರಮಾರ್ಥಿ ಮನುಷ್ಯ ರಾಜನಿದ್ದಂತೆ

ಛಾಂದೋಗ್ಯ ಉಪನಿಷತ್ತಿನಲ್ಲಿ ಸ್ವಾನಂದ ಸಾಮ್ರಾಜ್ಯವನ್ನನುಭವಿಸುವ ಆತ್ಮಜ್ಞಾನಿ ಮನುಷ್ಯನಿಗೆ

"ಸ್ವರಾಟ್" ಅಂದರೆ ತನ್ನ ಮೇಲಿನ ರಾಜನು ಎಂಬ ವಿಲಕ್ಷಣ ಅರ್ಥವುಳ್ಳ ಪದವಿಯನ್ನು ಕೊಟ್ಟು ಯಥೋಚಿತವಾಗಿ ಗೌರವಿಸಿದುದು ಕಂಡು ಬರುತ್ತದೆ. ದೇಹಬುದ್ಧಿಯ ಸುಳ್ಳಾದ "ನಾನು" ಎಂಬುದನ್ನು ಪಕ್ಕಕ್ಕೆ ಸರಿಸಿ ಇಷ್ಟೇ ಅಲ್ಲ ಅದನ್ನು ಮೃತಪ್ರಾಯಗೊಳಿಸಿ ಆತ್ಮಬುದ್ಧಿಯ ನಿಜವಾದ "ನಾನು" ಎಂಬುದನ್ನು ಯಾರು ಸ್ವೀಕರಿಸುತ್ತಾರೋ ಅವನೇ ತಾನು ಸ್ವತಃ ತನ್ನ ಮೇಲಿನ ಸ್ವಾಮಿ ಆಗಿರುವದರಿಂದ ಅವರ ಮೇಲೆ ಬೇರೆ ಯಾರ ಅಧಿಕಾರವು ನಡೆಯುವದಿಲ್ಲ. ಆದ್ದರಿಂದ ಅವನೇ ನಿಜವಾಗಿಯೂ ಸ್ವತಂತ್ರನಾಗಿರುತ್ತಾನೆ. ದೇಹಬುದ್ಧಿಯ ಹಿಡಿತದಿಂದ ತಪ್ಪಿಸಿಕೊಂಡ ಹಾಗೂ ದೃಶ್ಯವಸ್ತುಗಳ ಬಂಧನದಿಂದ ಮುಕ್ತನಾದವನಿರುವದರಿಂದ ಅವನು ತನ್ನಲ್ಲಿಯೇ ತಾನು ಅಖಂಡ ಸ್ವಾನಂದವನ್ನನುಭವಿಸುವನು. ಸೂಕ್ಷ್ಮರೂಪದ ಸಾಕ್ಷಾತ್ ಸ್ಪರ್ಷವಾದದ್ದರಿಂದ ಸ್ವಾನಂದದ ಅನುಭವ ಪಡೆಯಲು ಅವನಿಗೆ ಯಾವದೇ ದೃಶ್ಯ ವಸ್ತುವಿನ ಅವಶ್ಯಕತೆ ಉಳಿಯುವದಿಲ್ಲ ಆದ್ದರಿಂದ ಅವನ ಆನಂದವು ಸ್ವಯಂ ಪ್ರಕಾಶವಾಗಿರುತ್ತದೆ. ಆತ್ಮಸ್ವರೂಪದೊಂದಿಗೆ ತದ್ರೂಪವಾಗಿ ಆತ್ಮಾನುಭವದ ನಿಃಸಂಶಯ ಭಾವವು ಯಾವಾಗಲೂ ಪ್ರಫುಲ್ಲಿತವಾದ್ದರಿಂದ ಆದರ ಆನಂದ ಸ್ವತಃ ಸಿದ್ಧವಿರುತ್ತದೆ. ಹೃದಯ ಕಮಲದಲ್ಲಿ ವಾಸಮಾಡುವ ಜ್ಞಾನಸ್ವರೂಪವಾದ "ನಾನು" ಎಂಬುದರಲ್ಲಿಂದಲೇ ಉಕ್ಕೇರಿ

ಬರುವ ಅದರ ಆನಂದವು ಕೇವಲ ಸ್ವಸಂವೇದ್ಯವಾಗಿರುತ್ತದೆ ಈ ರೀತಿಯಾಗಿ ಲೋಕವಿಲಕ್ಷಣ ಸ್ವರಾಜ್ಯವನ್ನನುಭವಿಸುವ ಜ್ಞಾನಿ ಪುರುಷನ ಅಖಂಡ ಆನಂದವೇ ಅವನ ಸ್ವಭಾವವಾಗಿರುತ್ತದೆ ಹಾಗೂ ವಸ್ತುರಹಿತ ಸ್ವಯಂಭೂ ಸಮಾಧಾನವೇ ನಿಜವಾದ ಸ್ವರೂಪವಾಗಿರುತ್ತದೆ.

ಸ್ವಾನಂದವು ಎಂದೂ ಹೆಚ್ಚು ಕಡಿಮೆಯಾಗದ್ದರಿಂದ ಅದು ಅಕ್ಷರವಾಗಿರುತ್ತದೆ. ವಾಸನೆಯ ಮಾಲಿನ್ಯವು ಅದಕ್ಕೆ ಅಂಟುವದಿಲ್ಲವಾದ್ದರಿಂದ ಅದು ಅತ್ಯಂತ ಶುದ್ಧ ಹಾಗೂ ಸ್ವಚ್ಛವಾಗಿರುತ್ತದೆ ದೃಶ್ಯದ ಮೈಲಿಗೆ ಆಗದೆ ಇರುವದರಿಂದ ಅದು ಅತ್ಯಂತ ಪವಿತ್ರವಾಗಿರುತ್ತದೆ. ಜೀವಿಗಳ ಕಲ್ಯಾಣವನ್ನುಂಟು ಮಾಡುವದರಿಂದ ಅದು ಪರಮ ಮಂಗಲವಾಗಿರುತ್ತದೆ ಹಾಗೂ ಅದು ಎಂದೂ ಇಲ್ಲದಂತಾಗುವದಿಲ್ಲವಾದ್ದರಿಂದ ಅಮೃತವಾಗಿರುತ್ತದೆ.

ತಾತ್ಪರ್ಯವೇನೆಂದರೆ :— ಜಗತ್ತಿನಲ್ಲಿಯ ಅಶಾಶ್ವತ ಹಾಗೂ ಅಪೂರ್ಣ ಐಶ್ವರ್ಯದ ಬೆನ್ನುಹತ್ತಿ ಸರ್ವಸ್ವವನ್ನು ಕಳೆದುಕೊಳ್ಳದೇ ಆತ್ಮದರ್ಶನದಿಂದುಂಟಾಗುವ ಅಮರ ಸ್ವರಾಜ್ಯವನ್ನು ಸಂಪಾದಿಸಬೇಕು. ಹಾಗೂ ಸ್ವಚ್ಛಂದವಾಗಿ ಸ್ವಾನಂದವನ್ನನುಭವಿಸಿ ಜಗತ್ತಿನ ಕಲ್ಯಾಣ ಮಾಡಬೇಕು. ಇದೇ ಪರಮಾರ್ಥವಾಗಿರುತ್ತದೆ.

★ ಪ್ರದೀಪ ಇಪ್ಪತ್ತೆರಡು ★

"ಆತ್ಮವಾಸನೆ"

ಸೋಽಹಂ ಎಂದರೆ "ನಾನು ಆನಂದಸ್ವರೂಪ ಆತ್ಮನಿರುತ್ತೇನೆ" ಎಂಬುದು ನಮ್ಮ ಮೂಲಭೂತವಾದ, ನಿಜವಾದ, ಪಾವನವಾದ ಹಾಗೂ ಪೂರ್ಣ ಅವಸ್ಥೆಯಾಗಿತ್ತು. ಅವಿದ್ಯೆಯಿಂದ ದೇಹೋಽಹಂ ಅಂದರೆ ನಾನು ದೇಹಸ್ವರೂಪ ಜೀವನಿರುತ್ತೇನೆ ಎಂಬ ಸುಳ್ಳಾದ, ಪತಿತವಾದ ಹಾಗೂ ಅಪೂರ್ಣ ಅವಸ್ಥೆಯು ನಮಗೆ ಪ್ರಾಪ್ತವಾಗಿರುತ್ತದೆ. ಆನಂದಸ್ವರೂಪರಾದ ನಾವು ಅಹಂಕಾರ ಸ್ವರೂಪರಾದೆವು. ನಮ್ಮ ವಿಶ್ವವ್ಯಾಪಿ ವಿಶಾಲತೆ ಹೋಯಿತು. ಹಾಗೂ ಅದರ ಸ್ಥಾನದಲ್ಲಿ ಶರೀರದ ಮಟ್ಟಿಗೆ ನೋಡುವ ಆಕುಂಚಿತತನದ ವೃತ್ತಿಯು ಬಂದಿತು. ಈ ರೀತಿಯಾಗಿ ನಾವು ಸ್ವಾನಂದವನ್ನು ಕಳೆದುಕೊಂಡೆವೇನೊ ನಿಜ. ಆದರೆ ನಾವು ಏನೋ ಕಳೆದುಕೊಂಡಿರುವೆವೆಂಬ ಸೂಕ್ಷ್ಮ ಅರಿವು ಮಾತ್ರ ನಮ್ಮ ಅಂತಃಕರಣದಲ್ಲಿ ಯಾವಾಗಲೂ ಇರುತ್ತದೆ ಆ ಅರಿವು ಶಾಂತವಾಗಿ ಸಮಾಧಾನ ಪ್ರಾಪ್ತವಾಗಬೇಕೆಂದು ನಾವು ಅನೇಕವಾಸನೆ ಉಳ್ಳವರಾಗುತ್ತೇವೆ ಇದೊಂದು ಪ್ರಾಪ್ತವಾಯಿತೆಂದರೆ ನಾನು ಆನಂದರೂಪವಾಗಿ ಬಿಡುತ್ತೇನೆ. ಆದ್ದರಿಂದ ನನಗೆ ಅದು ಬೇಕು ಅಥವಾ ಇಂಥದೊಂದು ನಿವಾರಣೆ ಆದದ್ದಾದರೆ ನಾನು ಆನಂದರೂಪವಾಗಿಬಿಡು

ತ್ತೇನೆ. ಆದ್ದರಿಂದ ನನಗೆ ಅದು ಬೇಡ ಇಂಥ ಬೇ
ಬೇಡೆಂಬ ಸಂಕಲ್ಪಗಳಿಗೆ ವಾಸನೆ ಎನ್ನುತ್ತಾರೆ.

ವಾಸನೆಯಲ್ಲಿ ಎರಡು ಪ್ರಕಾರ:— ಒಂ
ಆತ್ಮವಾಸನೆ ಹಾಗೂ ಇನ್ನೊಂದು ಅನಾತ್ಮವಾಸ
ಅನಾತ್ಮವಾಸನೆಯಲ್ಲಿ ಮೂರು ಪ್ರಕಾರ. ಒಂದು ದೆ
ವಾಸನೆ, ಎರಡು ಲೋಕವಾಸನೆ, ಮೂರು ಶಾ
ವಾಸನೆ, ತಿನ್ನುವದು, ಕುಡಿಯುವದು, ಕಾಮಭೋ
ಅರಿವೆ-ಅಂಚಡಿ, ಆಭರಣ, ಮನೆ-ಮಾರು ತೋಟಪ
ಮುಂತಾದ ಸಾಧನಗಳಿಂದ ದೇಹದ ಸುಖ ಪಡೆಯು
ಪ್ರಯತ್ನಕ್ಕೆ ದೇಹವಾಸನೆ ಎನ್ನುತ್ತಾರೆ. ಸಮಾಜ
ಮಾನ, ಕೀರ್ತಿ, ಅಧಿಕಾರ, ಐಶ್ವರ್ಯ, ಉತ್ತ
ಮಕ್ಕಳು-ಮರಿ, ಸ್ಮಾರಕಗಳು ಮುಂತಾದ ಲೋ
ಮಾನ್ಯತೆಗಾಗಿ ಆಗುವ ಧಡಪಡ ಹಾಗೂ ತಳಮ
ಲೋಕವಾಸನೆ ಎನ್ನುತ್ತಾರೆ ದೃಶ್ಯಜಗತ್ತಿನ ವಿ
ಮಾಡುವ, ಶಾಸ್ತ್ರಗಳ ಅಭ್ಯಾಸ ಮಾಡುವ ತೀವ್ರ ಅ
ಓದುವ, ಬರೆಯುವ, ವ್ಯಾಖ್ಯಾನದ. ಉಪದೇಶ
ವಾದವಿವಾದದ ಹಾಗೂ ಗ್ರಂಥ ಸಂಗ್ರಹದ ಅನಿವಾ
ಹವ್ಯಾಸ ಇದು ಶಾಸ್ತ್ರವಾಸನೆ. ಆತ್ಮವಾಸನೆ ಇವ
ಗಳಿಗಿಂತ ಅತ್ಯಂತ ಬೇರೆ ಆಗಿರುತ್ತದೆ. ನಿಜವ
"ನಾನು" ಯಾರು ಎಂಬುದು ತಿಳಿಯಬೇಕು. ನ
ಆತ್ಮದರ್ಶನವಾಗಬೇಕು. "ಸೋಹಂ" ದ ಅನು
ಬರಬೇಕು. ಈಶ್ವರನ ಸಾಕ್ಷಾತ್ಕಾರವಾಗಬೇಕು. ಅ

ಅನುಗ್ರಹದಿಂದ ಸ್ವಾನಂದವನ್ನನುಭವಿಸಲು ಪ್ರಾಪ್ತವಾಗಬೇಕು ಎಂಬ ತಳಮಳ ಉಂಟಾಗುವದಲ್ಲದೇ ಇದಕ್ಕಾಗಿ ದೃಶ್ಯ ಪ್ರಪಂಚದಲ್ಲಿ ಮನಸ್ಸು ರಮಿಸದೇ ಇರುವದು. ಇದೆಲ್ಲ ಆತ್ಮವಾಸನೆ ಆಗಿರುತ್ತದೆ.

ಅನಾತ್ಮವಾಸನೆಯು ಆತ್ಮವಾಸನೆಗೆ ಮಾರಕವಾಗಿರುತ್ತದೆ. ಪರಮಾರ್ಥ ಸಾಧಿಸುವದಕ್ಕಾಗಿ ಅಂತಃಕರಣದಲ್ಲಿ ಆತ್ಮವಾಸನೆ ಜಾಗೃತವಾಗುವದು ಅತ್ಯಂತ ಅವಶ್ಯವಾಗಿರುತ್ತದೆ. ಪೂರ್ವಪುಣ್ಯದಿಂದಾಗಲಿ, ಪ್ರಾಪಂಚಿಕ ಪ್ರತಿಕೂಲತೆಯಿಂದಾಗಲಿ ಅಥವಾ ಸತ್ಸಂಗತಿಯಿಂದಾಗಲಿ ಆತ್ಮವಾಸನೆ ಜಾಗೃತವಾಗುತ್ತದೆ. ಆದರೆ ಆತ್ಮಾನಾತ್ಮ ವಿವೇಕದಿಂದ ಹಾಗೂ ಸಾಧನೆಯಿಂದ ಅದನ್ನು ತೀವ್ರಗೊಳಿಸುವದು ಅವಶ್ಯವಾಗಿರುತ್ತದೆ.

★ ಪ್ರದೀಪ ಇಪ್ಪತ್ತಮೂರು ★

ಸಾಧನೆ ಏನು ಮಾಡುತ್ತದೆ

ನಮ್ಮ ಜೀವನದಲ್ಲಿ ಯಾರಾದರೂ ನಮ್ಮ ಮೇಲೆ ಅಥವಾ ನಾವು ಯಾರಾದರೊಬ್ಬರ ಮೇಲೆ ಅತ್ಯಂತ ನಿಸ್ವಾರ್ಥ ಪ್ರೇಮ ಮಾಡುವದರಿಂದ ನಿಜವಾದ ಸಮಾಧಾನವು ತಾನಾಗಿಯೇ ಪ್ರಾಪ್ತವಾಗುತ್ತದೆ. ದೇಹಬುದ್ಧಿಯು "ನಾನು" ಎಂಬುದು ಅತ್ಯಂತ ಸ್ವಾರ್ಥಿ ಇರುವದರಿಂದ ಅದೇ ಈ ರೀತಿಯ ನಿಸ್ವಾರ್ಥ ಪ್ರೇಮಕ್ಕೆ ಅಡ್ಡ ಬರುತ್ತದೆ. ಈ ಸ್ವಾರ್ಥದಿಂದ ತುಂಬಿದ "ನಾನು"

ಎಂಬುದನ್ನು ಸಂಪೂರ್ಣ ರೂಪಾಂತರಗೊಳಿಸಿ
ಸ್ವಾರ್ಥರಹಿತವಾದದ್ದನ್ನಾಗಿ ಮಾಡುವ ಹಾಗೂ
ಸ್ವತಃ ಸಮಾಧಾನವನ್ನನುಭವಿಸಿ ಅನೇಕರಿಗೆ ಸಮ
ಕೊಡುವ ವಿಲಕ್ಷಣ ಚಮತ್ಕಾರಗಳನ್ನು ಪರ
ಸಾಧನೆಯೇ ಮಾಡಲು ಸಾಧ್ಯವಿದೆ. ಸ್ವಾರ್ಥ
"ನಾನು" ಎಂಬುದರ ಆಮೂಲಾಗ್ರ ಪರಿ
ಮಾಡುವದಕ್ಕೆ ಸಧ್ಯದ ಮನಸ್ಸು ಆಮೂಲಾಗ್ರ
ಆಗಬೇಕಾಗುತ್ತದೆ. ಈ ರೀತಿ ಪರಿವರ್ತನೆ
ತಂತ್ರವನ್ನು ಸಾಧನೆ ಕಲಿಸುತ್ತದೆ.

ಅನೇಕ ಉತ್ತಮ-ನೀಚ ಸಂಸ್ಕಾರಗಳಿಂದ
ವಾಸನೆಗಳಿಂದ ತುಂಬಿಕೊಂಡ ನಮ್ಮ ಅಂತರ್ಮ
ವೃತ್ತಿಗಳ ರೂಪದಿಂದ ಜಾಗ್ರತ ಮನಸ್ಸಿನ
ನಿರಂತರ ಒತ್ತಡವನ್ನುಂಟು ಮಾಡುತ್ತಿ
ಎಂಬುದು ಪ್ರತಿಯೊಬ್ಬರ ಅನುಭವವಿರುತ್ತದೆ.
ಅರ್ಥವೇನೆಂದರೆ ನಮ್ಮ ಮನಸ್ಸಿನಲ್ಲಿ ಅಂತ
ವಿರೋಧವಿದ್ದುದರಿಂದ ನಮಗೆ ಶಾಂತತೆಯು
ಭವಕ್ಕೆ ಬರುತ್ತಿರುವದಿಲ್ಲ. ಬೆನ್ನೆಲುಬಿನ ಸು
ಎಲ್ಲ ನರಗಳು ಸುತ್ತಿಕೊಂಡಂತೆ ನಮ್ಮ "
ಎಂಬುದರ ಸುತ್ತಲೂ ಎಲ್ಲ ವಾಸನೆಗಳು ಸುತ್ತಿ
ರುತ್ತವೆ. ಬೆನ್ನೆಲುಬು ಮುರಿಯಿತೆಂದರೆ ಮನ
ಮುರಿದಂತೆ ಅದೇ ರೀತಿ "ನಾನು" ಎಂಬುದು
ತೆಂದರೆ ವಾಸನೆಗಳೆಲ್ಲ ತಾವಾಗಿಯೇ ಸತ್ತು

ತ್ರವೆ. "ನಾನು" ಎಂಬುದನ್ನು ಇಲ್ಲದಂತೆ ಮಾಡುವ ಮಾರ್ಗವನ್ನು ಸಾಧನೆಯು ತೋರಿಸುತ್ತದೆ. ಸುಳ್ಳಾದ ನಾನು ಎಂಬುದು ಸತ್ತಿತೆಂದರೆ ನಿಜವಾದ ನಾನು ಎಂಬುದು ತಾನಾಗಿಯೇ ಪ್ರಕಟವಾಗುತ್ತದೆ.

★ ಪ್ರದೀಪ ಇಪ್ಪತ್ನಾಲ್ಕು ★

ಸಾಧನೆಯ ಪ್ರಕಾರ "೧"

"ನಾನು" ಎಂಬ ಭಾವ ಕಡಿಮೆ ಆಗುವದು, ವಾಸನೆಯು ಕ್ಷೀಣವಾಗುವದು, ಮನಸ್ಸು ಅಂತರ್ಮುಖವಾಗಿ ಸ್ವರೂಪದಲ್ಲಿ ರಮಮಾಣವಾಗುವದು, ವೃತ್ತಿಗಳು ಶುದ್ಧವಾಗುವದು. ಭಗವಂತನ ಪ್ರೇಮ ಬರುವದು, ನಾಮದಲ್ಲಿ ಮನಸ್ಸು ಸ್ಥಿರವಾಗುವದು, ದೇಹಬುದ್ಧಿಯು ಇಲ್ಲದಂತಾಗುವದು, ಆಸಕ್ತಿರಹಿತವಾಗುವದು, ಈ ಎಲ್ಲ ಶಬ್ದ ಸಮೂಹಗಳ ಅರ್ಥವು ಒಂದೇ ಆಗಿರುತ್ತದೆ. ಆತ್ಮ ಸ್ವರೂಪವು ಸತ್-ಚಿತ್ ಆನಂದವಾಗಿರುವದರಿಂದ ಅದರ ಸ್ಪರ್ಶವನ್ನು ಸಾಧಿಸಲು ಮೂರೆ ಮಾರ್ಗಗಳಿರಲು ಶಕ್ಯವೆಂಬುದು ಸ್ಪಷ್ಟವಾಗುತ್ತದೆ. ಜ್ಞಾನ ಮಾರ್ಗವು ಸತ್ ಪ್ರಧಾನ ಮಾರ್ಗವಾಗಿದ್ದು ಇದರಲ್ಲಿ ಬುದ್ಧಿಗೆ ಅಥವಾ ವಿಚಾರಕ್ಕೆ ಪ್ರಾಧಾನ್ಯತೆ ಇರುತ್ತದೆ. ಯೋಗ ಮಾರ್ಗ ಚಿತ್ ಪ್ರಧಾನ ಮಾರ್ಗವಾಗಿದ್ದು ಇದರಲ್ಲಿ ಶಕ್ತಿಗೆ ಅಥವಾ ನಿರೋಧಕ್ಕೆ ಪ್ರಾಧಾನ್ಯತೆ ಇರುತ್ತದೆ. ಭಕ್ತಿ ಮಾರ್ಗವು ಆನಂದ

ಪ್ರಧಾನವಾಗಿದ್ದು ಇದರಲ್ಲಿ ಪ್ರೇಮಕ್ಕೆ ಅಥವಾ
ರ್ಯಕ್ಕೆ ಮಹತ್ವವಿರುತ್ತದೆ.

ಜ್ಞಾನಮಾರ್ಗವು ಸರ್ವೋತ್ಕೃಷ್ಟ ಮಾರ್ಗ
ತ್ತದೆ. ಅದನ್ನು ಎಷ್ಟು ವರ್ಣಿಸಿದರೂ ಕಡಿಮೆ
ಸಾರಾಸಾರ ವಿಚಾರ ಮಾಡುವದು, ಅಸಾರ
ಸಾರ ತೆಗೆದುಕೊಳ್ಳುವದು, ಹಾಗೂ ಸತ್ಯದ
ವಾಗುವವರೆಗೆ ವಿಚಾರ ಮಾಡುತ್ತಿರುವದೆಂಬ
ಕಠಿಣ ಹಾಗೂ ಜಿಗಟುತನದ ಕೆಲಸವನ್ನು
ಮನುಷ್ಯ ಬುದ್ಧಿಯೇ ಮಾಡಲು ಶಕ್ಯವಿದೆ. ಮ
ವಿಚಾರಗಳಲ್ಲಿ ವಿಲಕ್ಷಣ ಸಾಮರ್ಥ್ಯ ತುಂಬಿಕ
ಎಂಬುದರ ಅನುಭವವು ವಿಜ್ಞಾನದ ಪ್ರಗತಿಯಿ
ಕಂಡು ಬರುತ್ತದೆ. ಆದರೆ ಆ ಸಾಮರ್ಥ್ಯದ ಪ್ರ
ವನ್ನು ಅದೃಶ್ಯ ಜಗತ್ತಿನ ಮೇಲೆ ಮಾಡಿ ಸ್ವಾ
ಮಾರ್ಗವನ್ನು ನಿರಾತಂಕಗೊಳಿಸಿಕೊಳ್ಳುವ
ಬಹಳ ಕಡಿಮೆ. ತನ್ನನ್ನು ಕುರಿತು ಅಭ್ಯಾಸ
ವದು ಜಗತ್ತನ್ನು ಕುರಿತು ಅಭ್ಯಾಸ ಮಾಡುವ
ಹೆಚ್ಚು ಜ್ಞಾನಪ್ರದವಾಗಿರುತ್ತದೆ. ನಮ್ಮ ಅನು
ಅರ್ಥ ತಿಳಿದುಕೊಂಡು ವಿಶ್ವದ ರಹಸ್ಯವನ್ನು
ಮಾಡಿಕೊಳ್ಳುವದರಲ್ಲಿ ಜ್ಞಾನ ಮಾರ್ಗದ ಮ
ತ್ತದೆ ಎಂದು ತಿಳಿದು ಬರುತ್ತದೆ. ಅನುಭ
ಜಾಣನಾದವನು ಸಂತನೇ ಆಗುತ್ತಾನೆ. ಈ ಮಾ
ವಿಮಾನದ ಪ್ರವಾಸದಂತೆ ಅತ್ಯಂತ ಶೀಘ್

ಸ್ವಾನಂದದ ವರೆಗೆ ಮುಟ್ಟಿಸುತ್ತದೆ. ಆದರೆ ಜ್ಞಾನ ಮಾರ್ಗದ ಅಧಿಕಾರಿಗಳು ಜಗತ್ತಿನಲ್ಲಿ ಬಹಳ ಕಡಿಮೆ. ಏಕೆಂದರೆ ಮನುಷ್ಯನಿಗೆ ತಿಳಿದರೂ ಕೂಡ ರಕ್ತವಾಗುವದು ಬಹಳ ಕಠಿಣವಾಗುತ್ತದೆ ಹಾಗೂ ರಕ್ತವಾಗದ ಹೊರತು ಜ್ಞಾನವು ನಿತ್ಯ ವ್ಯವಹಾರದಲ್ಲಿ ಬರುವದಿಲ್ಲ. ಕೇವಲ ಜ್ಞಾನವು ಬಂಜೆಯಾಗಿರುತ್ತದೆ.

★ ಪ್ರದೀಪ ಇಪ್ಪತ್ತೈದು ★

ಸಾಧನೆಯ ಪ್ರಕಾರ "೨"

ಯೋಗಮಾರ್ಗವು ಅತ್ಯಂತ ಕಷ್ಟಪ್ರದವಾಗಿರುತ್ತದೆ ಜ್ಞಾನ ಮಾರ್ಗವು ಬುದ್ಧಿವಂತರದಾದರೆ ಯೋಗ್ಯ ಮಾರ್ಗವು ಸಾಮರ್ಥ್ಯವಂತರದಾಗಿರುತ್ತದೆ. ಅದರಲ್ಲಿ ಶಕ್ತಿಯೊಂದಿಗೆ ಆಟವಿರುತ್ತದೆ. ಈ ವಿಶಾಲ ವಿಶ್ವದಲ್ಲಿ ಅನಂತವಾಗಿ ಕಾರ್ಯ ಮಾಡುವ ಶಕ್ತಿಯೇ ಮನುಷ್ಯ ದೇಹದಲ್ಲಿ ಕಾರ್ಯ ಮಾಡುತ್ತಿರುತ್ತದೆ. ಅದರಲ್ಲಿ ಪ್ರಾಣಶಕ್ತಿಯು ಅತ್ಯಂತ ಪ್ರಚಂಡ ಹಾಗೂ ಪರಿಣಾಮಕಾರಿ ಆಗಿರುತ್ತದೆ ಅದನ್ನು ವಶಪಡಿಸಿಕೊಂಡು ಸರಿಯಾಗಿ ಉಪಯೋಗಿಸಿದ್ದಾದರೆ ಶರೀರದಲ್ಲಿ ಹಾಗೂ ಮನಸ್ಸಿನಲ್ಲಿ ಸಂಪೂರ್ಣ ಪರಿವರ್ತನೆಯನ್ನುಂಟು ಮಾಡಲು ಬರುತ್ತದೆ. "ಪಿಂಡೆ ಪಿಂಡಾಚಾಗ್ರಾಸು" ಅಂದರೆ ಪಿಂಡದಲ್ಲಿಯೇ ಪಿಂಡದ ಗ್ರಾಸು ಮಾಡುವದ ಎಂದರೆ ಪ್ರಾಣಶಕ್ತಿಯನ್ನು ಅಥವಾ ಕುಂಡಲಿನಿಯನು

ವಶಪಡಿಸಿಕೊಂಡು ಅದರ ಸಹಾಯದಿಂದ ದೇಹದಲ್ಲಿಯು ಹಾಗೂ ಮನಸ್ಸಿನಲ್ಲಿಯು ಸ್ಥೂಲ ಅಂಶಗಳನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಯಿಂದ ಮನಸ್ಸು ಅತ್ಯಂತ ಸೂಕ್ಷ್ಮವಾಗುತ್ತದೆ. ಅತ್ಯಂತ ಸೂಕ್ಷ್ಮವಾದ ಈ ಮನಸ್ಸು ಅಷ್ಟೇ ವಿಶಾಲವಾಗಿ ವಿಶ್ವಮನಸ್ಸಿನೊಂದಿಗೆ ತಾದಾತ್ಮ್ಯ ಹೊಂದುತ್ತದೆ. ಹಾಗೂ ಸಹಜ ಸ್ವಾನಂದವನ್ನು ಅನುಭವಿಸಲು ಶಕ್ಯವಾಗುತ್ತದೆ.

ಧ್ಯಾನಯೋಗ ಅಥವಾ ಅಭ್ಯಾಸಯೋಗವು ಯೋಗದ ಮತ್ತೊಂದು ಮಹತ್ವಪೂರ್ಣ ಪರ್ಯಾಯವಾಗಿರುತ್ತದೆ. ಪ್ರಾಣ ಹಾಗೂ ಅರಿವು ಇವೆರಡೂ ಒಂದೇ ಜೀವ ಶಕ್ತಿಯ ಎರಡು ಅಂಗಗಳಾಗಿರುತ್ತವೆ. ಅರಿವಿನ ಗುಣವು ಪ್ರಕಾಶದ್ದಾಗಿರುತ್ತದೆ. ಪ್ರಕಾಶವು ಎಷ್ಟು ಹೆಚ್ಚು ಕ್ಷೇತ್ರವನ್ನು ವ್ಯಾಪಿಸುವದೋ ಅಷ್ಟು ಹೆಚ್ಚು ಮಂದವಾಗುತ್ತದೆ ಹಾಗೂ ಕ್ಷೇತ್ರವನ್ನು ಸಂಕುಚಿತಗೊಳಿಸಿದಂತೆ ಅದರ ತೀವ್ರತೆಯು ಬೆಳೆಯುತ್ತ ಹೋಗುತ್ತದೆ. ಅದೇ ರೀತಿ ಅನೇಕ ವಸ್ತುಗಳ ಬೆನ್ನು ಹತ್ತಿದ ಅರಿವು ಅತ್ಯಂತ ಮಂದವಾಗುತ್ತದೆ ಹಾಗೂ ದುರ್ಬಲವಾಗುತ್ತದೆ. ವೃತ್ತಿಗಳ ರೂಪದಿಂದ ಅದು ದೃಶ್ಯ ವಸ್ತುಗಳಲ್ಲಿ ತೊಡಗಿಕೊಂಡಿರುತ್ತದೆ. ಆದ್ದರಿಂದ ಧ್ಯಾನಯೋಗದಲ್ಲಿ ವೃತ್ತಿ ನಿರೋಧಕ್ಕೆ ಹೆಚ್ಚು ಮಹತ್ವ ಕೊಡಲ್ಪಟ್ಟಿರುತ್ತದೆ.

ದೇಹಸುಖದ ಆಶೆಯಿಂದ ಇಂದ್ರಿಯಗಳ ಮೂಲಕ ಹೊರಗೆ ಹರಿಯುವ ಅರಿವನ್ನು ಒಳಗೆ ಎಳೆದು ಅಂತರಂಗದಲ್ಲಿ ಒಂದೇ ಬಿಂದುವಿನ ಸುತ್ತಲೂ ಅದನ್ನು ತಿರುಗಿಸುವದು ಹಾಗೂ ಕೊನೆಗೆ ಒಂದೇ ಸ್ಥಾನದಲ್ಲಿ ಏಕತ್ರಗೊಳಿಸಿ ಅದನ್ನು ಅತ್ಯಂತ ಕೇಂದ್ರಿತಗೊಳಿಸುವದು ಎಂದರೆ ಪ್ರತ್ಯಾಹಾರ ಧಾರಣೆ ಹಾಗೂ ಧ್ಯಾನ ಎಂಬ ಧ್ಯಾನಯೋಗದ ಮೂರು ಪ್ರಧಾನ ಮೆಟ್ಟಿಲುಗಳಿರುತ್ತವೆ. ಅತ್ಯಂತ ಕೇಂದ್ರಿತ, ಏಕಾಗ್ರ ಹಾಗೂ ಸೂಕ್ಷ್ಮಗೊಳಿಸಲ್ಪಟ್ಟ ಅರಿವು ಕೂಡಲೇ ಸ್ವರೂಪದಲ್ಲಿ ಲೀನವಾಗುತ್ತದೆ. ಈ ಅವಸ್ಥೆಗೆ ಸಮಾಧಿ ಎನ್ನುತ್ತಾರೆ.

ಯೋಗ ಸಾಧನೆ ಸರಿಯಾಗಿ ನಡೆಯಬೇಕಾದರೆ ಆಹಾರ-ವಿಹಾರಗಳ ವಿಷಯದಲ್ಲಿ ಅತ್ಯಂತ ಕಠೋರವಾದ ಪಥ್ಯ ಪಾಲಿಸಬೇಕಾಗುತ್ತದೆ. ಅಲ್ಲದೇ ಮಾರ್ಗದಲ್ಲಿಯ ಮೇಲಿನ ಅವಸ್ಥೆಗಳನ್ನು ಹಾಗೂ ಅವುಗಳ ಜೊತೆಗೆ ಬರುವ ಸಿದ್ಧಿಗಳನ್ನು ಅರಗಿಸಿಕೊಳ್ಳುವದು ಅಷ್ಟು ಸುಲಭವಾದ ಕೆಲಸವಲ್ಲ. ಸಾಧಕನು ಯಾವಾಗ ಜಾರುತ್ತಾನೆ ಎಂಬ ನಿಯಮವಿರುವದಿಲ್ಲ. ಆದ್ದರಿಂದ ಯೋಗಮಾರ್ಗದಿಂದ ಹೋಗುವ ಸಾಧಕರಲ್ಲಿ ಬಹಳ ಕಡಿಮೆ ಸಾಧಕರು ಸಾಧ್ಯವವರೆಗೆ ಸುರಕ್ಷಿತವಾಗಿ ಮುಟ್ಟುವರೆಂದು ಕಂಡು ಬರುತ್ತದೆ.

★ ಪ್ರದೀಪ ಇಪ್ಪತ್ತಾರು ★

ಸಾಧನೆಯ ಪ್ರಕಾರ "೩"

ಸಾರಾಸಾರ ವಿಚಾರಗಳನ್ನು ಸ್ಥಿರಗೊಳಿಸಿಕೊಂಡು ಸಾರಭೂತವಾದ ಸೂಕ್ಷ್ಮ ಆತ್ಮ ವಸ್ತುವಿನ ಅಖಂಡ ಚಿಂತನೆಯು ಸಾಧಿಸಿತೆಂದರೆ ಜ್ಞಾನ ಮಾರ್ಗವು ಸಿದ್ಧವಾಗುತ್ತದೆ. ಅಂತರ್ ಮನಸ್ಸಿನಲ್ಲಿ ಗಟ್ಟಿಯಾಗಿ ಕುಳಿತಿರುವ ವಾಸನಾಪುಂಜದಲ್ಲಿಂದ ಅತ್ಯಂತ ಪ್ರಬಲಗತಿಯಿಂದ ಜಾಗೃತ ಮನಸ್ಸಿನಲ್ಲಿ ಬರುವ ವೃತ್ತಿಗಳ ನಿರೋಧವಾಗಿ ಸಂಪೂರ್ಣ ಏಕಾಗ್ರತೆಯು ಸಾಧಿಸಿತೆಂದರೆ ಯೋಗ ಮಾರ್ಗವು ಸಿದ್ಧವಾಗುತ್ತದೆ. ಈ ಎರಡೂ ಮಾರ್ಗಗಳಿಗೆ ದೇಹ, ಮನಸ್ಸು ಹಾಗೂ ಬುದ್ಧಿ ಬಲಶಾಲಿಗಳಾಗಿರಬೇಕಾಗುತ್ತವೆ. ಆದರೆ ಆನಂದಕ್ಕಾಗಿಯೇ ಚಡಪಡಿಸುತ್ತಿರುವ ಜೀವಕ್ಕೆ ತನ್ನ ಹೃದಯದಲ್ಲಿಯೇ ಇರುವ ಸ್ವಾನಂದದವರೆಗೆ ಮುಟ್ಟುವ ಮಾರ್ಗವು ಕಠಿಣವಾಗಿದ್ದರೆ ಹೇಗೆ ನಡೆಯುತ್ತದೆ ? ಸ್ವಾನಂದದ ಮಾರ್ಗವು ಕೂಡ ಸಹಜ ಸುಗಮ ಹಾಗೂ ಆನಂದಮಯವಾಗಿರಲಿಕ್ಕೆ ಬೇಕು.

ಆನಂದವೆಂದರೆ ಪ್ರೇಮ ಹಾಗೂ ಸೌಂದರ್ಯ. ದೇಹಬುದ್ಧಿಯ ಜೀವನದಲ್ಲಿಯೂ ಕೂಡ ನಾವು ಪ್ರೇಮ ಮಾಡುತ್ತೇವೆ ಹಾಗೂ ಸೌಂದರ್ಯವನ್ನು ನೋಡಲು ಶಕ್ಯವಿದೆ ಹಾಗೂ ಆದರಿಂದ ತಾತ್ಪೂರ್ತಿಕವಾದರೂ

ಆನಂದವು ಪ್ರಾಪ್ತವಾಗುತ್ತದೆ. ಆದರೆ ಈ ನಮ್ಮ ಪ್ರೇಮ ಹಾಗೂ ಸೌಂದರ್ಯ ದೃಷ್ಟಿಯು ದೃಶ್ಯವನ್ನು ಆಧರಿಸಿಕೊಂಡಿರುತ್ತದೆ. ನಿರಂತರ ಪರಿವರ್ತನೆ ಹೊಂದುವ ಹಾಗೂ ಬಹುರಂಗಿಯಾದ ದೃಶ್ಯದಲ್ಲಿಯು ಭೇದಗಳಲ್ಲಿ ರಮಿಸುವ ಹಾಗೂ ಮೋಹಗೊಳ್ಳುವ ಮನಸ್ಸು ಶಾಶ್ವತ ಏಕರಂಗಿಯಾದ ಹಾಗೂ ಏಕ ರಸ ವಾದ ಅದೃಶ್ಯದ ಏಕತೆಯ ಮೇಲೆ ಪ್ರೇಮ ಮಾಡ ತೊಡಗಿತೆಂದರೆ, ಆ ಸೂಕ್ಷ್ಮವಾದ ಏಕತ್ವದಲ್ಲಿಯ ದಿವ್ಯ ಸೌಂದರ್ಯ ಅನುಭವಿಸತೊಡಗಿದೆವೆಂದರೆ, ಸ್ವಾನಂದವು ನಮಗೆ ತೀರ ಹತ್ತಿರವಾದಂತೆಯೇ. ಸಮುದ್ರದಲ್ಲಿ ಸಣ್ಣ ದೊಡ್ಡ ಅನಂತ ತೆರೆಗಳು ಬರುತ್ತವೆ ಹಾಗೂ ಹೋಗುತ್ತವೆ. ಅದೇ ರೀತಿ ಸ್ವಾನಂದ ಸಮುದ್ರದಲ್ಲಿ ಅನೇಕ ದೃಶ್ಯಗಳು ಕಾಣುತ್ತವೆ ಹಾಗೂ ಕಾಲಾಂತರ ದಲ್ಲಿ ಅದೃಶ್ಯದಲ್ಲಿ ವಿಲೀನವಾಗುತ್ತವೆ. ಆದ್ದರಿಂದ ದೃಶ್ಯದ ಕಡೆಗೆ ದೃಶ್ಯವೆಂದು ನೋಡದೆ ಆನಂದ ಸ್ವರೂಪ ವೆಂದು ನೋಡಲು ಕಲಿಯುವದು ಈ ಮಾರ್ಗದ ಮರ್ಮವಾಗಿರುತ್ತದೆ ಇದಕ್ಕೆ ಭಕ್ತಿ ಮಾರ್ಗವೆನ್ನು ತ್ತಾರೆ.

ನಾವು ಮನುಷ್ಯ ದೇಹಧಾರಿಗಳಾಗಿರುತ್ತವೆ. ಆದ್ದ ರಿಂದ ನಾವು ನಮ್ಮ ಇಷ್ಟದೇವತೆಯ ಅಥವಾ ಸದ್ಗುರು ಗಳ ಅತ್ಯಂತ ಸುಂದರವಾದ ಮನೋಹರವಾದ ಹಾಗೂ ಸಗುಣ ದೇಹಧಾರಿಯಾದ ದೃಶ್ಯರೂಪವನ್ನು ಕಲ್ಪಿಸ

ಬೇಕು. ಆನಂದ ಮೂರ್ತಿಯ ಚರಣಗಳಲ್ಲಿ ಲೀ
ನವಾಗಬೇಕು ಹಾಗೂ ಎಲ್ಲ ಪ್ರಕಾರದಿಂದ ನಮ್ಮ ಮ
ಸ್ಸನ್ನು ಅವರಲ್ಲಿ ತುಂಬಿ ಬಿಡುವ ಪ್ರಯತ್ನ ಮಾ
ಬೇಕು. ಅವರ ಪೂಜೆ ಮಾಡಬೇಕು, ಅವರ ನಾಮ
ಸ್ಮರಣೆ ಮಾಡಬೇಕು, ಅವರ ಚರಿತ್ರೆ ಶ್ರವಣ ಮಾ
ಬೇಕು. ಅವರೇ ನಮ್ಮ ನಿಜವಾದ ಆಪ್ತರೆಂದು ತಿಳಿ
ಬೇಕು. ಅವರೇ ನಮ್ಮ ಒಡೆಯ. ಮಿತ್ರ. ಸ್ನೇಹಿ
ನಾಗಬೇಕು. ಅವರೇ ನಮ್ಮ ಸರ್ವಸ್ವವೆಂದು ತಿಳಿಯ
ಬೇಕು. ನಾವು ಅವರಿಗೆ ಸಂಪೂರ್ಣವಾಗಿ ಸಮರ್ಪ
ವಾಗಬೇಕು. ನಮ್ಮ ಜೀವನದ ಕಡಿವಾಣವನ್ನು ಅವ
ಕೈಯಲ್ಲಿ ಕೊಡಬೇಕು. ನಮ್ಮ ಜೀವನದಲ್ಲಿ ನಡೆಯು
ಪ್ರತಿಯೊಂದು ಘಟನೆಗಳು ಅವರ ಇಚ್ಛೆಯಿಂದಲೆ ನ
ಯುತ್ತವೆ ಎಂಬ ಭಾವನೆಯನ್ನು ನಮ್ಮ ಅಂತಃಕರ
ದಲ್ಲಿ ಹೊಂದಿ ನಮ್ಮ ಪಾಲಿಗೆ ಬಂದ ಕರ್ತವ್ಯವನ
ಮಾಡಬೇಕು.

ಈರೀತಿ ಅಭ್ಯಾಸ ಮಾಡುವ ಸಾಧಕನ ಅಂತಃಕ
ಣವು ಕಾಲಾಂತರದಲ್ಲಿ ಆನಂದರೂಪ ಭಗವಂತನಿಂ
ತುಂಬಿ ಹೋಗುತ್ತದೆ. ಅವನಿಗೆ ಭಗವಂತನ ಚಿಂತ
ಯನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕಾಗಿ ಬ
ವದಿಲ್ಲ. ಅದು ತಾನಾಗಿಯೇ ಅಖಂಡ ಹಾಗೂ ಅನ
ಯಾಸವಾಗಿ ನಡೆಯುತ್ತದೆ. ಇಷ್ಟೇ ಅಲ್ಲದೇ ಅವ
ಉಪಾಸ್ಯ ದೇವತೆಯ ದೈವೀ ಗುಣಗಳು ನಿಧಾನವಾ

ಅವನಲ್ಲಿ ಪ್ರಗಟವಾಗತೊಡಗುತ್ತವೆ. ದಯೆ, ಕ್ಷಮೆ, ಉದಾರತೆ, ಸರಳತನ, ನಮ್ರತೆ, ಮಧುರವಾಣಿ, ಪರೋಪಕಾರ, ನಿರ್ಭಯತೆ ಮುಂತಾದ ಗುಣಗಳು ಅವನ ಆಚರಣೆಯು ಸಾಕಾರವಾಗುತ್ತವೆ. ಅವನ ಚಿಂತನೆಯು ದೃಢ ಹಾಗೂ ಗಾಢವಾದಂತೆ ಅವನ ಮೂರು ಅವಸ್ಥೆಗಳಲ್ಲಿ ಕೇವಲ ಭಗವಂತನದೇ ಸ್ಮರಣೆ ಉಳಿಯುತ್ತದೆ. ಕೊನೆಗೆ ಅವನ ಅಹಂಭಾವವು ಸಂಪೂರ್ಣ ಇಲ್ಲದಂತಾಗಿ ಅವನು ನಾಲ್ಕನೆಯ ಅವಸ್ಥೆಯಲ್ಲಿ ಪ್ರವೇಶ ಮಾಡುತ್ತಾನೆ. ಸ್ವಾನಂದದಿಂದ ತುಂಬಿ ಹೋಗುತ್ತಾನೆ. ಪ್ರಾರಂಭದಲ್ಲಿ ಆನಂದ, ಸಾಧನ ಕಾಲದಲ್ಲಿ ಆನಂದ ಪರ್ಯವಸಾನದಲ್ಲಿ ಆನಂದವನ್ನು ಕೊಡುವ ಹಾಗೂ ಸಂತರಿಗೆ ಪ್ರಿಯವಾದದ್ದು ಈ ಭಕ್ತಿ ಮಾರ್ಗವಾಗಿರುತ್ತದೆ.

★ ಪ್ರದೀಪ ಇಪ್ಪತ್ತೇಳು ★

ಸಾಧಕನಿಗಾಗಿ ಪ್ರಾಥಮಿಕ ಸೂಚನೆಗಳು

ಮಾರ್ಗವು ಯಾವದೇ ಆಗಿರಲಿ ಸ್ವಾನಂದದ ಅಭ್ಯಾಸವನ್ನು ಮಾಡುವದೆಂದು ನಿಶ್ಚಯ ಮಾಡಿದ ಮೇಲೆ ಸಾಧಕನಿಗೆ ಕೆಲವು ಮೂಲಭೂತ ವಿಚಾರಗಳ ಕಡೆಗೆ ಲಕ್ಷ್ಯಕೊಡದ ಹೊರತು ಗತ್ಯಂತರವಿಲ್ಲ.

೧) ನಮಗೆ ಪರಮಾರ್ಥವನ್ನು ಏತಕ್ಕಾಗಿ ಮಾಡುವದಿರುತ್ತದೆ ಎಂಬ ಬಗ್ಗೆ ಅತ್ಯಂತ ಸ್ಪಷ್ಟ

ಕಲ್ಪನೆಯು ಇರಬೇಕು. ಸ್ವಾನಂದದ ಸಾಕ್ಷಾತ್ ಅ
ಭವಕ್ಕಾಗಿ ಪರಮಾರ್ಥ ಇರುವದೇ ಹೊರತು ಪ್ರಪ
ಸುಧಾರಣೆಗಾಗಿ ಅಲ್ಲ.

೨) ನಮಗೆ ಅನೇಕತೆಯಿಂದ ಏಕತೆಯಲ್ಲಿ ಸಿ
ವಾಗುವದನ್ನು ಕಲಿಯುವದಿರುತ್ತದೆ. ಆದ್ದರಿಂದ ಸಾ
ಕನು ಒಂದೇ ದೇವರ ಪೂಜೆ ಮಾಡಬೇಕು. ಒಬ್ಬ
ಗುರುಗಳಿಗೆ ಶರಣು ಹೋಗಬೇಕು ಒಂದೇ ಸಾಧನೆ
ಅವಲಂಬನೆ ಮಾಡಬೇಕು ಹಾಗೂ ಒಂದೇ ಧ್ಯೇ
ವನ್ನು ನಿಶ್ಚಿತಪಡಿಸಿಕೊಂಡು ಮುಂದೆ ಸಾಗಬೇಕು.

೩) ಪ್ರತಿಯೊಬ್ಬ ಮನುಷ್ಯನು ಯಾವದಾ
ರೊಂದನ್ನು ವಿಶೇಷವಾಗಿ ಅಥವಾ ಉತ್ಕಟವಾಗಿ ಪ್ರೇ
ಮಾಡುತ್ತಾನೆ. ಆ ಪ್ರೇಮ ಪಾತ್ರ ವಸ್ತುವಿನ
ಮನಸ್ಸು ತೊಡಗುವದರಿಂದ ಅದೇ ಅವನಿಗೆ ಸ್ವಾನಂ
ಪ್ರಾಪ್ತಿಯಲ್ಲಿ ಅಡ್ಡ ಬರುತ್ತದೆ. ಆ ಪ್ರೇಮ ಪಾ
ವಸ್ತುವನ್ನು ಶೋಧಿಸಿ ಇನ್ನು ಮುಂದೆ ಮನಸ್ಸು ಅ
ರಲ್ಲಿ ತೊಡಗದಂತೆ ಸಾವಧಾನವಾಗಿರಬೇಕು.

೪) ನಮಗೆ ಸ್ವಾನಂದ ಪ್ರಾಪ್ತಿಯು ಆಗಿಯೆ
ಆಗುವದು ಎಂಬ ದೃಢವಾದ ನಿಷ್ಠೆಯಿಂದ ಸಾಧ
ಮಾಡಬೇಕು. ನಾವೇ ನಮ್ಮ ವಿಷಯದಲ್ಲಿ ಸಂಶ
ತಾಳಿದರೆ ನಮ್ಮ ಸಾಧನೆಯು ಶಿಥಿಲವಾಗುತ್ತದೆ.

೫) ಸಾಧನೆ ಮಾಡುವಾಗ ನಾವು ಆರಂಭಶೂ
ರರಾಗಬಾರದು. ಕೆಲವು ದಿವಸ ಬಹಳ ಸಾಧನೆಮಾ

ಆಮೇಲೆ ಅತ್ಯಂತ ಕಡಿಮೆ ಸಾಧನೆ ಮಾಡುವದಕ್ಕಿಂತ ಪ್ರತಿದಿವಸ ಅಲ್ಪ ಪ್ರಮಾಣದಲ್ಲಾದರೂ ಅಡ್ಡಿ ಇಲ್ಲ. ಅಖಂಡವಾಗಿ ಹಾಗೂ ಜಿಗುಟುತನದಿಂದ ನಡೆಸಬೇಕು. ನಿಯಮವು ಸಣ್ಣದಾದರೂ ಅದನ್ನು ಪ್ರಾಣಕ್ಕಿಂತ ಹೆಚ್ಚು ಪಾಲಿಸಬೇಕು.

೬) ಉಪ್ಪುತನವು ಹೇಗೆ ಉಪ್ಪಿನ ಸ್ಥಾಯಿ ಧರ್ಮವಾಗಿರುತ್ತದೆಯೋ ಅದೇರೀತಿ ಅಪೂರ್ಣತೆ, ನ್ಯೂನತೆ ಇವು ಪ್ರಪಂಚದ ಸ್ಥಾಯಿ ಭಾವಗಳಾಗಿರುತ್ತವೆ. ಪ್ರಪಂಚವನ್ನು ಎಷ್ಟೇ ಸುಧಾರಿಸಿದರೂ ಅದರಿಂದ ಸ್ವಾನಂದ ಪ್ರಾಪ್ತವಾದೀತೆಂದು ತಪ್ಪಿಯೂ ತಿಳಿದುಕೊಳ್ಳಬಾರದು.

೭) ವರ್ತಮಾನ ಪತ್ರವನ್ನು ಸಮಗ್ರವಾಗಿ ಓದಬಾರದು. ಅದರಿಂದ ನಮ್ಮ ಮನಸ್ಸಿನಲ್ಲಿ ವಿಕಲ್ಪಗಳು ಉಂಟಾಗಿ ನಮ್ಮ ಸಾಧನೆಗೆ ಧಕ್ಕೆಯನ್ನುಂಟುಮಾಡುತ್ತವೆ. ವರ್ತಮಾನ ಪತ್ರದಲ್ಲಿ ನಮ್ಮ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯವನ್ನು ಮಾತ್ರ ಓದಬೇಕು.

೮) ಸತ್ಪುರುಷರು ಬರೆದ ಗ್ರಂಥಗಳನ್ನು ಓದಬೇಕು. ಪಂಡಿತರು ಬರೆದ ಗ್ರಂಥಗಳನ್ನು ಓದಬಾರದು. ಸತ್ಪುರುಷರು ಬರೆದ ಗ್ರಂಥಗಳನ್ನೂ ಕೂಡ ಅವರು ಹೇಳಿದ ವಿಷಯವನ್ನು ನಾವು ಪ್ರತ್ಯಕ್ಷವಾಗಿ ಆಚರಣೆಯಲ್ಲಿ ತರಲು ಹೇಗೆ ಶಕ್ಯವಿದೆ ಎಂಬ ದೃಷ್ಟಿಕೋನ

ವನ್ನಿಟ್ಟು ಓದಬೇಕು. ನಿತ್ಯ ಜೀವನದಲ್ಲಿ ಸಣ್ಣ ಪ್ರ
ಪ್ರಯೋಗಗಳನ್ನು ಮಾಡಿನೋಡಬೇಕು.

೯) ಸಾಧನೆಯ ವಿಷಯದಲ್ಲಿ ಯಾರೊಡನೆಯು
ವಾದ ಹಾಕಬಾರದು. ವಾದದಲ್ಲಿ ನಾವು ಕಡಿಮೆ ಬಿ
ವೆಂದರೆ ನಮ್ಮ ಶ್ರದ್ಧೆಯು ಶಿಥಿಲವಾಗುತ್ತದ
ಶ್ರದ್ಧೆಯು ಕೆಡುವದೆಂದರೆ ಸಾಧನೆಯ ದೃಷ್ಟಿಯಿಂ
ನಮ್ಮ ಪ್ರಕೃತಿಯು ಕೆಟ್ಟಂತೆ.

೧೦) ಜನರಿಗೆ ಪರಮಾರ್ಥ ಹೇಳುವ ಹವ್ಯಾ
ಇರಬಾರದು. ಏಕೆಂದರೆ ಪರಮಾರ್ಥ ತಿಳಿಯು
ಮನುಷ್ಯ ನಿದಾನ ಭಾರತದಲ್ಲಂತೂ ಹುಟ್ಟಿ ಬರು
ದಿಲ್ಲ. ಪರಮಾರ್ಥ ಕಲಿಯುವ ಹವ್ಯಾಸವಿರಬೇಕು
ಅದೇರೀತಿ ಪರಮಾರ್ಥ ಮಾಡದೆ ಇರುವವರನ್ನು ಹೀ
ದೃಷ್ಟಿಯಿಂದ ನೋಡಬಾರದು. ಯಾರಲ್ಲಿ ಎಷ್ಟು ಶ್ರ
ಇರುತ್ತದೆ ಎಂಬುದು ಹೊರಗಿನಿಂದ ನೋಡಿದರೆ ತಿ
ಯುವದಿಲ್ಲ.

೧೧) ಮರಣದ ಸ್ಮರಣೆಯನ್ನಿಟ್ಟು ನಮ್ಮ ಸಮಯ
ವ್ಯರ್ಥವಾಗದಂತೆ ನಡೆಯಬೇಕು.

★ ಪ್ರದೀಪ ಇಪ್ಪತ್ತೆಂಟು ★

ಪರಮಾರ್ಥಕ್ಕೆ ಪಾವಿತ್ರ್ಯಬೇಕು

ಯಾವ ದೇಹವನ್ನು ಸಾಧನೆಯನ್ನಾಗಿ ಮಾ
ಕೊಂಡು ಅನಾತ್ಮ ವಾಸನೆಯ ತೃಪ್ತಿಯನ್ನು ಹೊಂ

ಬಯಸುತ್ತದೆಯೋ ಅದೇ ದೇಹವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಆತ್ಮ ವಾಸನೆಯು ಅಂತರಂಗದಲ್ಲಿ ಇಳಿಯಲು ಕಲಿಯುತ್ತದೆ. ಆದರೆ ಅನಾತ್ಮ ವಾಸನೆಯನ್ನು ಸೇವಿಸಿ ಮಲಿನವಾದ ದೇಹವನ್ನು ಆತ್ಮವಾಸನೆಯನ್ನು ಸೇವಿಸಲು ಯೋಗ್ಯ ಹಾಗೂ ಸಮರ್ಥ ಮಾಡಬೇಕಾಗುತ್ತದೆ. ಇದಕ್ಕಾಗಿ ಮೊದಲು ಅದನ್ನು ಅಂತರಂಗ ಹಾಗೂ ಬಹಿರಂಗದಲ್ಲಿ ನಿರ್ಮಲಗೊಳಿಸಬೇಕಾಗುತ್ತದೆ ಹಾಗೂ ಅನಂತರ ಅದನ್ನು ಪವಿತ್ರವಾದ ಆಚರಣೆ ಉಳ್ಳದ್ದನ್ನಾಗಿ ಮಾಡಬೇಕು. ತಿನ್ನುವದು. ಕುಡಿಯುವದು, ನಿದ್ರೆ. ಮಲಮೂತ್ರ ವಿಸರ್ಜನೆ, ವಸ್ತ್ರಧಾರಣೆ. ಮಾತನಾಡುವದು, ನಡೆದಾಡುವದು ಮುಂತಾದ ದೇಹದ ಮೂಲಭೂತ ಅಪೇಕ್ಷೆಗಳನ್ನು ಸೇವಿಸದ ಹೊರತು ದೇಹವು ಬದುಕಲೇ ಸಾಧ್ಯವಿಲ್ಲ. ಆದರೆ ಆ ಅಪೇಕ್ಷೆ ಪೂರೈಸುವಾಗಲೂ. ನಿಯಮದ. ಸಮಯದ, ಪ್ರಮಾಣದ. ಸ್ವಚ್ಛತೆಯ ಹಾಗೂ ಸಾಧನೆಯ ವಿಷಯದಲ್ಲಿ ಸ್ವಲ್ಪವಾದರೂ ಬಂಧನ ಹಾಕಿಕೊಳ್ಳದ ಹೊರತು ಪವಿತ್ರತೆಯ ಆಚರಣೆಯು ಆಗಲು ಶಕ್ಯವಿಲ್ಲ ಹಾಗೂ ಸಾಧನೆಗೆ ತೀವ್ರತೆ ಬರುವದಿಲ್ಲ.

ದೇಹದ ಪವಿತ್ರತೆಯ ನಿಯಮಗಳು ಬಹಳಷ್ಟು ಪ್ರಮಾಣದಲ್ಲಿ ಮನಸ್ಸಿಗೂ ಅನ್ವಯಿಸುತ್ತವೆ. ಇಷ್ಟೇ ಅಲ್ಲದೇ ಪರಮಾರ್ಥದಲ್ಲಿ ಮನಸ್ಸಿನ ಬಂಧನಗಳನ್ನು ಹೆಚ್ಚು ಸಾವಧಾನತೆಯಿಂದ ಪಾಲಿಸುವದು ಅವಶ್ಯವಿರು

ತ್ತದೆ. ಸಾಧಕನ ಅವಸ್ಥೆಯು ಸ್ಪರ್ಧೆಯಲ್ಲಿ ಓಡ
ಕುದುರೆಯಂತಿರುತ್ತದೆ. ಆ ಕುದುರೆಯು ಎಲ್ಲ ಪ್ರಕ
ದಿಂದಲೂ ನಿಯಮದಿಂದಿರುವದರಿಂದಲೇ ಸ್ಪರ್ಧೆಯ
ಗೆಲ್ಲುತ್ತದೆ. ಆದ್ದರಿಂದ ಎಲ್ಲ ರೀತಿಯಿಂದಲೂ ಪವಿತ್ರ
ಯನ್ನು ಕಾಯ್ದುಕೊಂಡು ಹೋಗುವ ಸಾಧಕನ ಪ್ರ
ತಿಯು ಬಹಳ ತೀವ್ರಗತಿಯಿಂದ ಆಗುತ್ತದೆ. ಆದ್ದರಿ
ಯಾವ ಕರ್ಮದಿಂದ ಅಥವಾ ಆಚರಣೆಯಿಂದ ಮನ
ಅಪವಿತ್ರವಾಗುತ್ತದೆಯೋ ಅದನ್ನು ಕಟಾಕ್ಷದಿಂದ ದ
ಮಾಡಬೇಕು ಹಾಗೂ ಯಾವ ಆಚರಣೆಯಿಂದ ಅ
ಪವಿತ್ರವಾಗುವದೋ ಅದನ್ನು ನಿಶ್ಚಿತವಾಗಿ ಪಾ
ಬೇಕು.

★ ಪ್ರದೀಪ ಇಪ್ಪತ್ತೊಂಬತ್ತು ★

"ಆಹಾರ ಶುಚಿತ್ವ"

ದೇಹವನ್ನು ಹಾಗೂ ಮನಸ್ಸನ್ನು ಪವಿ
ವಾಗಿಟ್ಟುಕೊಳ್ಳುವದಕಾಗಿ ಪವಿತ್ರ ಆಹಾರದ ಅವಶ್ಯ
ಬಹಳವಿರುತ್ತದೆ ಎಂಬುದನ್ನು ಸಾಧಕರು ಮರೆ
ಬಾರದು ಕಣ್ಣು, ಕಿವಿ, ಮೂಗು, ನಾಲಿಗೆ
ತ್ವಚವೆಂಬ ಜ್ಞಾನೇಂದ್ರಿಯಗಳಿಂದ ಯಾವ
ದೃಶ್ಯವನ್ನು ನಾವು ಒಳಗೆ ತೆಗೆದುಕೊಳ್ಳುತ್ತೇವೆಯೋ
ಅವೆಲ್ಲವೂ ಆಹಾರವೇ ಆಗಿರುತ್ತದೆ. ಕೇವಲ ವ
ಹಾರದ ದೃಷ್ಟಿಯಿಂದ ವಿಚಾರ ಮಾಡಿದರೂ ಕ

ಬಹಳ ನೋಡುವದರಿಂದ, ಕೇಳುವದರಿಂದ, ಮಾತನಾಡುವದರಿಂದ ಹಾಗೂ ತಿನ್ನುವದರಿಂದ ಶಕ್ತಿಯು ಅಕಾರಣ ವ್ಯಯವಾಗುತ್ತದೆ. ದುರ್ಬಲ ಮನಸ್ಸಿಗೆ ಏಕಾಗ್ರತೆ ಸಾಧ್ಯವಾಗುವದಿಲ್ಲ ಅಂದಮೇಲೆ ಆತ್ಮಚಿಂತನೆ ಹೇಗೆ ಸಾಧಿಸುತ್ತದೆ ? ಆದ್ದರಿಂದ ಪ್ರತಿಯೊಂದು ಇಂದ್ರಿಯಗಳನ್ನು ನಿಯಮಿತವಾಗಿ ಉಪಯೋಗಿಸಬೇಕು. ಈಗಿನ ನಮ್ಮ ಜೀವನದಲ್ಲಿ ಕಣ್ಣು, ಕಿವಿ ಹಾಗೂ ಮೂಗುಗಳಿಗೆ ಹೆಚ್ಚಿನ ಶ್ರಮವಾಗುತ್ತದೆ. ಬೇಡವಾದ ಎಷ್ಟೋ ವಿಷಯಗಳನ್ನು ನೋಡಬೇಕಾಗುತ್ತದೆ ಕೇಳಬೇಕಾಗುತ್ತದೆ ಹಾಗೂ ವಾಸನೆ ತೆಗೆದುಕೊಳ್ಳಬೇಕಾಗುತ್ತದೆ. ಇಷ್ಟೇ ಅಲ್ಲದೆ ನಾವು ನಮ್ಮ ಇಚ್ಛೆಯಿಂದ ನೋಡುವದು, ಕೇಳುವದು ಹಾಗೂ ವಾಸನೆ ತೆಗೆದುಕೊಳ್ಳುವದು ಕೂಡ ಇರುತ್ತದೆ. ಇದನ್ನು ತಪ್ಪಿಸಿಕೊಳ್ಳುವದಕ್ಕಾಗಿ ಪ್ರತಿ ದಿವಸ ಬೆಳಿಗ್ಗೆ ಹಾಗೂ ಸಾಯಂಕಾಲ ಕನಿಷ್ಟ ಅರ್ಧ ಗಂಟೆಯಾದರೂ ಕಣ್ಣು ಮುಚ್ಚಿ ಸುಮ್ಮನೇ ಕುಳಿತುಕೊಳ್ಳಬೇಕು. ಆಗ ಕಿವಿಯಲ್ಲಿ ಅರಳಿಯ ಮುದ್ದಿ ಹಾಕಿಕೊಳ್ಳಬೇಕು. ಬಾಯಿಂದ ಮೌನವಾಗಿರಬೇಕು. ನಿತ್ಯ ನಿಯಮಿತ ಸಮಯದಲ್ಲಿ ಹಾಗೂ ನಿಯಮಿತ ಪ್ರಮಾಣದಲ್ಲಿ ಸಾಮಾನ್ಯ ಆಹಾರ ಸೇವಿಸಬೇಕು. ಪಚನಕ್ಕೆ ಹಗುರಾದ, ಮಿಶ್ರಣವಲ್ಲದ, ಬಹಳ ಸಂಸ್ಕಾರಗೊಳಿಸದೇ ಇರುವ, ಅತ್ಯಂತ ತೀಕ್ಷ್ಣ, ಹುಳಿ ಅಥವಾ ಸಿಹಿ ಅಲ್ಲದ, ವಾತವಿಕಾರವನ್ನುಂಟು ಮಾಡದೇ

ಇರುವ ಆಹಾರವನ್ನು ಭಗವಂತನಿಗೆ ನೈವೇದ್ಯ ತೋರಿಸಿ ಅಥವಾ ಅವನ ಸ್ಮರಣೆ ಮಾಡಿ ಪ್ರಸನ್ನ ಮನಸ್ಸಿನಿಂದ ಸೇವಿಸಬೇಕು. ಮನಸ್ಸು ಉದಾಸವಾದಾಗ ಅಥವಾ ವಿಕಾರಿಯಾದಾಗ ಆಹಾರ ಸೇವಿಸಬಾರದು. ಮದ್ಯ. ಗಾಂಜಾ ಚರಸು, ಅಫೀಮು ಮುಂತಾದ ಬುದ್ಧಿಯ ಮೇಲೆ ಅನಿಷ್ಟ ಪರಿಣಾಮವನ್ನುಂಟು ಮಾಡುವ ದ್ರವ್ಯಗಳನ್ನು ಎಂದೂ ಸೇವಿಸಬಾರದು. ಚಹಾ ತಂಬಾಕು ಎಲೆ ಅಡಿಕೆ ಮುಂತಾದವುಗಳನ್ನು ಕೂಡ ಪ್ರಮಾಣ ಬಿಟ್ಟು ಸೇವಿಸಬಾರದು ಅವಶ್ಯಕತೆ ಇಲ್ಲದಾಗ ಹಾಗೂ ಬೇರೆ ಅನುಕೂಲತೆ ಇರುವಾಗ ಕೇವಲ ನಾಲಿಗೆಯ ರುಚಿಗಾಗಿ ಚಹಾ ಅಂಗಡಿಗಳಲ್ಲಿಯ ಪದಾರ್ಥಗಳನ್ನು ಸೇವಿಸಬಾರದು. ಸಪ್ತಾಹದಲ್ಲಿಯ ಒಂದು ದಿವಸ ಹಗುರಾದ, ಅಲ್ಪ ಪ್ರಮಾಣದ, ಸಾತ್ವಿಕ ಪದಾರ್ಥಗಳನ್ನು ತಿಂದು ಉಪವಾಸ ಮಾಡಬೇಕು. ಅದರ ಮೊದಲಿನ ದಿವಸ ರಾತ್ರಿ ತ್ರಿಫಳಾ ಚೂರ್ಣ ತೆಗೆದುಕೊಳ್ಳಬೇಕು. ಉಪವಾಸದ ದಿವಸ ಬೆಳಿಗ್ಗೆ ಶಕ್ಯವಾದರೆ ಜೇನುತುಪ್ಪ ಹಾಗೂ ಲಿಂಬೆ ರಸವನ್ನು ಬಿಸಿ ನೀರಿನಲ್ಲಿ ತೆಗೆದುಕೊಳ್ಳಬೇಕು. ವಯಸ್ಸಿನ ಐವತ್ತು ಐವತ್ತೈದು ವರುಷವಾಯಿತೆಂದರೆ ರಾತ್ರಿಯ ಆಹಾರವನ್ನು ಅರ್ಧಕ್ಕೆ ತರಬೇಕು. ಅದೂ ಕೂಡ ಹಾಲು, ಮಜ್ಜಿಗೆ, ಪಾಯಸ, ಚಪಾತಿ, ಹಸಿ ಕೋಸಿಂಬಿರಿ ಅಥವಾ ಒಂದು ಹಣ್ಣು ಈ ರೀತಿಯಾಗಿರಬೇಕು. ನೆಲಗಡಲೆ ಅಥವಾ ಅದರ ಪುಡಿಯನ್ನು

ಆಹಾರದಲ್ಲಿ ಉಪಯೋಗಿಸಬೇಕು. ತಾತ್ಪರ್ಯವೇನೆಂದರೆ ದೇಹದ ಶಕ್ತಿಯು ಉಳಿಯಬೇಕು ಹಾಗೂ ಸಾಧನೆಗೆ ಆ ಶಕ್ತಿಯ ಉಪಯೋಗ ಹೆಚ್ಚಿನ ಪ್ರಮಾಣದಲ್ಲಿ ಮಾಡಿಕೊಳ್ಳಲು ಬರಬೇಕು ಎಂಬ ವಿಚಾರದಿಂದಲೇ ನಾವು ಆಹಾರ ಸೇವಿಸಬೇಕು.

★ ಪ್ರದೀಪ ಮೂವತ್ತು ★

"ವಿಹಾರ ಶುಚಿತ್ವ"

ವಿಹಾರವೆಂದರೆ ಕ್ರೀಡೆ ಅಥವಾ ಮನೋರಂಜನೆ. ಮನುಷ್ಯನೆಂದ ಮೇಲೆ ಅವನಿಗೆ ಏನಾದರೂ ಮನೋರಂಜನೆ ಬೇಕೇಬೇಕು. ಮನೋರಂಜನೆಯಿಂದ ಮನಸ್ಸಿನ ಮೇಲಿನ ಒತ್ತಡವು ಕಡಿಮೆಯಾಗಿ ಮುಖ್ಯ ಕೆಲಸದಿಂದ ಉಂಟಾದ ಬೇಸರವು ದೂರವಾಗುತ್ತದೆ. ಮನೋರಂಜನೆಯಲ್ಲಿ ಮನುಷ್ಯನ ಮನಸ್ಸು ರಮಿಸುತ್ತದೆ ಹಾಗೂ ಪ್ರಸನ್ನವಾಗುತ್ತದೆ. ಸಿನೇಮಾ, ನಾಟಕ, ಆಟ, ಪ್ರವಾಸ, ಪರ್ವತಾರೋಹಣ, ಬೇಟೆ, ಸಂಭಾಷಣೆ ಹರಟೆ, ವಿನೋದ, ಇಸ್ಪೇಟು ಆಟ, ಚದುರಂಗದಾಟ, ಈಜುವದು, ಹೂದೋಟಗಾರಿಕೆ, ಚಿತ್ರಕಲೆ, ಮುಂತಾದ ಅನೇಕ ಮನೋರಂಜನೆಯ ಪ್ರಕಾರಗಳಿರುತ್ತವೆ. ಜೂಜು ಆಡುವದು, ವ್ಯಸನ ಸೇವನೆ, ಜಗಳಾಟ, ನಿಂದೆ, ಮುಂತಾದವುಗಳಿಗಿಂತಲೂ ಮೇಲೆ ಹೇಳಿದ ಪ್ರಕಾರಗಳು ಉತ್ತಮವಾದವುಗಳೆಂಬುದರಲ್ಲಿ ಸಂಶಯ

ವಿಲ್ಲ. ಆದರೆ ಸಾಧಕನಾದವನಿಗೆ ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಬೇಕು. ಮನೋರಂಜನೆ ಯಲ್ಲಿಯೂ ಸ್ವಾನಂದದ ವಿಸ್ಮರಣೆ ಆಗಬಾರದು. ಆದ್ದರಿಂದ ಸಾಧಕನು ಸಿನೇಮಾ ಅಥವಾ ನಾಟಕ ನೋಡ ಬೇಕು. ಆದರೆ ಅದು ದೇವರದಾಗಿರಬೇಕು. ಸಂಭಾ ಷಣೆ ಮಾಡಬೇಕು ಆದರೆ ಅದು ಸ್ವಾನಂದ ವಿಷಯಕ ವಾಗಿರಬೇಕು. ಹಾಡು ಹಾಡಬೇಕು. ಆದರೆ ಅದು ಈಶ್ವರ ಸಂಬಂಧಿಯಾಗಿರಬೇಕು. ಪ್ರವಾಸ ಮಾಡ ಬೇಕು. ಆದರೆ ಅದು ಸತ್ಸಂಗಕ್ಕಾಗಿ ಆಗಿರಬೇಕು. ಓದಬೇಕು ಆದರೆ ಅದು ಆತ್ಮಜ್ಞಾನ ವಿಷಯಕವಾಗಿರ ಬೇಕು. ಯಾವ ಮನೋರಂಜನೆಯಲ್ಲಿ ನಮ್ಮ ಸ್ವಾರ್ಥ ವಿರುವದಿಲ್ಲವೋ, ಸ್ತ್ರೀಪುರುಷರ ಅತಿ ನಿಕಟ ಸಹವಾಸ ವಿರುವದಿಲ್ಲವೋ, ಹಣದ ಅಪಹರಣದ ಉದ್ದೇಶವಿರು ವದಿಲ್ಲವೋ ಹಾಗೂ ಅದಕ್ಕೆ ಅವಕಾಶವಿಲ್ಲವೋ ಎರಡನೇ ಯವರ ಹಾನಿ ಇಲ್ಲವೋ ಹಾಗೂ ಹೆಚ್ಚಿನ ಸಮಯ ವ್ಯರ್ಥವಾಗದೇ ನಮ್ಮ ವೃತ್ತಿಗಳು ಸಾಧನೆಯ ಮಾರ್ಗ ದಿಂದ ವಿಚಲಿತವಾಗುವದಿಲ್ಲವೋ ಅಂಥ ಮನೋ ರಂಜನೆಗಳು ಪವಿತ್ರವೆಂದು ತಿಳಿಯಬೇಕು. ಬಹಳ ಸಮಯ ಪೂಜೆ ಆಯಿತೆಂದರೆ ಸತ್ಪುರುಷರ ಗ್ರಂಥಗಳ ವಾಚನ ಮಾಡಬೇಕು. ಓದುತ್ತ ಬಹಳ ಸಮಯ ವಾಯಿತೆಂದರೆ ಜಪ ಮಾಡಬೇಕು. ಬಹಳ ಸಮಯ ಜಪ ಆಯಿತೆಂದರೆ ಭಜನೆ ಮಾಡಬೇಕು. ಅನಂತರ

ಆರತಿ ಮಾಡಬೇಕು. ಪ್ರಸಾದ ತಗೆದುಕೊಳ್ಳಬೇಕು. ದೇವದರ್ಶನಕ್ಕೆ ಹೋಗಬೇಕು. ಯಾರಾದರೂ ಭೆಟ್ಟಿಯಾದರೆ ಅವರೊಡನೆ ದೇವರ ಬಗ್ಗೆ ಮಾತನಾಡಬೇಕು. ತಾತ್ಪರ್ಯವೇನೆಂದರೆ ಯಾವದಾದರೊಂದು ನಿಮಿತ್ತದಿಂದ ಮನಸ್ಸನ್ನು ಸ್ವಾನಂದದಲ್ಲಿಯೇ ರಮಿಸುವ ಅಭ್ಯಾಸ ಮಾಡಬೇಕು. ಇದೇ ವಿಹಾರ ಶುಚಿತ್ವ.

★ ಪ್ರದೀಪ ಮೂವತ್ತೊಂದು ★

ಆಚಾರ ಶುಚಿತ್ವ

ನೀತಿಮತ್ತೆಯ ಪಾಲನೆ ಮಾಡಿ ಆಚಾರದ ಪವಿತ್ರತೆಯನ್ನು ಕಾಯ್ದುಕೊಳ್ಳದ ಹೊರತು ಪಾಪಕ್ಷಯ ಹಾಗೂ ಪುಣ್ಯ ಸಂಚಯವಾಗುವದಿಲ್ಲ. ಸಾಧು ಸಂತರ ಪ್ರತ್ಯಕ್ಷ ಅನುಭವವೇನೆಂದರೆ ನೀತಿ ನಿಯಮಗಳ ಕಠೋರ ಪಾಲನೆ ಆಗದ ಹೊರತು ಸ್ವಾನಂದದ ಅನುಭವ ತೆಗೆದುಕೊಳ್ಳಲು ಯೋಗ್ಯವಾದ ಮನಸ್ಸು ತಯಾರು ಆಗುವದೇ ಇಲ್ಲ. ಆದ್ದರಿಂದ ಎಲ್ಲ ಧರ್ಮಗಳಲ್ಲಿ ಯಾವ ಸಾಮಾನ್ಯ ನೀತಿ ನಿಯಮಗಳನ್ನು ಹೇಳಿರುತ್ತದೆಯೋ ಅವುಗಳ ಆಚರಣೆ ಆಗಲಿಕ್ಕೇ ಬೇಕು. ಅವುಗಳಲ್ಲಿ ಮುಂದೆ ಹೇಳಿದ ಮೂರು ನಿಯಮಗಳಿಗೆ ಅಪವಾದವಿಲ್ಲ ಹಾಗೂ ಅಲ್ಲಿ ಒಪ್ಪಂದಕ್ಕೆ ಅವಕಾಶವಿಲ್ಲ.

೧) ಪುರುಷನಿಗೆ ಪರಸ್ತ್ರೀ ಹಾಗೂ ಸ್ತ್ರೀಗೆ ಪರಪುರುಷ ಎಲ್ಲ ಕಾಲದಲ್ಲಿ ಎಲ್ಲ ಸ್ಥಾನದಲ್ಲಿ ತ್ಯಾಜ್ಯ.

೨) ಪರದ್ರವ್ಯ ಅಂದರೆ ಯಾವ ದ್ರವ್ಯಗಳ ಮೇಲೆ ನಮ್ಮದು ಏನೂ ಅಧಿಕಾರ ಇರುವದಿಲ್ಲವೋ ಹಾಗೂ ಯಾವುದಕ್ಕಾಗಿ ನಾವು ಯಾವದೇ ರೀತಿಯ ಶ್ರಮ ಪಟ್ಟಿಲ್ಲವೋ ಅದು ಅತ್ಯಂತ ತ್ಯಾಜ್ಯವಾದುದು.

೩) ಪರನಿಂದಾ ಸರ್ವಥಾ ತ್ಯಾಜ್ಯ.

ಇವುಗಳಲ್ಲಿ ಮೊದಲನೆಯ ಎರಡು ನಿಯಮಗಳು ಸ್ವಲ್ಪ ಮಟ್ಟಿಗೆ ಸಾಧಿಸುತ್ತವೆ. ಆದರೆ ಮೂರನೇ ನಿಯಮವನ್ನು ಸಾಧಿಸುವದು ಮಾತ್ರ ಬಹಳ ಕಠಿಣವಾಗುತ್ತದೆ. ಈ ಜಗತ್ತು ತ್ರಿಗುಣಾತ್ಮಕವಾಗಿರುತ್ತದೆ ಆದ್ದರಿಂದ ಪ್ರತಿಯೊಂದು ವಸ್ತುವಿನಲ್ಲಿ ಹಾಗೂ ವ್ಯಕ್ತಿಗಳಲ್ಲಿ ಸತ್ವ ಗುಣದ ಜೊತೆಗೆ ರಜತಮಗಳ ಮಿಶ್ರಣ ಇದ್ದೇ ಇರುತ್ತದೆ, ಅಂದರೆ ನಿರ್ದೋಷ ಮನುಷ್ಯನು ಹುಟ್ಟಿ ಬರಲು ಶಕ್ಯವೇ ಇಲ್ಲ. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗವು ಅಜ್ಞಾತ ಇರುವದರಿಂದ ಯಾವ ದೋಷಗಳು ನಮಗೆ ಅವನಲ್ಲಿ ಕಾಣುತ್ತವೆಯೋ ಅವು ನಿಶ್ಚಿತವಾಗಿಯೂ ಅವನಲ್ಲಿ ಇವೆ ಅಥವಾ ಇಲ್ಲವೆಂದು ಹೇಳಲಿಕ್ಕಾಗುವದಿಲ್ಲ. ಎಷ್ಟೋ ವೇಳೆ ನಮಗೆ ಕಾಣುವ ದೋಷಗಳ ಬೀಜಗಳು ಆ ವ್ಯಕ್ತಿಗಿಂತಲೂ ನಮ್ಮಲ್ಲಿಯೇ ಇರುವದಾಗಿ ಕಂಡು ಬರುತ್ತದೆ. ಒಂದು ವೇಳೆ ನಮಗೆ ಕಾಣುವ ಆ ದೋಷವು ಆ ವ್ಯಕ್ತಿಯಲ್ಲಿ ಇರುವದೆಂದು ಸಿದ್ಧವಾದರೂ ಕೂಡ ಅದರ ಚಿಂತನೆಯನ್ನು ಮಾಡಿ ನಾವು ನಮ್ಮ ಮನಸ್ಸನ್ನು ಅಪವಿತ್ರಗೊಳಿಸಿಕೊಳ್ಳುವದ

ದಲ್ಲಿ ಆಗುವ ಲಾಭವೇನು ? ಸಾಧಕನು ಎರಡನೆಯವರ ದೋಷಗಳನ್ನು ಸುಧಾರಿಸುವ ಪ್ರಯತ್ನವನ್ನು ಮಾಡಬೇಕು. ಹಾಗೂ ಅದು ಶಕ್ಯವಾಗದಿದ್ದರೆ ಸುಮ್ಮನೆ ಕೂಡ್ರಬೇಕು. ಆದರೆ ಆ ದೋಷವು ನಮ್ಮಲ್ಲಿ ಬಾರದಂತೆ ಸಾವಧಾನವಾಗಿರಬೇಕು.

ಎರಡನೇಯವರ ದೋಷ ಕಣ್ಣಿಗೆ ಕಂಡರೂ ಅದನ್ನು ಉಚ್ಚಾರ ಮಾಡದೇ ಇರುವದು. ನಿಂದೆಯನ್ನು ದೂರ ಮಾಡುವ ಮೊದಲನೆ ಮೆಟ್ಟಲು ಆಗಿರುತ್ತದೆ. ಎರಡನೇಯವರ ದೋಷಗಳ ಚಿಂತನೆ ಮಾಡದೇ ಅವುಗಳನ್ನು ಮುಚ್ಚಿ ವ್ಯವಹರಿಸುವದು ಎರಡನೆ ಮೆಟ್ಟಲು ಆಗಿರುತ್ತದೆ. ಎರಡನೆಯುವರ ದೋಷಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿ ಆ ಮನುಷ್ಯನ ಮೇಲೆ ನಿಜವಾದ ಪ್ರೇಮ ಮಾಡುವದು ಮೂರನೆ ಮೆಟ್ಟಲು ಆಗಿರುತ್ತದೆ. ಪ್ರತಿಯೊಬ್ಬ ಮನುಷ್ಯನು ಶ್ರೀರಾಮನ ಸ್ವರೂಪನಾಗಿರುತ್ತಾನೆ ಎಂಬ ನಿಜವಾದ ಭಾವನೆಯಿಂದ ಅವನಲ್ಲಿಯ ಸ್ವಾನಂದವನ್ನು ಪ್ರಕಟಗೊಳಿಸುವದಕ್ಕಾಗಿ ಹಗಲಿರುಳೂ ಪ್ರಯತ್ನ ಮಾಡುವದು ಕೊನೆಯ ಹಾಗೂ ಸರ್ವಶ್ರೇಷ್ಠ ಮೆಟ್ಟಲು ಆಗಿರುತ್ತದೆ. ಯಾವನು ಎಂದೂ ಪರನಿಂದೆಯನ್ನು ಮಾಡುವದಿಲ್ಲವೋ ಅವನು ನಿಜವಾಗಿಯೂ ದೊಡ್ಡ ಮನುಷ್ಯನಾಗಿರುತ್ತಾನೆ.

★ ಪ್ರದೀಪ ಮೂವತ್ತೆರಡು ★

ಉಚ್ಚಾರ ಶುಚಿತ್ವ

ವೇದಾಂತದಲ್ಲಿ ವಾಣಿಯನ್ನು ಕರ್ಮೇಂದ್ರಿಯ ಎನ್ನುತ್ತಾರೆ. ವಾಣಿಯ ಪರಿಣಾಮದಿಂದ ಜಗತ್ತಿನ ವ್ಯವಹಾರದಲ್ಲಿ ಹಾಗೂ ವ್ಯಕ್ತಿಯ ಜೀವನದಲ್ಲಿ ಎಂಥ ತಿರುವು ಮುರುವುಗಳಾಗುತ್ತವೆ ಎಂಬುದನ್ನು ನೋಡಿದರೆ ವಾಣಿಯ ಸಾಮರ್ಥ್ಯವು ತಿಳಿಯುತ್ತದೆ. ಸತ್ಪುರುಷರ ಹತ್ತಿರ ಅಧಿಕಾರ ಇರುವದಿಲ್ಲ, ಐಶ್ವರ್ಯ ಇರುವದಿಲ್ಲ, ಪಾಂಡಿತ್ಯ ಇರುವದಿಲ್ಲ. ಮನುಷ್ಯ ಬಲ ಇರುವದಿಲ್ಲ. ಆದರೆ ಕೇವಲ ಸ್ವಾನಂದದಿಂದ ಪ್ರನೀತವಾದ ಮಧುರ ವಾಣಿಯಿಂದ ಅವರು ಜಗತ್ತಿನ ಕಲ್ಯಾಣ ಮಾಡುತ್ತಾರೆ. ಪ್ರತಿಯೊಬ್ಬನ ಅಂತಃಕರಣದಲ್ಲಿ ಭಗವಂತನ ಅಧಿಷ್ಠಾನ ಇರುತ್ತದೆ. ನಾವು ಮಾತನಾಡಿದ ಶಬ್ದವು ಅಂತಃಕರಣದವರೆಗೂ ಹೋಗಿ ಮುಟ್ಟುತ್ತದೆ. ಆದ್ದರಿಂದ ಅಂತಃಕರಣಕ್ಕೆ ನೋವಾಗುವಂತಹ ಶಬ್ದಗಳನ್ನು ಉಚ್ಚಾರ ಮಾಡದೇ ಇರುವದು ವಾಣಿಯನ್ನು ಪವಿತ್ರಗೊಳಿಸುವ ರಾಜಮಾರ್ಗವಾಗಿರುತ್ತದೆ. ವಾಣಿಯ ಪವಿತ್ರತೆಯನ್ನು ಸಂಪಾದಿಸುವದು ಅತ್ಯಂತ ಶ್ರೇಷ್ಟ ಹಾಗೂ ತತ್ಕಾಲದಲ್ಲಿ ಫಲಕೊಡುವ ತಪಶ್ಚರ್ಯವಾಗಿರುತ್ತದೆ ಯಾವ ಸಾಧಕನಿಗೆ ಬೇಗನೇ ಸಾಧನೆಯು ಸಿದ್ಧಿಸಬೇಕೆಂಬ ಇಚ್ಛೆ ಇರುವದೋ

ಅವನು ವಾಣಿಯ ಮೇಲೆ ಬಂಧನ ಹಾಕಿಕೊಂಡು ಸಾಧನೆ ಮಾಡಬೇಕು. ನಿಂದೆ. ಕುತ್ಸಿತತನ. ತುಚ್ಛತೆ, ಅವಹೇಳನೆ, ಅಪಮಾನ. ಢೊಂಗಿತನ, ಕರ್ಕಶತೆ. ಕಠೋರತೆ ಇತ್ಯಾದಿ ದೋಷಗಳನ್ನು ದೂರ ಮಾಡಿಕೊಂಡು ಮಾತನಾಡಬೇಕು. ಅದೇ ರೀತಿ ಮೌನದ ಅಭ್ಯಾಸ ಮಾಡಬೇಕು. ಊಟ ಮಾಡುವಾಗ, ಮಲ ಮೂತ್ರ ವಿಸರ್ಜನೆ ಸಮಯದಲ್ಲಿ. ಸ್ನಾನ ಮಾಡುವಾಗ. ಜಪ ಮಾಡುವಾಗ. ಪೂಜೆ ಮಾಡುವಾಗ, ಶ್ರವಣ ಮಾಡುವಾಗ, ನಮನ ಮಾಡುವಾಗ ಹಾಗೂ ದರ್ಶನ ಮಾಡುವಾಗ ಮೌನವಾಗಿರಬೇಕು. ಯಾವಾಗಲೂ ಅವಶ್ಯಕತೆ ಇದ್ದಷ್ಟೇ ಮಾತನಾಡಬೇಕು. ವ್ಯರ್ಥ ಭಾಷಣ ಮಾಡಬಾರದು. ಸಂವಾದ ಮಾಡಬೇಕು, ಆದರೆ ವಾದ ಮಾಡಬಾರದು, ಶಬ್ದಗಳನ್ನು ಯಾವಾಗಲೂ ಸಾವಧಾನತೆಯಿಂದ ಉಪಯೋಗಿಸಬೇಕು. ಸತ್ಯ, ಸರಳ ಹಾಗೂ ನಮ್ರತೆಯಿಂದ ಮಾತನಾಡುವದು ವಾಣಿಯ ತಪಶ್ಚರ್ಯದ ಮೊದಲನೆ ಮೆಟ್ಟಲು ಆಗಿರುತ್ತದೆ. ಸತ್ಯ, ಸರಳ, ನಮ್ರ ಹಾಗೂ ಮಧುರ ಶಬ್ದಗಳಿಂದ ಮಾತನಾಡುವದು ವಾಣಿಯ ಎರಡನೆ ಮೆಟ್ಟಲು ಆಗಿರುತ್ತದೆ ಸತ್ಯ, ಸರಳ ಹಾಗೂ ಅತ್ಯಂತ ನಿಷ್ಕಪಟ ಭಾವದಿಂದ ಕೂಡಿದ ಮಧುರ ನಮ್ರ ಶಬ್ದಗಳಿಂದ ಮಾತನಾಡುವದು ಮೂರನೆ ಮೆಟ್ಟಲು ಆಗಿರುತ್ತದೆ ಹಾಗೂ ಸತ್ಯ, ಮಧುರ, ನಮ್ರ ಶಬ್ದಗಳನ್ನು

ಅತ್ಯಂತ ಕಳಕಳಿಯಿಂದ ಮಾತನಾಡುವದು
ಹಾಗೂ ಕೊನೆಯ ಮೆಟ್ಟಲು ಆಗಿರುತ್ತದೆ. ಅ
ಸತ್ಪುರುಷರೆ ಈ ರೀತಿಯಾಗಿ ಮಾತನಾ
ಸಮರ್ಥರಿರುತ್ತಾರೆ.

★ ಪ್ರದೀಪ ಮೂವತ್ತಮೂರು ★
ವಿಚಾರ ಶುಚಿತ್ವ

ದೇಹವು ಸ್ವಚ್ಛವಾಗಿರಬೇಕಾದರೆ ನಿತ್ಯ ಸ್
ಹೇಗೆ ಅವಶ್ಯವೋ ಅದೇ ರೀತಿ ಸಾಧನೆಗೆ
ಬರಬೇಕಾದರೆ ವಿಚಾರ ಶುಚಿತ್ವವು ಅವಶ್ಯವಿರು
ತರ್ಕ ಶುದ್ಧ ವಿಚಾರ ಹಾಗೂ ಶುದ್ಧ ಅಥವಾ
ವಿಚಾರ ಇವುಗಳಲ್ಲಿ ವ್ಯತ್ಯಾಸವಿರುತ್ತದೆ.
ಬುದ್ಧಿವಂತ ಮನುಷ್ಯನು ತರ್ಕಶುದ್ಧ ವಿಚಾರ
ತ್ತಾನೆ. ಆದರೆ ಅವನ ವಿಚಾರ ಪವಿತ್ರವಾಗಿ
ಎಂದೇನೂ ಇಲ್ಲ. ಶ್ರದ್ಧಾಯುಕ್ತ ಹಾಗೂ ನಿಷ್
ಮನುಷ್ಯನೇ ವಿಚಾರದಿಂದ ಪವಿತ್ರವಾಗಿರಲು ಶ

ಪವಿತ್ರ ವಿಚಾರಗಳಿಗೆ ಮುಖ್ಯವಾಗಿ ಐದು
ಗಳಿರುತ್ತವೆ, ೧) ಸ್ವಾನಂದ ವಿಷಯದಲ್ಲಿ
ಸಾಧನೆಯ ವಿಷಯದಲ್ಲಿ ಸಂಶಯ ಇಲ್ಲದೇ ಇರು
೨) ಅನುಕೂಲ ಪ್ರತಿಕೂಲ ವಿಷಯದಲ್ಲಿ ಶ್ರದ್ಧೆ
ಉಂಟಾಗದೇ ಇರುವದು. ೩) ಪ್ರತಿಯೊಬ್ಬರ
ಪಾದದ್ದನ್ನು ನೋಡಿ ಅದನ್ನು ಕಲಿಯುವ

ಇರುವದು. ೪) ಜೀವನದಲ್ಲಿಯ ಅನುಭವಗಳ ಅರ್ಥವನ್ನು ಲಕ್ಷದಲ್ಲಿಟ್ಟುಕೊಂಡು ನಡೆಯುವದು ಹಾಗೂ ೫) ಅಸಂಭಾವ್ಯ ಅಪೇಕ್ಷೆ ಮಾಡದಿರುವದು.

ಕ್ರಮಾಂಕ ಮೊದಲನೇಯದರ ಲಕ್ಷಣ :—
ಯಾವ ರೀತಿಯಾಗಿ ಶರೀರದಲ್ಲಿ ಕೊಬ್ಬು ಇರುವದು ಅವಶ್ಯವಿರುತ್ತದೆ ಆದರೆ ಅದು ಪ್ರಮಾಣಕ್ಕಿಂತ ಹೆಚ್ಚು ಬೆಳೆದರೆ ಶರೀರದಲ್ಲಿ ರೋಗವನ್ನುಂಟು ಮಾಡುತ್ತದೆಯೋ ಆದೇ ರೀತಿ ದೃಶ್ಯದಲ್ಲಿ ಸ್ವಾನಂದ ಪ್ರಾಪ್ತಿಯಾಗುವದೆಂಬ ಶ್ರದ್ಧೆಗೆ ಧಕ್ಕೆ ಉಂಟಾಗುವಷ್ಟು ಸಂಶಯ ವೃತ್ತಿಯು ಸಾಧಕನಲ್ಲಿರಬೇಕಾದದ್ದು ಅವಶ್ಯವಿರುತ್ತದೆ. ನಿರಂತರ ಪರಿವರ್ತನೆ ಹೊಂದುವ ಈ ದೃಶ್ಯದ ಆಕರ್ಷಣೆಯಲ್ಲಿ ಗಿರಗಿರನೇ ತಿರುಗುವ ದೇಹ ಬುದ್ಧಿಯು ಸಂಶಯದ ಧಕ್ಕೆಯಿಂದ ಅಲುಗಾಡಿದ್ದಾಗಿ ಸ್ವಾನಂದದ ಅದೃಶ್ಯ ಪ್ರಾಂತದಲ್ಲಿ ಶಾಂತವಾಗಿ ಸ್ಥಿರವಾಗದ ಹೊರತು ಪರಮಾರ್ಥ ಎಂದಿಗೂ ಸಾಧಿಸಲು ಶಕ್ಯವಿಲ್ಲ. ಆದರೆ ಅವಾಸ್ತವ ಸಂಶಯದಿಂದ ಬುದ್ಧಿಯ ಸ್ಥಿರತೆಗೂ ಕೂಡ ಧಕ್ಕೆ ಉಂಟಾಗುತ್ತದೆ. ಆದ್ದರಿಂದ ಸಂಶಯವನ್ನು ವ್ಯರ್ಥವಾಗಿ ಬಹಳ ಬೆಳೆಯಗೊಟ್ಟರೆ ಸಾಧಕನ ವೃತ್ತಿಯು ಎಲ್ಲಿಯೂ ಸ್ಥಿರವಾಗಲು ಶಕ್ಯವಿಲ್ಲ. ನಿರಂತರ ಸಂಶಯ ಹೊಂದುವದು ಬುದ್ಧಿಯ ದೊಡ್ಡ ರೋಗವಾಗಿರುತ್ತದೆ. ಸಂಶಯವು ಮರ್ಯಾದೆಯಲ್ಲಿರುವದಕ್ಕಾಗಿ ಸಂತರ ಸಹವಾಸದಲ್ಲಿರುವ ಅವಶ್ಯಕತೆ

ಇರುತ್ತದೆ.” ಈ ಜನ್ಮವನ್ನು ನಾವು ವಿಚಾರ ಮಾಡಿಯೇ ಸಾಧನೆಗಾಗಿ ಕೊಟ್ಟಿರುತ್ತೇವೆ. ಇದರಿಂದ ಅದು ವ್ಯರ್ಥವಾದರೂ ಅಡ್ಡಿ ಇಲ್ಲ” ಎಂಬ ನಿರಪೇಕ್ಷತೆಯಿಂದ ಸಾಧನೆ ಮಾಡಿದರೆ ಅದಕ್ಕೆ ಸಂಶಯದ ಕೀಡೆ ಹತ್ತುವದಿಲ್ಲ.

ಕ್ರಮಾಂಕ ಎರಡನೇಯದರ ಲಕ್ಷಣ :—

ನಾವು ಯಾವದೇ ಕರ್ಮವನ್ನು ಮಾಡಿದರೂ ಅದರ ದೃಶ್ಯಮಯ ಅಥವಾ ಪ್ರಾಪಂಚಿಕ ಫಲವನ್ನು ಅಪೇಕ್ಷಿಸುವ ಅಭ್ಯಾಸವು ನಮಗೆ ಆಗಿರುತ್ತದೆ. ಈ ಅಭ್ಯಾಸವನ್ನು ನಾವು ಪರಮಾರ್ಥದಲ್ಲಿಯೂ ಕೂಡ ನಡೆಸುತ್ತೇವೆ. ಸ್ವಾನಂದದ ಸಾಧನೆಯಲ್ಲಿ ಪ್ರವೇಶಿಸುವ ಬಹುಸಂಖ್ಯ ಜನರು ಪ್ರಪಂಚ ಸುಧಾರಿಸಬೇಕು ಅಥವಾ ಪ್ರಾಪಂಚಿಕ ಪ್ರಸಂಗಗಳಿಂದ ಸುಖರೂಪವಾಗಿ ಪಾರಾಗಬೇಕು ಎಂಬ ಫಲವನ್ನು ತಾವು ಮಾಡುವ ಸಾಧನೆಯಿಂದ ಅಪೇಕ್ಷಿಸುತ್ತಾರೆ. ಆದರೆ ಇದರಂಥ ಮೂರ್ಖತೆ ಮತ್ತಾವದೂ ಇಲ್ಲ. ಪ್ರಪಂಚದಲ್ಲಿ ನಡೆಯುವ ಘಟನೆಗಳು ನಿಯತಿಯ ನಿಯಮಕ್ಕನುಸಾರವಾಗಿ ನಡೆಯುತ್ತಿರುತ್ತವೆ. ಅವುಗಳಲ್ಲಿ ಒಮ್ಮೊಮ್ಮೆ ಮನಸ್ಸಿನಂತೆ ಹಾಗೂ ಒಮ್ಮೊಮ್ಮೆ ಮನಸ್ಸಿನ ವಿರುದ್ಧ ನಡೆಯುತ್ತವೆ. ಸಾಧಕನು ತನ್ನ ಸಾಧನ ನಿಷ್ಠೆಯನ್ನು ಅವುಗಳ ಮೇಲೆ ಅವಲಂಬಿಸಿಕೊಳ್ಳಬಾರದು [illegible] ಅಲ್ಲದೇ ಎಂಥ ಪ್ರಸಂಗ ಬಂದರೂ ನಮ್ಮ ಮನಸ್ಥಿತಿಯು ವ್ಯತ್ಯಾಸವಾಗಬಾರದು

ಂಬುವದಕ್ಕಾಗಿಯೇ ಸಾಧನೆ ಮಾಡಬೇಕೆಂಬುದನ್ನು ರ್ರಿಯಾಗಿ ತಿಳಿದುಕೊಂಡಿರಬೇಕು.

ಕ್ರಮಾಂಕ ಮೂರರ ಲಕ್ಷಣ :— ಆನಂದ ುಯ ಆತ್ಮಸ್ವರೂಪವು ಸರ್ವ ವ್ಯಕ್ತಿಗಳಲ್ಲಿ ಅಂತ ರ್ಯಾಮಿ ರೂಪದಿಂದ ವಿರಾಜಿಸುತ್ತದೆ. ಪ್ರತಿಯೊಬ್ಬ ುನುಷ್ಯನು ಸ್ವಾನಂದದ ಪ್ರಕಟರೂಪವಾಗಿರುತ್ತಾನೆ. ದ್ದರಿಂದ ನಿಜವಾದ ಸಾಧಕನು ಯಾವ ಮನುಷ್ಯನನ್ನೂ ೀನ ಭಾವನೆಯಿಂದ ನೋಡುವದಿಲ್ಲ. ನಾನು ದೊಡ್ಡ ುರುತ್ತೇನೆ ಎಂಬ ಭಾವವು ತಪ್ಪಿಯೂ ಕೂಡ ಅವನ ುನಸ್ಸಿನಲ್ಲಿ ಬರುವದಿಲ್ಲ. ಬಂಗಾರದ ಖಣಿಗಳಲ್ಲಿಂದ ಣ್ಣ ದೊಡ್ಡ ಕಲ್ಲುಗಳನ್ನು ಅಗೆದು ತೆಗೆಯುತ್ತಾರೆ. ್ರತಿಯೊಂದು ಕಲ್ಲಿನಲ್ಲಿಯೂ ಬಂಗಾರದ ಕಣಗಳು ಚ್ಚು ಕಡಿಮೆ ಪ್ರಮಾಣದಲ್ಲಿ ಇರುತ್ತವೆ. ಅವನ್ನೆಲ್ಲ ಂಡಿಸಿ ಉಳಿದ ಕಲ್ಲುಗಳನ್ನು ಒಗೆದುಬಿಡುತ್ತಾರೆ. ಅದ ಂತೆ ಸಾಧಕನಾದವನು ಪ್ರತಿಯೊಬ್ಬ ವ್ಯಕ್ತಿಯಿಂದ ್ವಾನಂದಾನುಕೂಲ ಗುಣಗಳನ್ನು ಮಾತ್ರ ತೆಗೆದು ಳ್ಳಬೇಕು. ಉಳಿದ್ದರ ಕಡೆಗೆ ದುರ್ಲಕ್ಷ್ಯ ಮಾಡ ೀಕು. ಅವಧೂತನು ಅನೇಕ ಗುರುಗಳನ್ನು ಮಾಡಿ ಂಡನು. ಅದರ ರಹಸ್ಯವು ಇದೇ ಆಗಿರುತ್ತದೆ. ರಡನೆಯುವರಿಂದ ಕಲಿಯುವ ರೂಢಿಯನ್ನು ಬೆಳೆಸಿ ಳ್ಳದ ಹೊರತು ಯಾರಿಗೂ ಪರಮಾರ್ಥ ಸಾಧಿಸಲು ಕ್ಯವಿಲ್ಲ.

ಕ್ರಮಾಂಕ ನಾಲ್ಕರ ಲಕ್ಷಣ:—ಒಬ್ಬ ವಿಜ್ಞಾನ ಪಂಡಿತನು ಒಂದು ಬಾಟ್ಲಿಯು ತುಂಬ ಸಮುದ್ರದ ನೀರು ತರುತ್ತಾನೆ. ಪ್ರಯೋಗ ಶಾಲೆಯಲ್ಲಿ ಅದರಮೇಲೆ ಸಂಸ್ಕಾರ ಮಾಡಿ ಅದರ ಗುಣಧರ್ಮಗಳನ್ನು ನಿಶ್ಚಿತ ಪಡಿಸುತ್ತಾನೆ. ಅದೇ ಗುಣಧರ್ಮಗಳು ಸಂಪೂರ್ಣ ಸಮುದ್ರದ ನೀರಿನಲ್ಲಿ ಕಂಡು ಬರುತ್ತವೆ. ಇದರಂತೆಯೇ ನಾವೂ ಕೂಡ ಆ ಸ್ವಾನಂದ ಸಮುದ್ರದ ಒಂದು ಚಿಕ್ಕ ಪಾತ್ರವಾಗಿರುತ್ತೇವೆ. ನಾವು ನಮ್ಮ ಅನುಭವಗಳ ಸೂಕ್ಷ್ಮ ಹಾಗೂ ನಿಷ್ಪಕ್ಷಪಾತವಾದ ನಿರೀಕ್ಷಣೆ ಮಾಡಿದರೆ ವಿಶ್ವ ಮನಸ್ಸಿನ ಗುಣಧರ್ಮಗಳು ತಾನಾಗಿಯೇ ತಿಳಿಯುತ್ತವೆ. ಸ್ವಾನಂದದಲ್ಲಿ ಮುಳುಗು ಹಾಕುವ ಯುಕ್ತಿಯು ಸಾಧಿಸುತ್ತದೆ. ಸಂತರು ಈ ಸನಾತನ ಮಾರ್ಗದಿಂದಲೇ ಹೋದರು ಹಾಗೂ ಧನ್ಯರಾದರು.

ಕ್ರಮಾಂಕ ಐದರ ಲಕ್ಷಣ:— ಸಾಧಕನಿಗೆ ಅನಾತ್ಮ ವಾಸನೆಯು ಇರುವದಿಲ್ಲ ಹಾಗೂ ಇರಬಾರದು. ಆದರೆ ಆತ್ಮವಾಸನೆ ಮಾತ್ರ ಅವನಿಗೆ ಅವಶ್ಯವಾಗಿರಬೇಕು. ಅದರ ಹೊರತಾಗಿ ಅವನ ಕೈಯಿಂದ ಸಾಧನೆ ಆಗಲಾರದು. ನಮಗೆ ಸ್ವಾನಂದದ ಸಾಕ್ಷಾತ್ಕಾರವಾಗಬೇಕೆಂಬ ತೀವ್ರ ತಳಮಳವನ್ನು ಜಾಗ್ರತವಾಗಿಡುವದು ಅವಶ್ಯವಿರುತ್ತದೆ. ಆದರೆ ಅದರ ಜೊತೆಗೆ ನಮ್ಮ ಕೈಯಿಂದ ಸಾಕಷ್ಟು ಪರೋಪಕಾರ ಜಗತ್ತಿನ ಕಲ್ಯಾಣವಾಗಬೇಕು, ಪರಮಾರ್ಥದ ಪ್ರಸಾರ

ವಾಗಬೇಕು, ಭಗವಂತನ ಮಹತ್ವ ಬೆಳೆಯಬೇಕು, ಈ ಅಥವಾ ಇಂಥ ಅಪೇಕ್ಷೆಗಳು ಸಾತ್ವಿಕ ಸಾಧಕನ ಮನಸ್ಸಿನಲ್ಲಿ ಬರುತ್ತವೆ. ಆದರೆ ಇವೆಲ್ಲವುಗಳು ಸಾಧನೆಗೆ ಅಷ್ಟು ಹಿತವಾದವುಗಳಲ್ಲವೆಂದು ತಿಳಿದುಕೊಳ್ಳಬೇಕು. ಆಯುಷ್ಯದ ಒಂದು ಕ್ಷಣವೂ ವ್ಯರ್ಥ ಹೋಗಗೊಡದೇ ನಮ್ಮ ಸಾಧನೆಯು ಅಂತಕಾಲದವರೆಗೆ ಅಖಂಡವಾಗಿ ನಡೆಯಬೇಕು ಎಂಬ ಒಂದೇ ಅಪೇಕ್ಷೆ ಉಳ್ಳವನಾಗಿರುವದು ಸಾಧಕನಿಗೆ ಉಚಿತವಾಗಿರುತ್ತದೆ. ಪರೋಪಕಾರ, ಜಗತ್ತಿನ ಕಲ್ಯಾಣ ಮುಂತಾದ ಕಾರ್ಯಗಳು ಯಾರೂ ಮಾಡಬೇಕೆಂದರೆ ಆಗುವದಿಲ್ಲ. ಕೇವಲ ಈಶ್ವರನ ಇಚ್ಛೆಯಿಂದ ಅಥವಾ ಸದ್ಗುರುಗಳ ಆಜ್ಞೆಯಿಂದಲೇ ಅವು ಆಗುತ್ತವೆ. ಆದ್ದರಿಂದ ಸಾಧನೆಯಲ್ಲಿ ಮಗ್ನನಾದ ಮನುಷ್ಯನು ದೇಹದಿಂದಾಗುವ ಸತ್ಕರ್ಮಗಳ ಕಡೆಗೆ ಸಾಕ್ಷಿತ್ವದಿಂದ ನೋಡುತ್ತಾನೆ. ಅಹಂಭಾವದಿಂದ ಅವುಗಳ ಹೊಣೆಗಾರಿಕೆ ಅಥವಾ ಅವುಗಳ ಕರ್ತೃತ್ವ ಭಾವವನ್ನು ತನ್ನ ಸ್ವತಃದ ಕಡೆಗೆ ಕಿಂಚಿತ್ತು ಆಗಗೊಡುವದಿಲ್ಲ.

★ ಪ್ರದೀಪ ಮೂವತ್ನಾಲ್ಕು ★

ವಿಕಾರ ಶುಚಿತ್ವ

ದೇಹದಲ್ಲಿ ದೃಶ್ಯ ಶಕ್ತಿಯು ವಾಸಮಾಡಿರುತ್ತದೆ ಹಾಗೂ ಮನಸ್ಸಿನಲ್ಲಿ ಅದೃಶ್ಯ ಅಥವಾ ಸೂಕ್ಷ್ಮ ಶಕ್ತಿಯು

ವಾಸಮಾಡಿರುತ್ತದೆ. ದೇಹವನ್ನು ನಿರೋಗಿಯಾಗಿಡು
ವದರಿಂದ ಶಾರೀರಿಕ ಶಕ್ತಿಯು ಬೆಳೆಯುತ್ತದೆ ಹಾಗೂ
ಮನಸ್ಸನ್ನು ನಿರೋಗಿಯಾಗಿಡುವದರಿಂದ ಮನೋಬಲ
ಬೆಳೆಯುತ್ತದೆ. ರೋಗದಿಂದ ದೇಹವು ಕ್ಷೀಣವಾಗು
ತ್ತದೆ. ಅದೇ ರೀತಿ ವಿಕಾರಗಳಿಂದ ಮನಸ್ಸು ನಿಸ್ಸತ್ವ
ವಾಗುತ್ತದೆ. ಶಕ್ತಿಶಾಲಿ ಮನಸ್ಸಿಗೆ ಸ್ವಾನಂದದ ಅನು
ಸಂಧಾನವನ್ನು ಸಾಧಿಸುವದು ಶಕ್ಯವಾಗುತ್ತದೆ. ಅದ್ದ
ರಿಂದ ಮನಸ್ಸನ್ನು ನಿರ್ಬಲ ಗೊಳಿಸುವ ವಿಕಾರಗಳನ್ನು
ಒಂದೊಂದಾಗಿ ಸ್ವಾಧೀನಪಡಿಸಿಕೊಳ್ಳಬೇಕು. ವಿಕಾರ
ಗಳನ್ನು ಸಂಪೂರ್ಣವಾಗಿ ನಾಶಗೊಳಿಸುವದು ಶಕ್ಯವಿಲ್ಲ.
ಆದ್ದರಿಂದ ಹಾಗೆ ಮಾಡುವ ಅಭ್ಯಾಸ ಮಾಡುವದೂ
ಉಚಿತವಲ್ಲ. ವಿಕಾರಗಳನ್ನು ನಾವು ಸಾವಧಾನತೆ
ಯಿಂದ ಉಪಯೋಗಿಸಬೇಕು. ವಿಕಾರಗಳು ನಮ್ಮನ್ನು
ತಮಗೆ ಬೇಕಾದಂತೆ ಉಪಯೋಗಿಸಬಾರದು. ಪ್ರಪಂಚ
ದಲ್ಲಿರುವ ಸಾಧಕನಿಗೆ ಸಂಘರ್ಷದಲ್ಲಿಂದಲೇ ಹೋಗ
ಬೇಕಾಗುತ್ತದೆ ಹಾಗೂ ಸಂಘರ್ಷವೆಂದೊಡನೆ ವಿಕಾರ
ಗಳ ಕ್ಷೇತ್ರದಲ್ಲಿ ಅವನಿಗೆ ಇಳಿಯಲೇ ಬೇಕಾಗುತ್ತದೆ.
ಹೀಗಿದ್ದರೂ ಪ್ರಪಂಚದಲ್ಲಿಯ ಯಾವ ಪ್ರಸಂಗದಲ್ಲಿ
ಎಷ್ಟು ವಿಕಾರಗಳು ಅವಶ್ಯವೋ ಅಷ್ಟೇ ಉಪಯೋಗಿ
ಸುವ ಅಭ್ಯಾಸವನ್ನು ಮಾಡಬೇಕು. ಉದಾಹರಣೆ
ಗಾಗಿ—ವಿವಾಹಿತ ಸಾಧಕನು ಸಾಧನೆಯ ಮರ್ಯಾದೆ
ಯನ್ನು ಕಾಯ್ದುಕೊಂಡು ಕಾಮಸೇವನೆ ಮಾಡಬೇಕು.

ವ್ಯವಹಾರವು ಸರಿಯಾಗಿ ನಡೆಯುವಷ್ಟರ ಮಟ್ಟಿಗೆ ಸಿಟ್ಟಿನ ಭಾವ ವ್ಯಕ್ತಪಡಿಸಬೇಕು. ಪ್ರಪಂಚಕ್ಕೆ ಬೇಕಾಗುವಷ್ಟೇ ಲೋಭವಿರಬೇಕು. ದೇವರ, ಧರ್ಮದ, ಗುರುಗಳ, ಸಂತರ, ದೇಶದ ಅಭಿಮಾನ ಹೊಂದಿರಬೇಕು ಹಾಗೂ ಸಮಾಜಕ್ಕೆ ಆವಶ್ಯಕ ಹಾಗೂ ಮಾನ್ಯವಾಗುವಷ್ಟೆ ಲೌಕಿಕ ಆಡಂಬರ ಮಾಡಬೇಕು. ಆದರೆ ಯಾರ ವಿಷಯದಲ್ಲಿಯೂ ದ್ವೇಷ ಮತ್ಸರಗಳು ಇರಬಾರದು.

ವಿಕಾರಗಳು ಪರಮಾರ್ಥಕ್ಕೆ ಮಾರಕವಾಗಿರುತ್ತವೆ. ನಮ್ಮ ಮೇಲೆ ಸ್ವಾಮಿತ್ವ ಸಾಧಿಸಿ ನಮ್ಮ ಸಾಧನೆಯನ್ನು ಸುಟ್ಟು ಹಾಕುವದರಲ್ಲಿ ಅವುಗಳಿಗೆ ಅತ್ಯಂತ ಆನಂದವಾಗುತ್ತದೆ. ಈ ವಿಷಯದಲ್ಲಿ ಅತ್ಯಂತ ದಕ್ಷತೆಯಿಂದ ಸಾಧಕನು ಆ ವಿಕಾರಗಳಿಂದ ಸಾವಧಾನನಾಗಿರಬೇಕು. ಸಾಧ್ಯವಿದ್ದಷ್ಟು ಯಾರ ಮೇಲೆಯೂ ಸಿಟ್ಟಿಗೇಳಬಾರದು. ಯಾರದೂ ದ್ವೇಷ ಮತ್ಸರ ಮಾಡಬಾರದು. ದುಡ್ಡು, ವಿದ್ಯೆ, ಅಧಿಕಾರ, ಸೌಂದರ್ಯ ಮುಂತಾದವುಗಳ ಬಗ್ಗೆ ಕಿಂಚಿತ್ತು ಅಭಿಮಾನ ಹೊಂದದೇ ಇರಬೇಕು ಎಂಬ ನಿಶ್ಚಯ ಮಾಡಿ ಅದರಂತೆ ನಡೆಯಬೇಕು. ಇದು ಸಾಧಿಸಿತೆಂದರೆ ವಿಕಾರಗಳು ಕ್ರಮವಾಗಿ ಕ್ಷೀಣವಾಗುತ್ತವೆ. ಅವುಗಳ ಮೇಲೆ ನಮ್ಮ ಅಧಿಕಾರ ಉಂಟಾಗುತ್ತದೆ ಹಾಗೂ ಮನಸ್ಸು ಬಲಶಾಲಿಯಾಗುತ್ತದೆ. ವಿಕಾರಗಳ ಮೇಲೆ ಸ್ವಾಮಿತ್ವ ಸಾಧಿಸುವ

ಹೊರತು ಯಾರ ಮನಸ್ಸೂ ಪವಿತ್ರ, ಶುದ್ಧ ಹಾಗೂ ಬಲಶಾಲಿ ಆಗಲಾರದು.

★ ಪ್ರದೀಪ ಮೂರನೆಯದು ★

ಸಾವಧಾನತೆ

ಈಗ ಸಾಧನೆಗೆ ಪ್ರಾರಂಭಿಸಬೇಕು. ಪರಮಾರ್ಥ ಸಾಧನೆ ಎಂದರೆ ಸ್ವಸ್ವರೂಪ ದರ್ಶನದ ಅಭ್ಯಾಸ ವಾಗಿರುತ್ತದೆ. ಇದು ಅಂತರಂಗದ ಆಟವಾಗಿರುತ್ತದೆ. ದೃಶ್ಯದಲ್ಲಿ ರಮಿಸುವ ನಮ್ಮ ಮನಸ್ಸನ್ನು "ಸ್ವ" ದಲ್ಲಿಯೇ ರಮಮಾಣವಾಗುವದಕ್ಕೆ ಕಲಿಸಬೇಕಾಗು ತ್ತದೆ. ಇದನ್ನು ಸಾಧಿಸುವದಕ್ಕಾಗಿ ಸಾವಧಾನತೆ ಹಾಗೂ ಸಂತೋಷಗಳು ಉಪಯೋಗವಾಗುತ್ತವೆ. ದೈನಂದಿನ ಜೀವನದಲ್ಲಿ ಪ್ರತಿಯೊಂದು ಇಂದ್ರಿಯ ಗಳನ್ನು ಉಪಯೋಗಿಸಬೇಕಾಗುತ್ತದೆ. ಈ ರೀತಿ ಉಪಯೋಗ ಮಾಡುತ್ತಿರುವಾಗ ಸಾವಧಾನವಾಗಿದ್ದು ಇಂದ್ರಿಯಗಳನ್ನು ನಿಯಂತ್ರಣಗೊಳಿಸದ ಹೊರತು ನಮ್ಮ ಮನಸ್ಸನ್ನು ನಮಗರಿವಿಲ್ಲದಂತೆ ದೃಶ್ಯದಿಂದ ಹಿಂದೆ ತಿರುಗಿಸಲು ಬರುವದಿಲ್ಲ. ಇದಕ್ಕಾಗಿ ಅತ್ಯಂತ ಸಾವಧಾನತೆ ಬೇಕು. ನಾವು ಸ್ವಲ್ಪಾದರೂ ಅಸಾವ ಧಾನರಾದೆವೆಂದರೆ ನಮ್ಮ ಮನಸ್ಸು ನಮಗರಿಯ ದಂತೆಯೇ ಹೊರಗೆ ಹೋಗುತ್ತದೆ ಹಾಗೂ ಇಂದ್ರಿಯ ಸಹಿತ ದೃಶ್ಯದಲ್ಲಿ ಮುಳುಗಿ ಬಿಡುತ್ತದೆ. ಸ್ವಾನಂದಪ್ರ

ನಮ್ಮ ಧ್ಯೇಯವಾಗಿರುತ್ತದೆ. ಆದಕ್ಕಾಗಿಯೇ ನಾವು ಜಾಗೃತರಾಗಿರುತ್ತೇವೆ ಎಂಬ ಸ್ಮರಣೆಯನ್ನು ಪ್ರಜ್ವಲಿತ ವಾಗಿಟ್ಟುಕೊಂಡರೆ ಮಾತ್ರ ಮನಸ್ಸು ಹಾಗೂ ಇಂದ್ರಿಯಗಳನ್ನು ಅಲಿಪ್ತವಾಗಿಟ್ಟುಕೊಳ್ಳಲು ಬರುತ್ತದೆ.

ಇದನ್ನೇ ಭಕ್ತಿಯ ಭಾಷೆಯಲ್ಲಿ ಹೇಳುವದಾದರೆ ಭಗವಂತನು ನನ್ನ ಧ್ಯೇಯವಿರುತ್ತಾನೆ ನಾನು ಅವನ ವನಾಗುವದಕ್ಕಾಗಿಯೇ ಬದುಕಿರುತ್ತೇನೆ. ಆದ್ದರಿಂದ ನಾನು ಅವನ ಸ್ಮರಣೆಯನ್ನು ಒಂದು ಕ್ಷಣವೂ ಮರೆಯುವದು ಉಚಿತವಲ್ಲ. ಅವನ ನೆನಪು ಯಾವಾಗಲೂ ಇರಬೇಕೆಂದು ನಾನು ಅವನ ನಾಮ ತೆಗೆದುಕೊಳ್ಳುತ್ತೇನೆ. ಅವನ ನಾಮದೊಂದಿಗೆ ಅಂದರೆ ಅವನನ್ನು ಮರೆಯದೇ ಪ್ರಪಂಚ ಮಾಡುವದು ನನಗೆ ಯೋಗ್ಯ ಹಾಗೂ ಅವಶ್ಯ ವಾಗಿರುತ್ತದೆ ಎಂಬ ಅಖಂಡ ಅರಿವನ್ನು ಇಟ್ಟುಕೊಳ್ಳಬೇಕು.

ಪ್ರಾಪಂಚಿಕ ಜೀವನದಲ್ಲಿ ಕೆಲವು ಅನುಕೂಲ ಹಾಗೂ ಕೆಲವು ಪ್ರತಿಕೂಲತೆಗಳು ಇದ್ದೇ ಇರುತ್ತವೆ. ಪರಿಸ್ಥಿತಿಯನ್ನು ನಮಗೆ ಬೇಕಾದಂತೆ ಪರಿವರ್ತನಗೊಳಿಸಿ ಆಮೇಲೆ ಪರಮಾರ್ಥ ಮಾಡಬೇಕೆನ್ನುವವರ ಸಾಧನೆಯು ಸಿದ್ಧಿಯನ್ನು ಹೊಂದುವದು ಬಹಳ ಕಠಿಣ. ಇಷ್ಟೇ ಅಲ್ಲದೆ ಅರಣ್ಯದಲ್ಲಿಯ ಶಾಂತತೆಯು, ಸ್ವಸ್ಥತೆಯು

ಹಾಗೂ ಏಕಾಕಿತನದ ಸಾಧನೆಗಿಂತಲೂ ಸಂಸಾರದಲ್ಲಿಯ ಒದರಾಟ ಚೀರಾಟ, ಗಡಬಡ, ಧಡಪಡ ಹಾಗೂ ಧಕ್ಕಾಮುಕ್ಕಿಯಲ್ಲಿ ಆಗುವ ಸಾಧನೆಯು ಹೆಚ್ಚು ನಾಟ್ಯಮಯ, ಬಹುರಂಗಿ, ಲೋಕೋಪಯೋಗಿ ಹಾಗೂ ಒರೆಗಲ್ಲಿಗೆ ಹಚ್ಚಿ ನೋಡುವಂತಹದಾಗಿರುತ್ತದೆ.

ಯಾವ ಪ್ರಮಾಣದಲ್ಲಿ ಸ್ವಾನಂದದ ಧ್ಯೇಯವು ಅಂತರಂಗದಲ್ಲಿ ಸ್ಥಿರವಾಗುತ್ತ ಹೋಗುತ್ತದೆಯೋ ಆ ಪ್ರಮಾಣದಲ್ಲಿ ಸಾವಧಾನತೆಯು ಅಂಗಭೂತವಾಗುತ್ತ ಹೋಗುತ್ತದೆ. ಸಹಜವಾಗಿ ಹಾಗೂ ಅಖಂಡವಾಗಿ ಸಾವಧಾನವಾಗಿರುವ ಮನುಷ್ಯನಿಂದಲೇ ಪ್ರಪಂಚದಲ್ಲಿ ಸಮಾಧಾನಕಾರಕ ಸಾಧನೆ ಆಗಲು ಶಕ್ಯ. ಆದರೆ ಮನಸ್ಸಿಗೆ ಹಾಗೂ ಇಂದ್ರಿಯಗಳಿಗೆ ದೃಶ್ಯಕ್ಕೆ ಅಂಟಿಕೊಳ್ಳುವ ಅಭ್ಯಾಸವು ಎಷ್ಟು ಧೃಡವಾಗಿದೆ ಎಂದರೆ ದೃಶ್ಯದ ಸಂಬಂಧವು ತಪ್ಪಿತೆಂದರೆ ಅದು ಚಟಪಡಿಸತೊಡಗುತ್ತದೆ. ಆದ್ದರಿಂದ ಪ್ರಪಂಚದಲ್ಲಿ ನಾವು ಏನೇನು ಮಾಡುತ್ತೇವೆಯೋ ಅದನ್ನೆಲ್ಲ ಭಗವಂತನಿಗಾಗಿಯೇ ಮಾಡುತ್ತೇವೆ ಎಂಬ ಭಾವನೆಯನ್ನು ಜಾಗೃತವಾಗಿಡುವ ಅಭ್ಯಾಸವನ್ನು ಸಾಧಕನು ಆರಂಭ ಮಾಡಬೇಕು. ಕೈಯಿಂದ ಪ್ರಪಂಚದ ಕಾರ್ಯ ಮಾಡುತ್ತ ಮುಖದಲ್ಲಿ ಭಗವಂತನ ನಾಮ ತೆಗೆದುಕೊಳ್ಳುವವರಿಗೇ ಅಲಿಪ್ತತೆಯಿಂದ ಕರ್ಮ ಮಾಡುವ ಯುಕ್ತಿಯು ಸಾಧಿಸುತ್ತದೆ.

★ ಪ್ರದೀಪ ಮೂವತ್ತಾರು ★

ಸಂತೋಷ

ಇಂದ್ರಿಯಗಳನ್ನು ವಶಮಾಡಿಕೊಂಡು ಮನಸ್ಸನ್ನು ದೃಶ್ಯದಿಂದ ತಿರುಗಿಸಿ ತರುವದರಲ್ಲಿಯೇ ನಿಜವಾದ ಶ್ರಮವಿರುತ್ತದೆ. ಇದನ್ನು ಸಾಧಿಸುವದಕ್ಕಾಗಿ ಎಷ್ಟು ಸಮಯ ಬೇಕಾಗುತ್ತದೆ ಎಂಬುದನ್ನು ಹೇಳಲಿಕ್ಕಾಗುವದಿಲ್ಲ. ಈ ಮಾರ್ಗ ಕ್ರಮಣವು ಕೆಲವರದು ಒಂದು ವರುಷದಲ್ಲಿಯೇ ಮುಗಿಯಬಹುದು ಹಾಗೂ ಕೆಲವರದು ಆಯುಷ್ಯದ ತುಂಬ ನಡೆಯುತ್ತದೆ. ಆದ್ದರಿಂದ ಸಾಧಕನು ಅವಸರ ಪಡಬಾರದು. ನಿರಾಶನಾಗಬಾರದು, ತನ್ನ ಜಿಗುಟುತನವನ್ನು ಬಿಡಬಾರದು ಹಿಡಿದುಬಿಟ್ಟು ಮಾಡಬಾರದು, ಹಾಗೂ ಸಮಯದ ಅನುಕೂಲತೆ ಬಂದಿತೆಂದರೆ ನಿಶ್ಚಿತವಾಗಿ ಯಶ ಬರುವದೆಂಬ ವಿಶ್ವಾಸ ತಾಳಬೇಕು.

ಸಾವಧಾನತೆಯು ಸಾಧನೆಯ ಬೆನ್ನೆಲಬಾದರೆ ಸಂತೋಷವು ಸಾಧನೆಯ ಮೆದುಳು ಆಗಿರುತ್ತದೆ. ಇದರಿಂದ ಸಾಧಕನ ಜೀವನದಲ್ಲಿ ಸಂತೋಷಕ್ಕೆ ಎಂಥ ಶ್ರೇಷ್ಠ ಸ್ಥಾನವಿದೆ ಎಂಬುದನ್ನು ನಾವೇ ತಿಳಿದುಕೊಳ್ಳಬೇಕು. ಒಂದು ಸ್ವಾನಂದ ಚಿಂತನೆಯು ಹೊರತಾಗಿ ಜಗತ್ತಿನಲ್ಲಿಯ ಸಮಸ್ತ ವಸ್ತುಗಳ ವಿಷಯದಲ್ಲಿ ಸಾಧಕನು ಸಂತೋಷದ ದೃಷ್ಟಿಕೋನವನ್ನು ಆತ್ಮಸಾತ್

ಮಾಡಿಕೊಂಡರೆ ಮಾತ್ರ ಸಾಧನೆಯು ಗಟ್ಟಿಯಾಗುತ್ತದೆ. ಭಕ್ತಿಯ ಭಾಷೆಯಲ್ಲಿ ಹೇಳುವದಾದರೆ ಸಾಧಕನು ಭಗವಂತನ ಅನುಸಂಧಾನದ ವಿಷಯದಲ್ಲಿ ಎಂದೂ ತೃಪ್ತವಾಗಬಾರದು. "ಇನ್ನು ಸಾಕು" ಎಂದು ಅನ್ನಬಾರದು ಆದರೆ ಜೀವನದಲ್ಲಿ ನಮ್ಮ ಪಾಲಿಗೆ ಬಂದ ವಿಷಯಗಳ ಬಗ್ಗೆ ಮಾತ್ರ ಎಂದೂ ಅಸಂತುಷ್ಟವಾಗಬಾರದು. ಇಂಥದೊಂದು ಬೇಕು ಅಥವಾ ಇನ್ನಷ್ಟು ಬೇಕು ಎಂದು ಅನ್ನಬಾರದು. ಭಗವಂತನು ಸರ್ವಜ್ಞನಿರುತ್ತಾನೆ. ಹಾಗೂ ನಾನು ಅವನವನಿರುತ್ತೇನೆ. ಆದ್ದರಿಂದ ನನಗೆ ಯೋಗ್ಯವಾದದ್ದನ್ನೇ ಕೊಡುತ್ತಾನೆ. ಆದ್ದರಿಂದ ಅವನು ನನ್ನನ್ನು ಯಾವ ಪರಿಸ್ಥಿತಿಯಲ್ಲಿ ಇಟ್ಟಿರುವನೋ ಅದನ್ನು ಅವನೇ ಕೊಟ್ಟಿರುವನು ಎಂದು ಮನಸ್ಸಿನ ವಿಶ್ವಾಸದಿಂದ ಸಂತೋಷವನ್ನು ಕಾಯ್ದುಕೊಳ್ಳುವದು ಸಾಧಕನ ಕೆಲಸವಾಗಿರುತ್ತದೆ. ನಾಮಸ್ಮರಣೆ ಅಥವಾ ಭಗವಂತನ ಅನುಸಂಧಾನ ಹಾಗೂ ಇದ್ದ ಪರಿಸ್ಥಿತಿಯಲ್ಲಿ ಸಮಾಧಾನ ಎಂಬ ಎರಡು ಗಾಲಿಗಳ ಮೇಲೆ ಸಾಧಕನ ರಥವು ವ್ಯವಸ್ಥಿತವಾಗಿ ನಡೆಯುತ್ತದೆ. ಇದರಲ್ಲಿ ಯಾವದೇ ಗಾಲಿ ಮುರಿದರೂ ಸಾಧನೆಯು ಸಮತೋಲತೆಯು ತಪ್ಪುತ್ತದೆ ಎಂಬುದನ್ನು ಮರೆಯಬಾರದು.

ಇದೂ ಅಲ್ಲದೇ ಇನ್ನೊಂದು ವಿಷಯವನ್ನು ಲಕ್ಷ್ಯದಲ್ಲಿಡುವದೇನೆಂದರೆ ಆನಂದಮಯ ಈಶ್ವರನು

ಎಲ್ಲ ಜೀವಿಗಳನ್ನು ತನ್ನ ಕಡೆಗೆ ಅಂದರೆ ಸ್ವಾನಂದದ ಕಡೆಗೆ ಎಳೆಯುತ್ತಿರುತ್ತಾನೆ ಎಲ್ಲ ಜೀವಿಗಳು ಉತ್ಕ್ರಾಂತವಾಗುತ್ತ ಕೊನೆಗೆ ಸ್ವಾನಂದದಲ್ಲಿಯೇ ಲೀನವಾಗಬೇಕೆಂಬ ಮೂಲ ಉದ್ದೇಶದಿಂದಲೇ ಜಗತ್ತಿನ ಎಲ್ಲ ಘಟನೆಗಳು ನಡೆಯುತ್ತವೆ. ಆದ್ದರಿಂದ ನಮ್ಮ ಜೀವನದಲ್ಲಿ ನಡೆಯುವ ಪ್ರತಿಯೊಂದು ಘಟನೆ ನಮ್ಮನ್ನು ಸ್ವಾನಂದದ ಕಡೆಗೇ ನೂಕುತ್ತದೆ. ಆದ್ದರಿಂದ ಏನೇನು ಆಗುತ್ತದೆಯೋ ಅವೆಲ್ಲ ನಮ್ಮ ಕಲ್ಯಾಣದ್ದೇ ಇರುತ್ತದೆ. ಮನುಷ್ಯನ ದೃಷ್ಟಿಯಿಂದ ಅಶುಭ ಅಥವಾ ಅನಿಷ್ಟ ಎನ್ನಿಸುವ ಘಟನೆಗಳು ಸ್ವಾನಂದದ ದೃಷ್ಟಿಯಿಂದ ಶುಭ ಹಾಗೂ ಇಷ್ಟವೇ ಆಗಿರುತ್ತವೆ. ಈ ದೃಷ್ಟಿಕೋನವು ಮನಸ್ಸಿನಲ್ಲಿ ಸ್ಥಿರವಾಯಿತೆಂದರೆ ಸಾಧನೆಯ ಮೊದಲನೇ ಮೆಟ್ಟಲು ದಾಟಿದೆವೆಂದು ನಿಶ್ಚಿತವಾಗಿ ತಿಳಿದುಕೊಳ್ಳಬೇಕು. ನಮ್ಮ ಜೀವನದಲ್ಲಿ ನಡೆಯುವ ಘಟನೆಗಳು ಈಶ್ವರನ ಇಚ್ಛೆಯಿಂದಲೇ ನಡೆಯುತ್ತವೆ. ಇಷ್ಟೇ ಅಲ್ಲದೇ ಅವೆಲ್ಲ ನಮ್ಮನ್ನು ಸ್ವಾನಂದದ ಕಡೆಗೆ ಎಳೆಯುತ್ತವೆ ಎಂದು ತಿಳಿದು ಅವುಗಳ ವಿಷಯದಲ್ಲಿ ಸಂತೋಷವುಳ್ಳವರಾಗಬೇಕು. ಈ ರೀತಿ ಸಂತೋಷಪಡುವ ಮನುಷ್ಯನನ್ನು ನೋಡಿದರೆ ಸತ್ಪುರುಷರಿಗೆ ಪರಮಾನಂದವಾಗುತ್ತದೆ.

★ ಪ್ರದೀಪ ಮೂವತ್ತೇಳು ★

"ಅನುಸಂಧಾನದ ಕಲೆ"

ಜಗತ್ತಿನಲ್ಲಿ ವ್ಯಾಪಿಸಿದ ಅಗಣಿತ ದೃಶ್ಯ ವಸ್ತುಗಳ ವಿಷಯದಲ್ಲಿ ಸಂತೋಷವೃತ್ತಿ ಹೊಂದಿದ್ದಾದರೆ ಮನಸ್ಸಿನ ಆಕಡೆಗೆ ಹರಿಯುವ ಪ್ರವೃತ್ತಿಯು ತಾನಾಗಿಯೇ ಶಿಥಿಲವಾಗುತ್ತದೆ. ಅದೇರೀತಿ ದೇಹಸುಖದ ಹವ್ಯಾಸವೂ ಕೂಡ ಕಡಿಮೆಯಾಗುತ್ತದೆ. ಸಾಧನೆಯ ಮೊದಲನೇ ಮೆಟ್ಟಲಿನ ಮೇಲೆ ಸಾಧಕನು ಹೊರಗಿನ ಜಗತ್ತಿನಲ್ಲಿ ಭಗವಂತನ ಇಚ್ಛೆಯ ಪ್ರಭಾವವನ್ನು ಗುರುತಿಸುತ್ತಾನೆ ಹಾಗೂ ಸಂತೋಷದ ವೃತ್ತಿಯಿಂದ ಮನಸ್ಸಿನ ಪರಿದಾಟವನ್ನು ತಡೆಯುತ್ತಾನೆ. ನಾನು ಹಾಗೂ ಜಗತ್ತು ಅಥವಾ ಜ್ಞಾತಾ ಹಾಗೂ ಜ್ಞೇಯ ಇವುಗಳಲ್ಲಿ ದ್ವೈತದ ಕ್ಷೇತ್ರವನ್ನು ಹೊರಗಿನಿಂದ ಒಳಗೆ ತರುವದು ಅಂದರೆ ಜಡದಿಂದ ಸೂಕ್ಷ್ಮದಲ್ಲಿ ತೆಗೆದುಕೊಂಡು ಹೋಗುವದಾಗಿರುತ್ತದೆ. ಸ್ಥೂಲ ದೃಶ್ಯದಲ್ಲಿ ಭಗವಂತನ ಸುಂದರ ಪ್ರತಿಮೆಯನ್ನು ನಿರ್ಮಿಸಿ ದೇಹವನ್ನು ಅದರ ಸೇವೆಯಲ್ಲಿ ತೊಡಗಿಸುತ್ತಾನೆ. ಅದೇರೀತಿ ಒಳಗೂ ಕೂಡ ಅದರ ಮನೋಮಯ ಪ್ರತಿಮೆಯನ್ನು ಹೃದಯದಲ್ಲಿ ಸ್ಥಾಪಿಸಿ ಸೂಕ್ಷ್ಮ ದೃಶ್ಯದಲ್ಲಿ ಭಗವಂತನ ಸೇವೆ ಮಾಡುವದಿರುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿದ ದಹರ ವಿದ್ಯೆಯು ಇದೇ ಆಗಿರುತ್ತದೆ. ಈ

ವಿದ್ಯೆಯನ್ನು ಕಲಿಯದ ಹೊರತ ಯಾರೂ ಸ್ವಾನಂದದ ವರೆಗೆ ತಲುಪಲು ಶಕ್ಯವೇ ಇಲ್ಲ.

ನಮ್ಮ ಅಂತರಂಗದಲ್ಲಿಯ ಅಂದರೆ ಹೃದಯಾಕಾಶದಲ್ಲಿ ಸೂಕ್ಷ್ಮ ದೃಶ್ಯದ ಅಗಾಧ ಉಪಾಧಿ ಇರುತ್ತವೆ. ಒಳಗಿನ ಎಲ್ಲ ವಾಸನೆಗಳು ಪೂರ್ವ ಸಂಸ್ಕಾರ, ಪೂರ್ವ ಸ್ಮೃತಿ, ವಿಕಾರ, ವಿಚಾರ, ಕಲ್ಪನಾ, ಭಾವನಾ, ಸಂಕಲ್ಪ, ಸ್ವಪ್ನ, ಪೂರ್ವಸಂಚಿತ ಮುಂತಾದವುಗಳೆಲ್ಲ ಈ ಹೃದಯಾಕಾಶದಲ್ಲಿ ತುಂಬಿಕೊಂಡಿರುತ್ತವೆ. ಈ ಹೃದಯಾಕಾಶವೆಂದರೆ ರಕ್ತಮಾಂಸಗಳ ಸ್ಥೂಲ ಹೃದಯವಲ್ಲ. ನಾಭಿಯ ಮೇಲಿನ ಭಾಗದಲ್ಲಿ ಒಂದು ಗೇಣು ಅಂತರದಲ್ಲಿ ಸ್ವಲ್ಪ ಬಲಗಡೆಗೆ ಸೂಕ್ಷ್ಮದೇಹದಲ್ಲಿ ಹೃದಯಾಕಾಶ ವಿರುತ್ತದೆ. ವಾಸನೆಯ ಮೂಲಸ್ಥಾನವು ನಾಭಿಯ ಹತ್ತಿರವಿರುತ್ತದೆ ಅಲ್ಲಿಂದ “ಅಹಂ” ದ ಸ್ಫುರಣೆಯಾಗಿ ವೃತ್ತಿರೂಪದಿಂದ ಅದು ಹೃದಯಾಕಾಶದಲ್ಲಿ ಪ್ರಗಟವಾಗುತ್ತದೆ. ಅಲ್ಲಿ ಭಗವಂತನನ್ನು ಸ್ಥಾಪಿಸಿ ಅವನ ಸುತ್ತಲೂ ಜೀವದ ಎಲ್ಲ ಸಾಮರ್ಥ್ಯವನ್ನು ತೊಡಗಿಸಿ ಬಿಡುವ ಕಲೆಗೆ ಅನುಸಂಧಾನ ಅಥವಾ ದಹರ ವಿದ್ಯೆ ಅನ್ನುತ್ತಾರೆ.

ಅನುಸಂಧಾನ ಸಾಧಿಸತೊಡಗಿತೆಂದರೆ ನಾನು ಸ್ಥೂಲ ದೇಹವಿರುವೆ ಎಂಬ ಭಾವನೆ ಕಡಿಮೆ ಆಗಿ ನಾನು ಜೀವನಿರುತ್ತೇನೆ ಅಥವಾ ಸೂಕ್ಷ್ಮದೇಹವಿರುತ್ತೇನೆ ಎಂಬ ಭಾವನೆಯು ಉದಯವಾಗುತ್ತದೆ. ಆದೆ

ರೀತಿ ಜಗತ್ತಿನಲ್ಲಿ ಈಶ್ವರನಿರುತ್ತಾನೆ ಹಾಗೂ ನಾನು ಅವನವನಿರುತ್ತೇನೆ ಎಂಬ ಭಾವನೆಯು ಸೂಕ್ಷ್ಮವಾಗುತ್ತ ಈಶ್ವರನು ನನ್ನಲ್ಲಿರುವನು ಎಂದು ವಿಶ್ವಾಸಪೂರ್ವಕ ಅನ್ನಿಸುತ್ತದೆ. ಆಗ ಸಾಧಕನು "ನಾನು ನಿನ್ನವನಿರುತ್ತೇನೆ ಎನ್ನುತ್ತಾನೆ." ಇದು ಸಾಧನೆಯ ಎರಡನೆಯ ಮೆಟ್ಟಲು.

ಅನುಸಂಧಾನ ಆತ್ಮಗತವಾಗುತ್ತ ಹೋದಂತೆ ಅಥವಾ ರಕ್ತಗತವಾದಂತೆ ಅಥವಾ ಸಹಜವಾಗಿ ನಡೆದಂತೆ ಸಾಧಕನ ಭಾವನೆಯು ಶುದ್ಧವಾಗುತ್ತ ಹೋಗುತ್ತದೆ. ಹಾಗೂ ದಾಸ್ಯ, ಸಖ್ಯ, ವಾತ್ಸಲ್ಯ ಅಥವಾ ಮಾಧುರ್ಯ ಇವುಗಳಲ್ಲಿ ಯಾವದಾದರೊಂದು ಸಂಬಂಧವು ಜೀವದ ಮೇಲೆ ತನ್ನ ಪ್ರಭುತ್ವವನ್ನು ಸಾಧಿಸುತ್ತದೆ. ಅದಕ್ಕನುಸಾರವಾಗಿ ನಾನು ಭಗವಂತನ ದಾಸನಿರುತ್ತೇನೆ ಅಥವಾ ಮಿತ್ರನಿರುತ್ತೇನೆ ಅಥವಾ ಮಗು ಇರುತ್ತೇನೆ ಅಥವಾ ಪ್ರಿಯಾ ಇರುತ್ತೇನೆ ಎಂಬ ಭಾವನೆಯು ಅಖಂಡವಾಗಿ ಪ್ರದೀಪ್ತವಾಗಿದ್ದು ಸಾಧಕನ ಮನಸ್ಸು ಅದರಿಂದ ಮುಗ್ಧವಾಗಿ ಬಿಡುತ್ತದೆ. ಜಾಗೃತ ಅವಸ್ಥೆಯಲ್ಲಿ ಅವನು ಭಗವಂತನ ಆಜ್ಞೆಯಂತೆ ಅಖಂಡ ಚಿಂತನೆ ಮಾಡುತ್ತಾನೆ ಎಂಬುವದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಸ್ವಪ್ನದಲ್ಲಿ ಹಾಗೂ ಸುಷುಪ್ತಿಯಲ್ಲಿಯೂ ಕೂಡ ಅವನ ಚಿಂತನೆಯು ಅಖಂಡವಾಗಿರುತ್ತದೆ, ಇದು ಅನುಸಂಧಾನವ ಎರಡ

ನೇಯ ಅವಸ್ಥೆಯಾಗಿರುತ್ತದೆ. ಸಾಧಕನ ಸೂಕ್ಷ್ಮ ಶರೀರಕ್ಕೆ ಉಪಾಸ್ಯ ದೇವತೆಯ ಆಕಾರ ಬರುತ್ತದೆ ಹಾಗೂ ಹಗಲಿರಳೂ ಸಾಧಕನು ಭಗವಂತನ ಸಹವಾಸ ದಲ್ಲಿ ಮಗ್ನನಾಗಿರುತ್ತಾನೆ. ಈ ಅವಸ್ಥೆಯು ಪ್ರೇಮದ ದೃಷ್ಟಿಯಿಂದ ಅತ್ಯಂತ ಮಧುರವಾಗಿರುತ್ತದೆ. ಸಂತರು ಈ ಅವಸ್ಥೆಯನ್ನು ಆಕಂತ ಅನುಭವಿಸುತ್ತಾರೆ. ಆದ್ದರಿಂದಲೇ ಶ್ರೀಜ್ಞಾನೇಶ್ವರ ಮಹಾರಾಜರಂಥ ಬಾಲಬ್ರಹ್ಮಚಾರಿ ಅಥವಾ ಶ್ರೀ ತುಕಾರಾಮರಂಥ ಮಹಾ ವಿರಾಗಿಯು, ದೊಡ್ಡ ದೊಡ್ಡ ಕವಿಗಳಿಗೆ, ಸಾಹಿತಿಗಳಿಗೆ, ನಾಟಕಕಾರರಿಗೆ ಹಾಗೂ ಪ್ರೇಮ ವಿವಾಹಿತರಿಗೆ ನಿಜವಾದ ಪ್ರೇಮದ ಪಾಠ ಕೊಡುವ ಅಧಿಕಾರ ಹೊಂದಿರುತ್ತಾರೆ. ದಹರ ವಿದ್ಯೆ ತಿಳಿಯು ವದಕ್ಕಾಗಿ ಹಾಗೂ ಕಲಿಯುವದಕ್ಕಾಗಿ ಶ್ರೀ ಏಕನಾಥ ಮಹಾರಾಜರ ಕೆಳಗೆ ಹೇಳಿದ ಎರಡು ಅಭಂಗಗಳನ್ನು ಸಾಧಕರು ಪಾಠ ಮಾಡಬೇಕು.

೧) ಹೃದಯೀಂಚ ಸ್ನಾನ ಹೃದಯೀಂಚ ಧ್ಯಾನ ।
ಹೃದಯೀಂಚ ಭಜನಸರ್ವಕಾಳ ॥
ಹೃದಯೀಂಚ ದಾನ । ಹೃದಯೀಂಚ ಧರ್ಮ
ಹೃದಯೀಂಚ ನೇಮ ಸರ್ವಜೋಡೆ ।
ಹೃದಯೀಂಚ ಕಥಾ ಪುರಾಣ ಶ್ರವಣ ॥
ಹೃದಯೀಂಚ ಚಿಂತನ ಸರ್ವದಾ ।
ಹೃದಯೀಂಚ ದಿಸೆ ಏಕಾ ಜನಾರ್ದನಿ ॥
ಹೃದಯೀಂಚ ಏಕಪಣೆ ಬಿಂಬಲಾಸೆ ।

೨) ಹೃದಯೀಂಚ ದೇವ ಹೃದಯೀಂಚ ಭಕ್ತ ।
ಹೃದಯೀಂಚ ಹೋತ ಪೂಜಾಸರ್ವ ।
ಹೃದಯೀಂಚ ಧ್ಯಾನ । ಹೃದಯೀಂಚೆ ಮನ ॥
ಹೃದಯೀಂತೆ ಆಸನ ದೇವ ಅಸೆ ।
ಹೃದಯೀಂತೆ ಭುಕ್ತಿ ಹೃದಯೀಂತೆ ಮುಕ್ತಿ ॥
ಹೃದಯಿ ಸರ್ವ ಸ್ಥಿತಿ ದೇವ ಜಾಣೆ ।
ಏಕಾ ಜನಾರ್ದನಿ ಹೃದಯೀಂಚ ಪಹಾಲಿ !
ತೇಂ ಸುಖಿ ಝ್ಯಾಲ ಹೃದಯಾಮಾಜಿ ॥

ತಾತ್ಪರ್ಯ:— ೧) ಹೃದಯದಲ್ಲಿಯೇ ಸ್ನಾನ, ಧ್ಯಾನ, ಭಜನ, ದಾನ, ಧರ್ಮ, ನೇಮ, ಕಥಾ, ಪುರಾಣ ಶ್ರವಣ, ಚಿಂತನ ಹಾಗೂ ಹೃದಯದಲ್ಲಿಯೇ ಭಗವಂತನ ದರ್ಶನವಾಗುವದೆಂದು ಏಕನಾಥರು ಹೇಳುತ್ತಾರೆ.

ತಾತ್ಪರ್ಯ :— ೨) ಹೃದಯದಲ್ಲಿಯೇ ದೇವ ಹಾಗೂ ಭಕ್ತ, ಪೂಜೆ, ಧ್ಯಾನ, ಆಸನ, ಭುಕ್ತಿ, ಹಾಗೂ ಸರ್ವಸ್ಥಿತಿಗಳು ಹೃದಯದಲ್ಲಿಯೇ ಇರುತ್ತವೆ. ಯಾರು ಹೃದಯದಲ್ಲಿಯೇ ಭಗವಂತನನ್ನು ನೋಡುವರೋ ಅವರು ತಮ್ಮ ಹೃದಯದಲ್ಲಿ ಪರಮ ಸುಖವನ್ನನುಭವಿಸುವರೆಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.

★ ಪ್ರದೀಪ ಮೂವತ್ತೆಂಟು ★

"ಮಾನಸ ಪೂಜೆ"

ನಮ್ಮ ಜ್ಞಾನಕ್ಕೆ ಜ್ಞಾತಾ ಹಾಗೂ ಜ್ಞೇಯ
ಥವಾ ನಾನು ಹಾಗೂ ಜಗತ್ತು ಎಂಬ ಎರಡು ಅಂಗ
ಳಿರುತ್ತವೆ. ಜ್ಞೇಯ ಒಂದೇ ಆಗಿದ್ದರೂ ಜ್ಞಾತಾನ
ಂದರೆ "ನಾನು" ಎಂಬುದರ ಸೂಕ್ಷ್ಮತೆ ಎಷ್ಟು ಹೆಚ್ಚೊ
ಷ್ಟು ಜ್ಞಾನದ ಅಂತಸ್ತು ಕೂಡ ಉಚ್ಚವಾಗುತ್ತ
ೋಗುತ್ತದೆ. ಉದಾಹರಣೆಗೆ ಚಿಕ್ಕಮಗುವಿಗೆ ಹೊಟ್ಟೆ
ಮಾಡಿಸಿದರೆ ಅದರ ಬಗ್ಗೆ ಅದಕ್ಕೆ ಏನೂ ಅನ್ನಿಸುವದಿಲ್ಲ.
ಮಗುವಿನ ತರುಣ ತಾಯಿಗೆ ಅದು ಅಪಚನದ ಲಕ್ಷಣ
ನ್ನಿಸುವದು. ಆದರೆ ಅದರ ಅಜ್ಜಿಗೆ ಅದು ಹಲ್ಲು
ರುವ ಲಕ್ಷಣವೆಂದು ಅನಿಸುತ್ತದೆ.

ಜ್ಞಾತಾನ ಜ್ಞಾನ ಸಾಮರ್ಥ್ಯ ಬೆಳೆಯುವದಕ್ಕೆ
ಲ್ಪನೆಯು ಬಹಳ ಸಹಾಯ ಮಾಡುತ್ತದೆ. ಜೀವನದ
ಲ್ಲ ಕ್ಷೇತ್ರಗಳಲ್ಲಿ ಮಹತ್ವಪೂರ್ಣವಾಗಿ ವ್ಯವಹರಿಸುವ
ಶಕ್ತಿಯು ಅನೇಕ ಶಾಸ್ತ್ರೀಯ ಶೋಧಗಳನ್ನು
ರ್ಮಾಣ ಮಾಡುತ್ತದೆ ಅನೇಕ ಸಾಹಿತಿಗಳಿಗೆ ನವ
ರ್ಮಿತಿಯ ಆನಂದ ಕೊಡುತ್ತದೆ. ಸ್ವಪ್ನದ ಕಾರಖಾನೆ
ಡೆಸುವ ಈ ಕಲ್ಪನಾಶಕ್ತಿಯನ್ನು ಕೈಯಲ್ಲಿ ತೆಗೆದು
ೊಂಡು ಈಶ್ವರನ ಸಾನ್ನಿಧ್ಯದ ಅನುಭವ ಪಡೆಯು
ನೆ. ನಮ್ಮ ಉಪಾಸ್ಯ ದೇವತೆ ಅಥವಾ ನಮ್ಮ

ಸದ್ಗುರುಗಳು ನಮ್ಮ ಹೃದಯದಲ್ಲಿರುತ್ತಾರೆ ಎಂಬ ಭಾವನೆಯನ್ನು ಮಾಡಿ ಕಲ್ಪನೆಯ ಸಹಾಯದಿಂದ ಯಥಾಸಾಂಗ ಅವರ ಪೂಜೆ ಮಾಡಬೇಕು. ನಮ್ಮ ಇಷ್ಟದೇವತೆಯು ಹೃದಯದಲ್ಲಿ ಪ್ರತ್ಯಕ್ಷವಾಗಿರುತ್ತದೆ, ಜೀವಂತವಾಗಿದೆ, ನಡೆದಾಡುವ, ಮಾತನಾಡುವದಾಗಿರುತ್ತದೆ ಎಂಬ ಮಾತನ್ನು ಮಾತ್ರ ಮರೆಯಬಾರದು. ಮಾನಸಪೂಜೆಯನ್ನು ನಿತ್ಯ ನಿಶ್ಚಯ ಪಡಿಸಿದ ಸಮಯದಲ್ಲಿ ಮಾಡಬೇಕು. ಬೆಳಿಗ್ಗೆ, ಬೆಳಗಿನ ಸ್ನಾನವಾದ ಮೇಲೆ, ಅಥವಾ ರಾತ್ರಿ ಮಲಗುವ ಮೊದಲು ಮಾಡಬೇಕು. ಸ್ವಸ್ಥವಾಗಿ ಶಾಂತವಾಗಿ ಕುಳಿತು ಮಾನಸಪೂಜೆ ಮಾಡಬೇಕು. ಈ ಪೂಜೆಯಲ್ಲಿ ಪೂಜಾದ್ರವ್ಯಗಳನ್ನು ಅತ್ಯುತ್ತಮ ಪ್ರಕಾರದವುಗಳನ್ನು ಕಲ್ಪಿಸಬೇಕು. ಮೊದಲು ದೇವರ ಅಥವಾ ಸದ್ಗುರುಗಳ ಪಾದಗಳನ್ನು ಸ್ವಚ್ಛವಾಗಿ ತೊಳೆದು ಒರೆಸಬೇಕು. ಅವರನ್ನು ಮಣೆಯ ಮೇಲೆ ಕೂಡ್ರಿಸಿ ಉತ್ತಮ ಹಾಲು ಕುಡಿಸಬೇಕು. ಅನಂತರ ಸ್ನಾನದ ವ್ಯವಸ್ಥೆ ಮಾಡಬೇಕು. ದೇವರ ಮೈಗೆ ಸುಗಂಧ ತೈಲವನ್ನು ಹಚ್ಚಬೇಕು. ಸ್ನಾನಕ್ಕೆ ಹಾಕಬೇಕು. ಉತ್ತಮ ಸಾಬಾಣು (ಸೋಪು) ಹಚ್ಚಬೇಕು. ಅವರ ಮೈ ಒರೆಸಿ ಹೊಸ ವಸ್ತ್ರ ಹಾಕಬೇಕು. ಉತ್ತಮ ಅತ್ತರ ಹಚ್ಚಬೇಕು. ಆಮೇಲೆ ಸಿಂಹಾಸನದ ಮೇಲೆ ಕೂಡ್ರಿಸಿ ಗಂಧಪುಷ್ಪ ಏರಿಸಬೇಕು. ಹೂವಿನ ಹಾರ ಹಾಕಬೇಕು. ಉತ್ತಮ ಊದಿನಕಡ್ಡಿ ಹಚ್ಚಬೇಕು.

ನೀರಾಂಜನ ಬೆಳಗಬೇಕು. ಉತ್ತಮ ಸಾತ್ವಿಕ ಹಾಗೂ ಬಿಸಿಬಿಸಿಯಾದ ಅಡಿಗೆಯ ನೈವೇದ್ಯ ತೋರಿಸಿ ಅವರಿಗೆ ನಾವು ಉಣಿಸಬೇಕು. ಊಟವಾದ ಮೇಲೆ ಉತ್ತಮ ತಾಂಬೂಲು ಕೊಡಬೇಕು. ಆರತಿ ಮಾಡಬೇಕು. ಪ್ರಾರ್ಥನೆ ಮಾಡಬೇಕು, ಆಮೇಲೆ ನಿರ್ಮಲ ಹಾಸಿಗೆಯ ಮೇಲೆ ಮಲಗಿಸಬೇಕು. ಸಮಯ ಇದ್ದಾಗ ಪೂಜೆ ಯನ್ನು ಇನ್ನೂ ವಿಸ್ತಾರದಿಂದ ಮಾಡಬೇಕು. ಇನ್ನೂ ಅನೇಕ ಉಪಚಾರಗಳನ್ನು ಮಾಡಬೇಕು. ಸಮಯ ಕಡಿಮೆ ಇದ್ದಾಗ ಕಡಿಮೆ ಉಪಚಾರ ಮಾಡಬೇಕು. ಕೊನೆಗೆ ಪಾದಗಳ ಮೇಲೆ ಮಸ್ತಕವಿಟ್ಟು ಪೂಜೆ ಮುಗಿಸ ಬೇಕು. ಪೂಜೆ ಮಾಡುವಾಗ ದೇವರೊಂದಿಗೆ ಸಂಭಾ ಷಣೆ ಮಾಡಬೇಕು. ಆ ಸಂಭಾಷಣೆಯಲ್ಲಿ ನಾನು ನಿನ್ನವ ನಿರುತ್ತೇನೆ ಎಂಬುದೇ ಮುಖ್ಯ ಭಾವವಾಗಿರಬೇಕು.

★ ಪ್ರದೀಪ ಮೂವತ್ತೊಂಬತ್ತು ★

"ಪ್ರಾರ್ಥನೆ"

ಸಾಮಾನ್ಯ ಮನುಷ್ಯನು "ಈಶ್ವರನು ಇರುತ್ತಾನೆ" ಎಂದು ಅನ್ನುತ್ತಾನೆನೋ ನಿಜ. ಆದರೆ ತನ್ನ ಇರು ವಿಕೆಯ ಬಗ್ಗೆ ಎಷ್ಟು ನಿಃಸಂಶಯ ಭಾವವಿರುವದೋ ಅಷ್ಟು ದೇವರ ವಿಷಯದಲ್ಲಿ ಇರುವದಿಲ್ಲ. ಮಾನಸ ಪೂಜೆಯ ಅಭ್ಯಾಸವನ್ನು ಜಿಗುಟತನದಿಂದ ಮಾಡಿದ್ದಾ ದರೆ ಈಶ್ವರನಿರುತ್ತಾನೆ ಹಾಗೂ ಅವನು ನನ್ನ ಹತ್ತಿರವೇ

ಇರುತ್ತಾನೆ ಎಂಬ ನಿಃಸಂಶಯ ಭಾವವು ಸಾಧಕನ
ಬರುತ್ತದೆ. ನಿಜವಾಗಿಯೂ ನಾವು ನಮ್ಮ ಹತ್ತಿ
ಎಷ್ಟು ಇರುತ್ತೇವೆಯೋ ಅದಕ್ಕಿಂತಲೂ ಹೆಚ್ಚ
ಈಶ್ವರನು ನಮ್ಮ ಹತ್ತಿರವಿರುತ್ತಾನೆ. ಆದರೆ ಪ್ರಯ
ಮಾಡಿಯೂ ಕೂಡ ಅವನ ಅಸ್ತಿತ್ವದ ಅರಿವು ನಮ
ಮನಸ್ಸಿನಲ್ಲಿ ಉಳಿಯುವದಿಲ್ಲ. ಅವನು ಇರುತ್ತಾ
ಎಂಬ ಅರಿವನ್ನು ಸ್ಥಿರಗೊಳಿಸುವದಕ್ಕಾಗಿ ಯಾ
ವಿನಂತಿ ಮಾಡುವದಿರುತ್ತದೆಯೋ ಅದಕ್ಕೆ ಪ್ರಾರ್ಥ
ಎನ್ನುತ್ತಾರೆ ಪ್ರಾರ್ಥನೆ ಎಂದರೆ ಬೇಡುವದೇನೋ
ನಿಜ. ಆದರೆ ಭಿಕ್ಷೆ ಬೇಡುವದಲ್ಲ. ನನ್ನ ವಾಸನೆಗಳನ
ತೃಪ್ತ ಪಡಿಸು. ನನಗೆ ಇದನ್ನು ಕೊಡು. ಅದನ
ಕೊಡು, ಇದು ಬೇಡ, ಅದು ಬೇಡ ಎಂಬ ದೈನ್ಯ
ಯನ್ನು ಭಗವಂತನ ಮುಂದೆ ಒಡ್ಡುವದೆಂದರೆ ಭಿ
ಬೇಡುವದೆಂದರ್ಥ. ಆದರೆ "ನೀನು ನನಗೆ ಬೇಕಾ
ರುವಿ, ನೀನು ನನ್ನ ಹತ್ತಿರವಿರುವಿ ಎಂಬ ಅರಿವು ನ
ಗಾಗಬೇಕು. ನೀನು ಯಾವಾಗಲೂ ನನ್ನನ್ನು ನೋಡ
ತ್ತಿರುವಿ ಎಂಬ ಭಾವನೆಯಾಗಬೇಕು. ಈ ರೀ
ಬೇಡುವದೆಂದರೆ ಭಿಕ್ಷೆ ಬೇಡುವದಲ್ಲ ನಮ್ಮ ಹೃದಯ
ದಲ್ಲಿ ಈಶ್ವರನಿರುತ್ತಾನೆ ಎಂಬ ಅರಿವನ್ನು ಜಾಗೃ
ವಾಗಿಟ್ಟುಕೊಳ್ಳುವದು. ಪ್ರಾರ್ಥನೆಯು ಪ್ರಾಣವಾಗಿರು
ದರಿಂದ ಯಾರ ಅಂತಃಕರಣದಲ್ಲಿ ಈ ಅರಿವು ಅಖಂ
ವಾಗಿ ಜಾಗೃತವಾಗಿರುತ್ತದೋ ಅವನ ಪ್ರಾಣ

ಜೀವನವು ಪ್ರಾರ್ಥನಾಮಯವಾಗುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ದೇಹ ಹೋದಲ್ಲೆಲ್ಲ ಒಳಗಿರುವ "ನಾನು" ಎಂಬುದು ಹೇಗೆ ತಾನಾಗಿಯೇ ಹೋಗುತ್ತದೆಯೋ ಅದೇ ರೀತಿ ನಾನು ಹೋದಲ್ಲೆಲ್ಲ ನನ್ನ ಹೃದಯದಲ್ಲಿಯ ದೇವನೂ ನನ್ನೊಡನೆ ಬರುತ್ತಾನೆ ಎಂದು ಅನ್ನಿಸುವದು ಸಾಧನೆಯ ಮುಂದಿನ ಮೆಟ್ಟಲು. ಇಷ್ಟೇ ಅಲ್ಲದೇ ವಿಚಾರಮಾಡುವದು, ಸಂಕಲ್ಪ ಮಾಡುವದು, ಕಲ್ಪನೆ ಮಾಡುವದು, ಸ್ಮರಣೆ ಮಾಡುವದು, ಇಚ್ಛೆ ಮಾಡುವದು ಮುಂತಾದ ಎಲ್ಲ ಮನೋವ್ಯಾಪಾರಗಳಲ್ಲಿ ನಮ್ಮ "ನಾನು" ಎಂಬುದರ ಜೊತೆಗೆ ಅವನು ಅಂದರೆ ಈಶ್ವರನು ಸಹಜವಾಗಿರುವದು ಅನುಸಂಧಾನ ಸಾಧಿಸಿದ ಮೊದಲನೇ ಲಕ್ಷಣವಾಗಿರುತ್ತದೆ. ಮಾನಸಪೂಜೆ ಹಾಗೂ ಪ್ರಾರ್ಥನೆ ಮಾಡಿ ಇದನ್ನೇ ಸಾಧಿಸಬೇಕಾಗಿದೆ. ಆದ್ದರಿಂದ ಪ್ರಾರ್ಥನೆಯ ಹೊರತಾಗಿ ಪರಮಾರ್ಥವಾಗಲು ಶಕ್ಯವೇ ಇಲ್ಲ

★ ಪ್ರದೀಪ ಸಲವತ್ತು ★

"ನಾಮಸ್ಮರಣೆ"

ನಮ್ಮ ದೇವನು ನಮ್ಮ ಹತ್ತಿರವಿರುತ್ತಾನೆ ಎಂಬ ಅರಿವು ಸ್ಥಿರವಾಗತೊಡಗಿತೆಂದರೆ ನಮ್ಮ ಅಪೂರ್ಣತೆಯ ಅರಿವು ಅಧಿಕಾಧಿಕ ತೀವ್ರತೆಯಿಂದ ಉಂಟಾಗತೊಡಗು

ತ್ತದೆ. ಭಗವಂತನಿಗೆ ಸೇರುವ ಗುಣಗಳು ನಮ್ಮಲ್ಲಿ ರುವದಿಲ್ಲ. ಅವನಿಗೆ ಅಡ್ಡ ಬರುವ ವಾಸನೆಗಳು ನಮ್ಮಲ್ಲಿ ತುಂಬಿಕೊಂಡಿರುತ್ತವೆ ಎಂಬುದನ್ನು ತಿಳಿದು ಸಾಧಕನು ಅತ್ಯಂತ ಅಸ್ವಸ್ಥನಾಗುತ್ತಾನೆ. ಭಗವಂತನಿಗೆ ಯೋಗ್ಯವಾಗುವದಕ್ಕೆ ಏನು ಮಾಡಬೇಕೆಂಬ ವಿಚಾರ ದಿಂದ ಅವನಿಗೆ ಏನೂ ತಿಳಿಯದಂತಾಗುತ್ತದೆ. ಅವನ ಜೀವವು ತಳಮಳಗೊಳ್ಳುವದು. ಅನುತಾಪದಿಂದ ಅವನು "ಭಗವಂತಾ, ನಾನಂತೂ ಹೀಗಿರುವೆನು, ಆದರೂ ನಾನು ನಿನ್ನವನಿರುವೆನು, ನನ್ನ ಮರ್ಯಾದೆ ಯನ್ನು ನೀನೇ ಕಾಯಬೇಕು. ನಾನು ನಿನ್ನನ್ನು ಮರೆ ಯುವದಿಲ್ಲ ಎಂಬುವ ಸಾವಧಾನತೆಯನ್ನು ಹೊಂದುವೆ. ನಿನ್ನ ನೆನಪು ಅಖಂಡವಾಗಿರಬೇಕೆಂದು ನಿನ್ನ ನಾಮ ತೆಗೆದುಕೊಳ್ಳುತ್ತೇನೆ. ನಾನು ಸಂಪೂರ್ಣವಾಗಿ ನಿನ್ನನ್ನೇ ನಂಬಿರುವೆ.

ಈ ಅವಸ್ಥೆಯಲ್ಲಿ ನಿಜವಾಗಿಯೂ ಶರಣಾಗತಿಗೆ ಪ್ರಾರಂಭವಾಗುತ್ತದೆ. ಇದರ ಅರ್ಥವೇನೆಂದರೆ ಮಾನಸ ಪೂಜೆಯಲ್ಲಿ ಮನಸ್ಸನ್ನು ತೊಡಗಿಸುವದರಿಂದ ಹೊರಗಿನ ಸ್ಥೂಲ ದೃಶ್ಯವು ತಪ್ಪುತ್ತದೆನೋ ನಿಜ. ಆದರೆ ಒಳಗಿನ ಸೂಕ್ಷ್ಮ ದೃಶ್ಯವು ಮನಸ್ಸಿಗೆ ಅಂಟಿ ಕೊಳ್ಳುತ್ತದೆ. ಮನಸ್ಸಿನ ಸರ್ವ ಶಕ್ತಿಯು ಒಂದು ಕಲ್ಪನೆಯ ಸುತ್ತಲೂ ಅಂದರೆ ಇಷ್ಟ ದೇವತೆಯ ಸಗುಣ ಪ್ರತಿಮೆಯ ಸುತ್ತಲೂ ಏಕತ್ರವಾಗುತ್ತದೆ.

ಆದರೂ ಮನಸ್ಸಿಗೆ ಇನ್ನೂ ಹೆಚ್ಚಿಗೆ ಸೂಕ್ಷ್ಮವಾಗ ಬೇಕೆಂದು ಅನಿಸುತ್ತದೆ. ಆಗ ಸಾಧಕನು ತನ್ನ ಮನಸ್ಸನ್ನು ಸೂಕ್ಷ್ಮಗೊಳಿಸುವ ಉದ್ದೇಶದಿಂದ ಸಜೀವ ಪ್ರತಿಮೆಯಿಂದ ಕಿತ್ತು ಅದಕ್ಕಿಂತಲೂ ಸೂಕ್ಷ್ಮವಾದ ನಾಮದಲ್ಲಿ ತೊಡಗಿಸುತ್ತಾನೆ. ಪಶ್ಯಂತಿಯಲ್ಲಿಯ ನಾಮವು ಇದೇ ಆಗಿರುತ್ತದೆ. ಇಲ್ಲಿ ನಾಮವು ಅರ್ಥ ರೂಪವಾಗಿರುತ್ತದೆ. ನಮ್ಮ ವಿಚಾರವು ಯಾವ ಸೂಕ್ಷ್ಮನಾದದಲ್ಲಿ ನಡೆಯುತ್ತದೆಯೋ ಅದೇ ನಾದದಲ್ಲಿ ನಾಮವು ನಡೆಯುತ್ತದೆ. ಒಳಗಿನಿಂದಲೇ ಅದನ್ನು ಕೇಳಲು ಬರುತ್ತದೆ ಹಾಗೂ ಅದರೊಂದಿಗೆ ಅವನು ಎಂದರೆ ಭಗವಂತನು ಇರುತ್ತಾನೆ. ನಾನು ಇದ್ದೂ ಇಲ್ಲದಂತಿರುವೆ ಎಂಬ ಸೂಕ್ಷ್ಮವಾದ ಹಾಗೂ ಸ್ಪಷ್ಟ ವಾದ ಅರಿವು ಹೃದಯದಲ್ಲಿ ಇರುತ್ತದೆ. ಪ್ರಪಂಚ ದಲ್ಲಿರುವ ಸಾಧಕರಿಗೆ ವ್ಯವಹಾರವನ್ನು ಮಾಡುತ್ತ ತಮ್ಮ ಅನುಸಂಧಾನವನ್ನು ಕಾಯ್ದುಕೊಳ್ಳುವದು ಕಠಿಣವಾಗುತ್ತದೆ. ವ್ಯವಹಾರದಲ್ಲಿ ಮನಸ್ಸು ತೊಡಗಿ ತೆಂದರೆ ನಾಮದ ವಿಸ್ಮರಣೆ ಆಗುತ್ತದೆ. ನಾಮದ ವಿಸ್ಮರಣೆ ಆಯಿತೆಂದರೆ ಭಗವಂತನ ಅರಿವು ಇಲ್ಲದಂತಾ ಗುತ್ತದೆ. ಇದು ಮನಸ್ಸು ಮೇಲಿನಿಂದ ಕೆಳಗೆ ಜಾರುವ ಪ್ರಕಾರವಾಗಿರುತ್ತದೆ. ಆದರೆ ಯಾವ ಸಾಧಕನಿಗೆ ಅನುಸಂಧಾನದ ರುಚಿ ಹತ್ತುತ್ತದೆಯೋ ಅವನು ತನ್ನ ವ್ಯವಹಾರ ಮುಗಿದಕೂಡಲೆ ನಾಮಸ್ಮರಣೆ

ಮಾಡುತ್ತಾನೆ ಹಾಗೂ ಪೂರ್ಣಾವಸ್ಥೆಗೆ ಬರುತ್ತಾನೆ. ಈ ಅವಸ್ಥೆಯಲ್ಲಿ ಸ್ವಪ್ನದಲ್ಲಿಯೂ ನಾವು ನಡೆದದ್ದು ಅನುಭವಕ್ಕೆ ಬರುತ್ತದೆ. ಪ್ರಪಂಚದಲ್ಲಿಯ ಸಂಕಟಗಳ ಪೂರ್ವ ಸೂಚನೆ ಸಿಗುತ್ತದೆ. ಹೊಸ ಹೊಸ ವಿಚಾರ ಗಳು ಹೊಳೆಯುತ್ತವೆ. ಈಶ್ವರನ ದಿವ್ಯ ಸ್ವರೂಪದ ಅಧಿಕ ಕಲ್ಪನೆಯು ಬರುತ್ತದೆ. ಮನುಷ್ಯರು ತಾವಾ ಗಿಯೇ ವಶವಾಗುತ್ತಾರೆ ಜೀವನದಲ್ಲಿಯ ಅನುಕೂಲ ಪ್ರತಿಕೂಲತೆಯ ಬಗ್ಗೆ ಚಿಂತೆ ಆಗುವದಿಲ್ಲ. ಸ್ವಪ್ನ ದಲ್ಲಾಗಲಿ ಅಥವಾ ಪ್ರತ್ಯಕ್ಷವಾಗಿ ಆಗಲಿ ಸತ್ಪುರುಷರ ದರ್ಶನವಾಗುತ್ತದೆ. ಮಾಧ್ಯಮವಾಗುವ ಅನುಭವ ಬರುತ್ತದೆ. ಅಂದರೆ ಸಾಧಕನ ಮುಖದಿಂದ ತಾನಾ ಗಿಯೇ ದಿವ್ಯ ಜ್ಞಾನ, ದಿವ್ಯ ಕಾವ್ಯ ಅಥವಾ ದಿವ್ಯ ವಾಣಿ ಹೊರ ಬರುತ್ತದೆ. ಎಷ್ಟೋ ವೇಳೆ ಅವನು ಮಾತ ನಾಡಿದ್ದು ನಿಜವಾಗುತ್ತದೆ. ಆದರೆ ಎಲ್ಲರನ್ನೂ ಪ್ರೇಮ ಮಾಡಬೇಕೆಂದು ಅನ್ನಿಸುವ ಅವನ ಅನುಭವವು ಅತ್ಯಂತ ಶ್ರೇಷ್ಠವಾದದ್ದು.

IA.65T

★ ಪ್ರದೀಪ ನಲವತ್ತೊಂದು ★

ನಿರಂತರ ನಾಮಸ್ಮರಣೆ ಮಾಡಬೇಕು

ನಮ್ಮನ್ನು ನಾವು ನಾಮದಲ್ಲಿ ಪೆಟ್ಟಿಗೆ ಮರೆ ಯುತ್ತ ಹೋಗುವದೇ ಪರಮಾರ್ಥ ಸಾಧನೆಯಾಗಿರು ತ್ತದೆ ಎಂದು ಸಾಧನೆಯ ಮತ್ತೊಂದು ವ್ಯಾಖ್ಯೆ ಮಾಡ

ಬಹುದು. ಮರೆಯುವದು ಒಂದು ದೊಡ್ಡ ಕಲೆಯಾಗಿ ರುತ್ತದೆ. ಈ ಕಲೆಯಿಂದಲೇ ನಿತ್ಯದ ವ್ಯಾವಹಾರಿಕ ಜೀವನವು ಸುಖಮಯವಾಗುತ್ತದೆ. ಅದೇ ರೀತಿ ಪಾರಮಾರ್ಥಿಕ ಜೀವನವು ಫಲದಾಯಿ ಆಗುತ್ತದೆ. ಪ್ರೇಮದಲ್ಲಿ ಪ್ರಿಯ ವಸ್ತುವಿನ ಚಿಂತನೆಯಲ್ಲಿ ಸಹಜವಾಗಿ ತನ್ನ ವಿಸ್ಮರಣೆಯಾಗುತ್ತದೆ. ಪ್ರಿಯ ವಸ್ತುಗಳ ಪ್ರಕಾರ ಎರಡು—ಒಂದು ಪಂಚ ಮಹಾಭೂತಾತ್ಮಕ, ದೃಶ್ಯ, ಜಡ, ವಸ್ತು ಹಾಗೂ ಎರಡನೇಯದಾಗಿ ಕಲ್ಪನಾತ್ಮಕ ಅದೃಶ್ಯ ಸೂಕ್ಷ್ಮವಸ್ತು ದೃಶ್ಯ ವಸ್ತುಗಳ ಮೇಲಿನ ಪ್ರೇಮಕ್ಕೆ ಜಡದೇಹದ ಬಂಧನ ಉಂಟಾಗುತ್ತದೆ ಹಾಗೂ ಸ್ಥಲಕಾಲದ ಕ್ಷೇತ್ರದಲ್ಲಿಯೇ ವ್ಯವಹರಿಸಬೇಕಾಗುತ್ತದೆ. ಅಂದರೆ ಆ ಪ್ರೇಮದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಮರೆಯಲು ಶಕ್ಯವಾಗುವದಿಲ್ಲ ಅದೃಶ್ಯ ವಸ್ತುವಿನ ಮೇಲಿನ ಪ್ರೇಮಕ್ಕೆ ಸ್ಥಲಕಾಲದ ಬಂಧನ ಇರುವದಿಲ್ಲ. ಇಷ್ಟೇ ಅಲ್ಲದೇ ಅದು ಸೂಕ್ಷ್ಮದ ಸೂಕ್ಷ್ಮದೊಂದಿಗೆ ಹಾಗೂ ಸೂಕ್ಷ್ಮ ವ್ಯವಹಾರ ಇರುವದರಿಂದ ಸಾಧಕನ ಸೂಕ್ಷ್ಮ ಶರೀರವು ಸಂಪೂರ್ಣ ಪ್ರೇಮ ವಸ್ತುವಿನ ಆಕಾರ ತೆಗೆದುಕೊಳ್ಳತೊಡಗುತ್ತದೆ. ಅದರೊಂದಿಗೆ ತಾದಾತ್ಮ್ಯವಾಗುತ್ತದೆ. ಅದ್ದರಿಂದ ಜಾಗೃತಿ. ಸ್ವಪ್ನ ಹಾಗೂ ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ಭಗವಂತನ ಸ್ಮೃತಿಯು ಅಖಂಡವಾಗಿ ಉಳಿಯುವದೆಂದರೆ ಸಾಧನೆಯು ಮೂರನೆ ಮೆಟ್ಟಲಿನ ಮೇಲೆ ಆರೂಢ

ವಾಗುವದೆಂದು ತಿಳಿಯಬೇಕು. ಇದು ಅನುಸಂಧಾನ ಪಕ್ವವಾದದ್ದರ ಲಕ್ಷಣವಾಗಿರುತ್ತದೆ. ಈ ಅವಸ್ಥೆಯಲ್ಲಿ ಭಗವಂತನು ನಮ್ಮ ಒಡೆಯನಿರುತ್ತಾನೆ. ಅವನು ನಮ್ಮ ಪ್ರಿಯ ಮಿತ್ರನಿರುತ್ತಾನೆ. ಅವನು ನಮ್ಮ ತಾಯಿಯಾಗಿ ರುತ್ತಾನೆ. ಅವನು ನಮ್ಮ ಪತಿಯಾಗಿರುತ್ತಾನೆ ಅಥವಾ ಅವನು ನಮ್ಮ ಗುರು ಆಗಿರುತ್ತಾನೆ ಎಂಬ ಮನುಷ್ಯರಲ್ಲಿಯ ಅನ್ಯೋನ್ಯ ನಿಕಟ ಸಂಬಂಧಗಳಲ್ಲಿ ಒಂದರ ಉತ್ಕರ್ಷವಾಗಿ ಸಾಧಕನು ಉಪಾಸ್ಯ ದೇವತೆಯು ಬಹಳ ಹತ್ತಿರ ಹೋಗುತ್ತಾನೆ. ಸ್ಮೃತಿ, ಲಕ್ಷ್ಯ, ಕಲ್ಪನೆ, ವಿಚಾರ, ಸಂಕಲ್ಪ ಮುಂತಾದ ಜಾಗೃತ ಅವಸ್ಥೆಯ ಎಲ್ಲ ಮನೋವ್ಯಾಪಾರಗಳು ಭಗವಂತನ ಸ್ಮರಣೆಯಿಂದ ತುಂಬಿ ಹೋಗುತ್ತವೆ. ಭಗವಂತನು ನಮ್ಮ ಜೊತೆಗೆ ಇರುತ್ತಾನೆ ಎಂಬ ಧೃಡವಾದ ಭಾವನೆಯಾಗುತ್ತದೆ ಸ್ವಪ್ನದಲ್ಲಿ ಅವನೊಡನೆಯೇ ಎಲ್ಲ ವ್ಯವಹಾರಗಳಾಗುತ್ತವೆ. ಇಷ್ಟೇ ಅಲ್ಲದೆ ಗಾಢ ನಿದ್ರೆಯಲ್ಲಿಯೂ ಕೂಡ ಭಗವಂತನ ಅರಿವು ಸ್ಥಿರವಾಗಿ ಉಳಿಯುತ್ತದೆ. ಸುಷುಪ್ತಿಯಲ್ಲಿ ಸ್ಪಷ್ಟವಾಗಿ ನಾಮವು ನಡೆಯುತ್ತಿರುತ್ತದೆ. ಈ ರೀತಿಯಾಗಿ ಯಾರ ನಾಮವು ಅತ್ಯಂತ ಆಳದವರೆಗೆ ಹೋಗುತ್ತದೆಯೋ ಅವನು ಗಾಢನಿದ್ರೆಯಲ್ಲಿರುವಾಗಲೂ ಅವನ ಎದೆಗೆ ಕಿವಿ ಹಚ್ಚಿದರೆ ಅಲ್ಲಿ ನಾಮದ ಶಾಂತ ಧ್ವನಿಯು ಕೇಳುತ್ತದೆ. ಸಾಮಾನ್ಯವಾಗಿ ಯಾವಾಗ ನಾವು ಸಾಧನಗಾಗಿ ಅಥವಾ ನಾಮ

ತೆಗೆದುಕೊಳ್ಳುವದಕ್ಕೆ ಕೂಡುತ್ತೇವೆಯೋ ಹಾಗೂ ಮನಸ್ಸನ್ನು ಶಾಂತಗೊಳಿಸುವ ಪ್ರಯತ್ನ ಮಾಡುತ್ತೇವೆಯೋ ಆಗ ಕೆಳಗಿನ ಮನಸ್ಸು ತನ್ನೊಳಗಿನ ಮಾಲಿನ್ಯವನ್ನು ಹೊರಗೆ ಹಾಕಲು ಪ್ರಾರಂಭಿಸುತ್ತದೆ ಇದರಿಂದ ನಮ್ಮ ಮನಸ್ಸು ಅತ್ಯಂತ ಮಲಿನವಾಗಿಬಿಡುತ್ತದೆ. ಆದರೆ ನಾವು ದೀಪಹಚ್ಚಿ ಭಗವಂತನ ಜೊತೆಗೆ ಒಳಗೆ ಇಳಿದರೆ ಆ ಮಾಲಿನ್ಯವು ತಾನಾಗಿಯೇ ಕಡಿಮೆಯಾಗುತ್ತದೆ. ಅನಂತರ ಅಂತರ್ಮನಸ್ಸು ಹಾಗೂ ಜಾಗ್ರತ ಅವಸ್ಥೆಯ ಮನಸ್ಸು ಇವುಗಳಲ್ಲಿಯ ವಿರೋಧವು ಹೋಗಿಬಿಡುತ್ತದೆ. ಒಳಗೆ ಎಲ್ಲ ಕಡೆಗೂ ಭಗವಂತನ ಪ್ರಸನ್ನವಾದ ನೀಲ ಪ್ರಕಾಶವು ಬೀಳುತ್ತದೆ ಹಾಗೂ ಅನುಗ್ರಹದ ಚಿಹ್ನ ಕಾಣಿಸುತ್ತದೆ. ಸಾಧಕನ ಸೂಕ್ಷ್ಮ ದೇಹವು ಇನ್ನಷ್ಟು ಸೂಕ್ಷ್ಮವಾಗುತ್ತದೆ ಹಾಗೂ ಅದರಲ್ಲಿ ಆಕಾಶ ತತ್ವವೇ ಮುಖ್ಯವಾಗಿ ಉಳಿಯುತ್ತದೆ. ಆದ್ದರಿಂದ ಅದು ವ್ಯಾಪಕವಾಗುತ್ತದೆ. ಜಗತ್ತಿನಲ್ಲಿಯ ವಿಚಾರಗಳ ಹಾಗೂ ಜ್ಞಾನದ ಸೂಕ್ಷ್ಮ ಪ್ರವಾಹವು ಅದರಲ್ಲಿಂದಲೇ ಹೊರಗೆ ಬರತೊಡಗುತ್ತದೆ. ಇಂಥ ಅವನಿಗೆ ಕಾವ್ಯ ಸ್ಫುರಣವಾಗುವದರಲ್ಲಿ ಆಶ್ಚರ್ಯವೇನಿಲ್ಲ. ಅವನಲ್ಲಿ ವಿಶೇಷ ಸಾಮರ್ಥ್ಯ ಬರುತ್ತದೆ. ಎರಡನೆಯವರ ಮನಸ್ಸಿನಲ್ಲಿಯದು ತಿಳಿಯುವದು. ನಮಗೆ ಬೇಕಾದ್ದನ್ನು ಕೇವಲ ಸಂಕಲ್ಪದಿಂದಲೇ ಎರಡನೇಯವರಿಗೆ ಮಾಡಲಿಕ್ಕೆ ಹಚ್ಚುವದು. ಜಗತ್ತಿನಲ್ಲಿ

ಉಂಟಾಗುವ ಅನರ್ಥಗಳ ಸೂಚನೆಯು ಮೊದಲೇ ಗೊತ್ತಾಗುವದು ಎರಡನೇಯವರ ದುಃಖವನ್ನು ನಾವು ತೆಗೆದುಕೊಂಡು ಅನುಭವಿಸುವದು ಮುಂತಾದವು ಗಳನ್ನು ಸಹಜವಾಗಿ ಮಾಡಲು ಬರುತ್ತದೆ. ಆದರೆ ಎಲ್ಲವನ್ನೂ ಭಗವಂತನೇ ಅಥವಾ ಸದ್ಗುರುಗಳೇ ಮಾಡುತ್ತಾರೆ ಎಂಬ ನಿಜವಾದ ಭಾವನೆ ಇದ್ದರೂ ಸಾತ್ವಿಕ "ಅಹಂ"ಭಾವವು ಶೇಷ ಉಳಿಯುತ್ತದೆ. ನಾನು ಹಾಗೂ ನೀನು ಅಂದರೆ ಭಕ್ತ ಹಾಗೂ ಭಗವಂತ ಇಬ್ಬರೂ ಇಪ್ಪತ್ನಾಲ್ಕು ಗಂಟೆಯೂ ಎದುರು ಬದರು ಇರುತ್ತಾರೆ. ಇಷ್ಟೇ ಅಲ್ಲದೇ ಎಲ್ಲಿ ನೋಡಿದಲ್ಲಿ ತಮ್ಮ ಉಪಾಸ್ಯ ದೈವತ ತುಂಬಿಕೊಂಡದ್ದೇ ಕಣ್ಣಿಗೆ ಬೀಳು ತ್ತದೆ. ಶ್ರೀ ಏಕನಾಥರ ಮುಂದಿನ ಪದದಲ್ಲಿ ಸಗುಣೋ ಪಾಸನೆಯ ಪೂರ್ಣಾವಸ್ಥೆಯು ಅತ್ಯಂತ ಸುಂದರ ವರ್ಣನೆ ಮಾಡಿದ್ದು ಕಂಡುಬರುತ್ತದೆ.

ಗುರುಕೃಪಾ ಅಂಜನ ಪಾಯೊ ಮೇರೆ ಭಾಯಿ ।
ರಾಮಬಿನಾ ಕವ್ರ ದೇಖತ ನಾಯಿ ॥
ಅಂದರ ರಾಮ ಬಾಹರ ರಾಮ ।
ಜಹಾ ದೇಖೊ ವಹಾ ರಾಮಹಿ ರಾಮ ॥
ಜಾಗತ ರಾಮ ಸೋವತರಾಮ ।
ಸಪನೇಮೆ ದೇಖೊ ತೋ ರಾಮ ಹಿ ರಾಮ ॥
ಏಕಾಜನಾರ್ದನಿ ಭಾವಹಿನೀಕಾ ।
ಜೋ ದೇಖೋ ವಹ ರಾಮಸರೀಕಾ ॥

ಅರ್ಥ :— ಶ್ರೀ ಗುರುಗಳ ಕೃಪೆ ಎಂಬ ಅಂಜನ ಪ್ರಾಪ್ತ ಮಾಡಿಕೊಂಡರೆ ಅದರಿಂದ ಶ್ರೀರಾಮನ ಹೊರ ತಾಗಿ ಏನೂ ಕಾಣುವದೇ ಇಲ್ಲ. ಒಳಗೆ, ಹೊರಗೆ, ಎಲ್ಲಿ ನೋಡಿದಲ್ಲಿ ರಾಮನೇ ರಾಮ. ಜಾಗೃತದಲ್ಲಿ, ನಿದ್ರೆಯಲ್ಲಿ, ಸ್ವಪ್ನದಲ್ಲಿಯೂ ರಾಮನೇ. ಏಕನಾಥರು ಹೇಳುವದೇನೆಂದರೆ ಭಾವ ಶುದ್ಧವಾಗಿದ್ದರೆ ನೋಡಿ ದ್ದೆಲ್ಲ ರಾಮರೂಪವಾಗಿಯೇ ಕಾಣುವದು.

ಭಗವಂತನೊಂದಿಗೆ ಎಷ್ಟು ತಾದಾತ್ಮ್ಯವಾಗುವ ದೆಂದರೆ ಕೆಲವೊಮ್ಮೆ ಭಕ್ತನು ತಾನೇ ಭಗವಂತನೆಂದು ತಿಳಿದು ತನ್ನ ಪೂಜೆಯನ್ನೇ ಮಾಡಿಕೊಳುತ್ತಾನೆ. ತಾನೇ ನೈವೇದ್ಯ ತಿನ್ನುತ್ತಾನೆ. ದೃಶ್ಯದ ಭೂಮಿಕೆಯ ಮೇಲೆ ಇದು ಸೋಽಹಂ ದ ಅನುಭವವೇ ಆಗಿರುತ್ತದೆ. ಗೋಪಿಕಾ ಸ್ತ್ರೀಯರಿಗೆ ಈ ಅವಸ್ಥೆ ಸಾಧಿಸಿತ್ತೆಂದು ಪರಮಾರ್ಥದಲ್ಲಿ ಅವರ ಸ್ಥಾನವನ್ನು ಶ್ರೇಷ್ಠವೆಂದು ತಿಳಿಯುತ್ತಾರೆ. ದಿವ್ಯ ಸೌಂದರ್ಯದಿಂದ ಆಕರ್ಷಿತ ವಾದ ಅವರ ಮನಸ್ಸು ಸಂಪೂರ್ಣ ಕೃಷ್ಣಮಯವಾ ಗಿತ್ತು. ಇದೇ ನಿಜವಾದ ಉಪಾಸನೆ.

★ ಪ್ರದೀಪ ನಲವತ್ತೆರಡು ★

ಅಖಂಡ ಬೆಳಗುತಿದೆ ಜ್ಯೋತಿ !

ಅತ್ಯಂತ ಸಾವಧಾನತೆಯಿಂದ ಕಳಕಳಿಯಿಂದ ಹಾಗೂ ಜಿಗಟುತನದಿಂದ ಸಾಧನೆ ಮಾಡಿದ್ದಾದರೆ

ಮಾತ್ರ ಸಾಧಕನಿಗೆ ಅನುಸಂಧಾನವು ಸಾಧಿಸುತ್ತದೆ. ಭಗವಂತನ ಸಾನಿಧ್ಯದಲ್ಲಿದ್ದು ನಾಮದಲ್ಲಿ ತನ್ಮಯನಾದ ಭಕ್ತನು ಪ್ರೇಮದಿಂದ ಉನ್ಮತ್ತನಾಗುತ್ತಾನೆ. ಅವನ ಮನಸ್ಸಿಗೆ ಸ್ವಸ್ಥತೆ ಪ್ರಾಪ್ತವಾಗುತ್ತದೆ, ಆದರೆ ಈ ಸ್ವಸ್ಥತೆಯು ಬಹಳ ಕಾಲ ಉಳಿಯುವದಿಲ್ಲ. ಈ ವರೆಗೆ ಮಾಡಿದ ಸಾಧನೆಯಿಂದ ಅವನ ಅಂತಃಕರಣವು ದಣಿದು ಹೋಗುತ್ತದೆ. ಹಾಗೂ ಅವನ ಪ್ರೇಮದ ಉತ್ಕಟತೆಯು ಕಡಿಮೆಯಾಗುತ್ತದೆ. ಏನು ಮಾಡಿದರೂ ಮೊದಲಿನ ಭಾವ ಬರುವದಿಲ್ಲ. ಆಗ ಅವನಿಗೆ ಅತ್ಯಂತ ನಿರಾಶೆ ಎನಿಸುತ್ತದೆ. ತನ್ನ ಇಚ್ಛೆಯಿಂದಲೇ ಈ ವರೆಗೆ ಯಾವ ಸಗುಣದ ಉಪಾಸನೆಯನ್ನು ಮಾಡಿದನೋ ಅದೆಲ್ಲ ಕೇವಲ ಕಲ್ಪನೆಯ ಆಟವಿರುತ್ತದೆ. ಈ ಎಲ್ಲ ಧಡಪಡದಿಂದ ತನಗೆ ಏನೂ ಪ್ರಾಪ್ತವಾಗಲಿಲ್ಲ ಎಂದು ಅನ್ನಿಸಿ ಸಾಧಕನ ಶ್ರದ್ಧೆಯು ಡೋಲಾಯಮಾನವಾಗುತ್ತದೆ. ಆತ್ಮವಿಶ್ವಾಸವು ಕ್ಷೀಣವಾಗುತ್ತದೆ. ಸಾಧನೆಯಲ್ಲಿಯ ಉತ್ಸಾಹವು ಲೋಪವಾಗುತ್ತದೆ. ಏನು ಮಾಡಬೇಕೆಂಬುದೇ ತಿಳಿಯುವದಿಲ್ಲ. ಕೇವಲ ನಾಮದ ಆಧಾರ ಒಂದೇ ಶೇಷ ಉಳಿಯುತ್ತದೆ. ಅದರ ಸಹಾಯದಿಂದಲೇ ಸಾಧಕನು ಹೇಗಾದರೂ ಬದುಕಿರುತ್ತಾನೆ. ಇದೆಲ್ಲ ಆತ್ಮಸೂರ್ಯ ಉದಯವಾಗುವವರ ಮುಂಚಿನ ಕತ್ತಲೆಯಾಗಿರುತ್ತದೆ. ಏಕೆಂದರೆ ಈ ಅವಸ್ಥೆಯಿಂದಲೇ ಸಂಪೂರ್ಣ ಶರಣಾಗತಿಯು ನಿರ್ಮಾಣ

ವಾಗುತ್ತದೆ. ಸಾಧಕನ ಮನಸ್ಸು ಸ್ವಾನಂದ ಸಾಗರ
ದಲ್ಲಿ ತನ್ನನ್ನು ತಾನೇ ನುಗಿಸಿಕೊಳ್ಳುತ್ತದೆ. ದೃಶ್ಯದ
ತೆರದೆಯು ಹರಿಯುತ್ತದೆ. ಅಜ್ಞಾನದ ಆವರಣ ಕರಗಿ
ಹೋಗುತ್ತದೆ. "ನಾನು" ಹಾಗೂ "ನೀನು" ಎರಡೂ
ಶಾಂತವಾಗುತ್ತವೆ. ಹಾಗೂ ಕೇವಲ ಸ್ವಾನಂದಮಯ
ಸ್ವಸ್ವರೂಪವು ಪ್ರಗಟವಾಗುತ್ತದೆ. ಇದನ್ನೇ ಆತ್ಮ
ಸಾಕ್ಷಾತ್ಕಾರ ಅಥವಾ ಆತ್ಮದರ್ಶನವೆನ್ನುತ್ತಾರೆ. ಆತ್ಮ
ಸಾಕ್ಷಾತ್ಕಾರಿ ಪುರುಷನ ವರ್ಣನೆಯನ್ನು ಮಾಡುತ್ತ
ಉಪನಿಷತ್ತುಗಳು ಮೂರು ಮಾರ್ಮಿಕ ಶಬ್ದಗಳನ್ನು
ಉಪಯೋಗಿಸುತ್ತವೆ. ಅವು ಯಾವವೆಂದರೆ (ಒಂದು)
"ಆತ್ಮರತ" ಅಂದರೆ ಆತ್ಮದಲ್ಲಿ ರಮಮಾಣವಾಗುವ
ವನು (ಎರಡು) ಆತ್ಮಕ್ರೀಡ ಅಂದರೆ ಆತ್ಮದೊಂದಿಗೆ
ಆಡುವವನು ಹಾಗೂ (ಮೂರು) ಆತ್ಮ ಮಿಥುನ
ಅಂದರೆ ಆತ್ಮನ ಸಹವಾಸದಲ್ಲಿರುವವನು. ಈ
ಮೂರು ಶಬ್ದಗಳಲ್ಲಿ ಆತ್ಮಜ್ಞಾನಿ ಪುರುಷನ ಸಂಪೂರ್ಣ
ಲಕ್ಷಣಗಳು ಕಂಡು ಬರುತ್ತವೆ. ದೇಹಬುದ್ಧಿಯ
"ನಾನು" ಎಂಬುದು ಸತ್ತಿರುವದರಿಂದ ಸಾಕ್ಷಾತ್ಕಾರಿ
ಪ್ರರುಷನ ಅಂತಃಕರಣದಲ್ಲಿ ಸ್ವಾನಂದದ ಸ್ರೋತವು
ಹರಿಯುತೊಡಗುತ್ತದೆ. ಅಲ್ಲದೇ ಅದು ಅಖಂಡವಾಗಿ
ಹರಿಯುತೊಡಗುತ್ತದೆ. ಆದ್ದರಿಂದ ಯಾವಾಗಲೂ,
ಎಲ್ಲಿಯೂ ಹಾಗೂ ಯಾವುದರಿಂದಲೂ ಬಾಡದೇ ಇರುವ
ಹಾಗೂ ಒಂದೇ ಪಾತಳಿಯಲ್ಲಿ ಅಖಂಡವಾಗಿರುವ

ಪ್ರಸನ್ನತೆಯು ಸ್ವಾನಂದ ಸಾಮ್ರಾಜ್ಯ ಅನುಭವಿಸುವ ಪುರುಷನ ಹೊರಗಿನಿಂದ ಕಾಣುವ ಲಕ್ಷಣವಾಗಿರುತ್ತದೆ. ಅವನು ಜ್ಞಾನಿಯಾಗಿರುತ್ತಾನೆ. ಆದರೆ ಅವನ ಜ್ಞಾನ ಹಾಗೂ ಜ್ಞಾನ ಸಾಧನೆ ಬೇರೆಯಾಗಿರುತ್ತದೆ. ಅವನ ಜ್ಞಾನದ ಭೂಮಿಕೆಯಲ್ಲಿ ಜ್ಞಾತಾ ಹಾಗೂ ಜ್ಞೇಯು ವೆಂಬ ದ್ವೈತ ಉಳಿಯುವದಿಲ್ಲ. ಜ್ಞೇಯದೊಂದಿಗೆ ತದ್ರೂಪವಾಗಿ ಸಂಪೂರ್ಣ ಹಾಗೂ ನಿಃಸಂಶಯ ಜ್ಞಾನ ಕೊಡುವ ಪ್ರತಿಭೆಯು ಅವನ ಸಹಜ ಸ್ವಭಾವವಾಗುತ್ತದೆ. ಸ್ವಾನಂದರೂಪ "ನಾನು" ಎಂಬುದು ಎಲ್ಲ ಕಡೆಗೂ ತುಂಬಿಕೊಂಡಿದೆ ಎಂದು ಅವನು ಪ್ರತ್ಯಕ್ಷ ಅನುಭವ ಪಡೆಯುತ್ತಾನೆ. ಅಂದರೆ ಅವನ ಎಲ್ಲ ವಾಸನೆಗಳು ಸುಟ್ಟು ಅವನಿಗೆ ಸಂಪೂರ್ಣ ಶಾಂತಿ ಹಾಗೂ ಸಮಾಧಾನ ಪ್ರಾಪ್ತವಾಗುತ್ತದೆ. ಅಜ್ಞಾನದ ಮೂರು ಅವಸ್ಥೆಗಳು ಲೋಪವಾಗುತ್ತವೆ ಹಾಗೂ ಸ್ವಾನಂದ ಪ್ರಕಾಶದ ಒಂದೇ ಅವಸ್ಥೆಯು ಉಳಿಯುತ್ತದೆ. ಯಾವಾಗಲೂ ಜಾಗೃತವಾಗಿದ್ದು ಆತ್ಮಜ್ಯೋತಿಯು ಅಖಂಡವಾಗಿ ಹೊತ್ತಿದಂತಿರುತ್ತದೆ. ಪರಾವಾಣಿಯಲ್ಲಿಯು ದಿವ್ಯನಾದ ಅಂದರೆ ಅನಾಹತ ಓಂಕಾರ ಅಖಂಡವಾಗಿ ನಡೆದಿರುತ್ತದೆ.

★ ಪ್ರದೀಪ ನಲವತ್ತೂರು ★

"ಸಂತ ಜೀವನ"

ಸ್ವಾನಂದದ ಸಾಕ್ಷಾತ್ಕಾರವು ಒಂದು ದೊಡ್ಡ ದಿವ್ಯ

ಹಾಗೂ ಕ್ರಾಂತಿಕಾರಕ ಅನುಭವ ಇರುವದರಿಂದ ಸಾಕ್ಷಾತ್ಕಾರೀ ಪುರುಷ ಕೆಲವು ಸಮಯ ದೇಹಭಾವವನ್ನು ಕಳೆದುಕೊಂಡ ಸ್ಥಿತಿಯಲ್ಲಿರುವನು. ಈ ಉನ್ಮನಿ ಅವಸ್ಥೆ ಅರಗಿತೆಂದರೆ ಮತ್ತೆ ಅವನು ವ್ಯಾವಹಾರಿಕ ಜಗತ್ತಿನಲ್ಲಿ ವ್ಯವಹರಿಸತೊಡಗುವನು. ಸ್ವಾರ್ಥದಿಂದ ತುಂಬಿಹೋದ ದೇಹಬುದ್ಧಿಯ "ನಾನು" ಎಂಬುದು ಸುಟ್ಟುಹೋದದ್ದರಿಂದ ಅವನು ಅತ್ಯಂತ ಸ್ವಾರ್ಥರಹಿತನಾಗುತ್ತಾನೆ. ಎಲ್ಲ ಜೀವಗಳನ್ನು ಆತ್ಮರೂಪದಿಂದ ವ್ಯಾಪಿಸಿರುವೆನೆಂಬ ಜೀವಂತ ಅನುಭವವಿದ್ದದ್ದರಿಂದ ಅವನು ಎಲ್ಲರ ಮೇಲೆ ನಿಜವಾದ ಪ್ರೇಮ ಮಾಡುತ್ತಾನೆ. ಈ ರೀತಿಯ ನಿಸ್ವಾರ್ಥ ಪ್ರೇಮದ ಸ್ವಭಾವವುಳ್ಳವನಿರುವದರಿಂದಲೇ ಅವನು ಹಗಲು ರಾತ್ರಿ ಅಜ್ಞಾನಿ ಜನರ ಅಜ್ಞಾನವನ್ನು ದೂರ ಮಾಡುವದಕ್ಕಾಗಿ ಹಗಲಿರುಳೂ ಪ್ರಯತ್ನ ಮಾಡುತ್ತಿರುತ್ತಾನೆ. ಸ್ವಾನಂದ ಸಾಮ್ರಾಜ್ಯವನ್ನು ಸಂಪಾದಿಸಿ ಅನುಭವಿಸುವ ಸಾಮರ್ಥ್ಯವಿದ್ದರೂ ಅಸಂಖ್ಯ ಜನರು ಭ್ರಮದಿಂದ ಕೇವಲ ಅಜ್ಞಾನಪೂರ್ಣ ಸ್ವಾರ್ಥದ ಬೆನ್ನು ಹತ್ತಿ ತಮ್ಮ ಆಯುಷ್ಯವನ್ನು ವ್ಯರ್ಥಗೊಳಿಸಿಕೊಳ್ಳುತ್ತಾರೆ. ಇದನ್ನು ಅವನಿಗೆ ನೋಡಲಾಗುವದಿಲ್ಲ. ಇದಕ್ಕಾಗಿ ಅವನಿಗೆ ಬಹಳ ಚಿಂತೆಯಾಗುತ್ತದೆ. ಅವನಿಗೆ ಸುಮ್ಮನೆ ಕೂಡ್ರಲಾಗುವದಿಲ್ಲ. ತನ್ನಲ್ಲಿರುವ ಶಕ್ತಿ ಹಾಗೂ ಯುಕ್ತಿಗಳ ಅಧಿಕಾಧಿಕ ಉಪಯೋಗ ಮಾಡಿ ಪ್ರಾಪ್ತ ಪರಿಸ್ಥಿತಿಯಲ್ಲಿ ಎಷ್ಟು

ಜನರನ್ನು ಆತ್ಮಜ್ಞಾನದ ಕಡೆಗೆ ಹಚ್ಚಲು ಸಾಧ್ಯವೋ ಅಷ್ಟು ಹಚ್ಚುತ್ತಿರುತ್ತಾನೆ. ಇದೇ ಅವನ ಪರೋಪಕಾರ. ಮನುಷ್ಯನನ್ನು ಜ್ಞಾನದ ಕೆಳಗಿನ ಭೂಮಿಕೆಯಿಂದ ಮೇಲಿನ ಅಂತಸ್ತಿಗೆ ಎತ್ತುವದೆಂದರೆ ಅವನ ಉದ್ಧಾರ ಮಾಡಿದಂತೆ. ಈ ದೃಷ್ಟಿಯಿಂದ ಜಗತ್ತಿನ ಉದ್ಧಾರ ವನ್ನು ಕೇವಲ ಸಂತರೇ ಮಾಡುತ್ತಾರೆ. ಸ್ವಾನಂದ ಯೋಗ ಹಾಗೂ ಜಗತ್ತಿನ ಉದ್ಧಾರ ಇವೆರಡೂ ಸತ್ಪುರುಷರ ಜೀವನದ ಎರಡು ಅವಿಭಾಜ್ಯ ಅಂಗಗಳಾಗಿರುತ್ತವೆ.

★ ಪ್ರದೀಪ ನಲವತ್ನಾಲ್ಕು ★
"ಉಪಸಂಹಾರ"

ಜ್ಞಾನಿಯೇ ಆಗಿರಲಿ ಅಥವಾ ಅಜ್ಞಾನಿಯೇ ಆಗಿರಲಿ, ಆಸ್ತಿಕನೇ ಆಗಿರಲಿ ಅಥವಾ ನಾಸ್ತಿಕನೇ ಆಗಿರಲಿ, ಮನುಷ್ಯನೇ ಆಗಿರಲಿ ಅಥವಾ ದೇವತೆಯೇ ಆಗಿರಲಿ, ಪ್ರತಿಯೊಬ್ಬನಿಗೆ ಸಮಾಧಾನ ಬೇಕು. ಆದರೆ ಅದು ಎಂತಹದೆಂದರೆ, ಅಖಂಡವಾಗಿರುವದು, ಸರ್ವತ್ರ ಇರುವದು, ಬೇಕಾದಾಗ ಉಪಯೋಗ ಬೀಳುವಂತಹದು. ಏಕರಸವಾದದ್ದು ಹಾಗೂ ನಮ್ಮ ಸ್ವಾಧೀನವಾಗಿರುವಂತಹದಾಗಿರಬೇಕು. ಇಂಥ ಸಮಾಧಾನಕ್ಕೆ ಸಚ್ಚಿದಾನಂದ ಅಥವಾ ಈಶ್ವರವೆನ್ನುತ್ತಾರೆ. ಈ ಸ್ವಾನಂದವು ಪ್ರತಿಯೊಬ್ಬನ ಅಂತರಂಗದಲ್ಲಿ ಅವನ ಹೃದಯದಲ್ಲಿ ಆತ್ಮರೂಪದಿಂದ. ನಿಜವಾದ "ನಾನು" ಎಂಬುದರ

ರೂಪದಿಂದ ಇರುತ್ತದೆ. ಆದರೆ ಮನುಷ್ಯನು ಭ್ರಮೆ
ದಿಂದ ಅದನ್ನು ಹೊರಗೆ ಹುಡುಕುತ್ತಿರುತ್ತಾನೆ. ನಾನು
ದೇಹವೇ ಇರುತ್ತೇನೆ ಎಂಬ ಸುಳ್ಳು ಶ್ರದ್ಧೆಯಿಂದ ನಡೆ
ಯುತ್ತಾನೆ. ಇದರಿಂದಲೇ ಸ್ವಾರ್ಥದ ಜನ್ಮವಾಗು
ತ್ತದೆ. ಈ ಸ್ವಾರ್ಥದಿಂದ ಮನುಷ್ಯನು ತನ್ನನ್ನು ಹಾಗೂ
ಜಗತ್ತನ್ನು ದುಃಖಿಯನ್ನಾಗಿ ಮಾಡಿಕೊಳ್ಳುತ್ತಾನೆ.
ಜಗತ್ತಿನಲ್ಲಿಯ ದುಃಖ ಕಡಿಮೆಯಾಗಲು ಸ್ವಾರ್ಥ
ಕಡಿಮೆಯಾಗಬೇಕಾಗುತ್ತದೆ ಹಾಗೂ ಸ್ವಾರ್ಥ ಕಡಿಮೆ
ಯಾಗಬೇಕಾದರೆ ದೇಹಬುದ್ಧಿ ಕ್ಷೀಣವಾಗಬೇಕು. ದೇಹ
ಬುದ್ಧಿಯು ಕ್ಷೀಣವಾಗಬೇಕಾದರೆ ಸಧ್ಯದ ಮನಸ್ಸಿನ
ಸ್ವರೂಪವೇ ಪರಿವರ್ತನೆ ಆಗಿ ಅದನ್ನು ದಿವ್ಯ, ವಿಶಾಲ
ಹಾಗೂ ಜ್ಞಾನಿಯನ್ನಾಗಿ ಮಾಡುವ ಅಭ್ಯಾಸಕ್ಕೆ ಪರ
ಮಾರ್ಥ ಸಾಧನೆ ಎನ್ನುತ್ತಾರೆ. ಜ್ಞಾನ ಸಂಪಾದನೆ
ಆಗದ ಹೊರತು ಮನುಷ್ಯನಿಗೆ ಸುಮ್ಮನೇ ಕೂಡ್ರ
ಲಾಗುವದಿಲ್ಲ ಎಂಬುದು ಸತ್ಯವಿದ್ದರೂ "ಸ್ವ" ದ
ಅಂದರೆ ನಿಜವಾದ "ನಾನು" ಎಂಬುದರ ಜ್ಞಾನವಾಗದ
ಹೊರತು ಅವನಿಗೆ ಸಮಾಧಾನ ಪ್ರಾಪ್ತವಾಗುವದಿಲ್ಲ
ವೆಂಬುದು ಅಷ್ಟೇ ನಿಜವಾದದ್ದು. ಆತ್ಮ ಜ್ಞಾನದಿಂದ
ಸುಳ್ಳಾದ "ನಾನು" ಇಲ್ಲದಂತಾಗುತ್ತದೆ. ಅಂದರೆ
ಕೇವಲ ಅಜ್ಞಾನದ ಲೋಪವಾಗುತ್ತದೆ. ವ್ಯಕ್ತಿ ಹಾಗೂ
ಜಗತ್ತು ಹಾಗೇ ಉಳಿಯುತ್ತದೆ, ಆದರೆ ಕೇವಲ ತನ್ನ
ಹಾಗೂ ಜಗತ್ತಿನ ಹೊಸ ಅರ್ಥ ತಿಳಿಯುತ್ತದೆ. ಈ

ಅರ್ಥವು ಎಷ್ಟು ಪ್ರಭಾವಶಾಲಿಯಾಗಿರುವದೆಂದರೆ ಮನುಷ್ಯನ ಮನಸ್ಸಿಗೆ ಒಮ್ಮೆಲೇ ಶಾಂತಿ ಸಿಗುತ್ತದೆ. ಯಾವದೇ ಪರಿಸ್ಥಿತಿಯಲ್ಲಿ ಅದರ ಪ್ರಭಾವವು ವ್ಯಕ್ತವಾಗದೇ ಇರಲಾರದು. ಪ್ರತಿಯೊಬ್ಬ ಮನುಷ್ಯನ ಸಮಾಜ ಜೀವನದ ಕ್ಷೇತ್ರವು ಸೀಮಿತವಾಗಿರುತ್ತದೆ. ಆದರೆ ಆ ಕ್ಷೇತ್ರದ ಮೇಲೆ ಆ ಮನುಷ್ಯನ ಹೆಚ್ಚು ಕಡಿಮೆ ಪ್ರಭಾವ ಬೀಳದ ಹೊರತು ಜೀವನ ಸಾಗುವದೇ ಇಲ್ಲ. ಅಂದರೆ ಆತ್ಮಶಾಂತಿಯನ್ನು ಪಡೆದುಕೊಂಡ ವ್ಯಕ್ತಿಯ ಪ್ರಭಾವದಿಂದ ಅವನ ಸುತ್ತಲೂ ಇರುವ ಜನರೂ ಕೂಡ ಸ್ವಲ್ಪಾದರೂ ಸಮಾಧಾನವನ್ನು ಅನುಭವಿಸುವರೆಂಬುದರಲ್ಲಿ ಸಂಶಯವಿಲ್ಲ ಸ್ವಾನಂದದ ಸಾಧನ ಮಾರ್ಗವು ಯಾರಿಗಾದರೂ ಸಹಜವಾಗಿ ಸಾಧಿಸುವಂತಹದಿರುತ್ತದೆ. ಯಾವ ಶ್ರದ್ಧೆಯಿಂದ ನಾವು ಮೆಟ್ರಿಕ್ ಪರೀಕ್ಷೆಯ ಅಭ್ಯಾಸ ಮಾಡುತ್ತೇವೆಯೋ ಅಷ್ಟು ಶ್ರದ್ಧೆಯನ್ನು ನಾಮದ ಮೇಲಿಟ್ಟು ಸಾಧನೆ ಮಾಡಿದರೂ ಬಹುಬೇಗನೆ ಮನಸ್ಸಿನಲ್ಲಿ ಪರಿವರ್ತನೆಯಾಗುತ್ತದೆ. ಹಾಗೂ ಭಗವಂತನ ಪ್ರೇಮದ ಅನುಭವ ಬರುತ್ತದೆ. ವಾಚಕರಿಗೆ ಈ ರೀತಿಯಾದ ಅನುಭವ ಬರಬೇಕೆಂದು ಶ್ರೀ ಸದ್ಗುರು ಚರಣಗಳಲ್ಲಿ ಪ್ರಾರ್ಥಿಸುತ್ತೇನೆ.

— ಶ್ರೀ ರಾಮ ಸಮರ್ಥ —

ಮುಂದಿನ ಪ್ರಕಾಶನಗಳು

೧) **ಶ್ರೀ ಸದ್ಗುರು ಬ್ರಹ್ಮಚೈತನ್ಯ ಗೋಂದಾವಲೇಕರ ಮಹಾರಾಜರ ಚರಿತ್ರೆ ಹಾಗೂ ವಾಙ್ಮಯ ಎರಡು ಭಾಗಗಳಲ್ಲಿ.**

೨) **"ಪ್ರವಚನಗಳು"**

ಶ್ರೀ ಸದ್ಗುರು ಬ್ರಹ್ಮಚೈತನ್ಯ ಗೋಂದಾವಲೇಕರ ಮಹಾರಾಜರ ೩೬೫ ಪ್ರವಚನಗಳ ಸಂಗ್ರಹ.

ಈ ಮೇಲಿನ ಪುಸ್ತಕಗಳ ಪ್ರಕಾಶನಕ್ಕಾಗಿ ಸೇವೆ ಸಲ್ಲಿಸುವವರು ಪ್ರಕಾಶಕರೊಂದಿಗೆ ಸಂಪರ್ಕಿಸಬೇಕು. ಈ ಮೂರೂ ಪುಸ್ತಕ ಬೇಕಾದವರು ಮುಂಗಡವಾಗಿ ೫೦ ರೂ. ತುಂಬಿದರೆ ಅವರ ಪುಸ್ತಕ ಕಾಯ್ದಿರಿಸಲಾಗುವದು.

ಪ್ರಕಾಶಕರು
ಚೈತನ್ಯ ಪ್ರಕಾಶನ
ಚೈತನ್ಯಾಶ್ರಮ ಹೆಬ್ಬಳ್ಳಿ
580 117

— ಶ್ರೀ ರಾಮ ಸಮರ್ಥ —

"ಪರಮಾರ್ಥ ಪ್ರದೀಪ"

ಶ್ರೀ ಹಾಗೂ ಶ್ರೀಮತಿ ಪಿ. ಎಸ್. ಕುಲಕರ್ಣಿ ಅವರು ದಿ. ಶ್ರೀಮತಿ ಹಾಗೂ ಶ್ರೀ ಶಂಕರ, ನಾರಾಯಣ ಕುಲಕರ್ಣಿ ಇವರ ಸ್ಮರಣಾರ್ಥ ಈ ಪುಸ್ತಕ ಪ್ರಕಾಶನ ಸೇವೆಯನ್ನು ಶ್ರೀ ಮಹಾರಾಜರ ಪಾದಪದ್ಮಗಳಲ್ಲಿ ಸಮರ್ಪಿಸಿರುತ್ತಾರೆ. ಶ್ರೀ ಮಹಾರಾಜರು ದಿವಂಗತರಿಗೆ ಆತ್ಮಶಾಂತಿಯನ್ನೀಯಲಿ ಹಾಗೂ ಶ್ರೀ ಕುಲಕರ್ಣಿ ಕುಟುಂಬದವರಿಗೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಪ್ರಕಾಶಕರು
ಚೈತನ್ಯ ಪ್ರಕಾಶನ
ಚೈತನ್ಯಾಶ್ರಮ, ಹೆಬ್ಬಳ್ಳಿ